ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 29 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 251 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಹುಣಸೂರಿನ ಹೃದಯಭಾಗದಲ್ಲಿ ಹಾಡಹಗಲೇ

ಚಿನ್ನಾಭರಣ ಮಳಿಗೆ ದರೋಡೆ

ಸಿಬ್ಬಂದಿಗೆ ರಿವಾಲ್ವರ್ ತೋರಿಸಿ ಕೋಟ್ಯಾಂತರ ರೂ. ಮೌಲ್ಯದ ಆಭರಣ ಲೂಟಿ

• ದರೋಡೆ ನಂತರ ಏರ್ ಫೈಯರ್ ಮಾಡಿ ಬೈಕ್‌ಗಳಲ್ಲಿ ಪರಾರಿಯಾದ ದರೋಡೆಕೋರರು • ದುಷ್ಕರ್ಮಿಗಳ ಪತ್ತೆಗಾಗಿ ನಾಲ್ಕು ವಿಶೇಷ ತಂಡ ರಚನೆ



ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ದರೋಡೆಕೋರರು.

ಹುಣಸೂರು, ಡಿ.28(ಆರ್‌ಕೆ, ಕೆಕೆ)– ಹುಣಸೂರಿನ ಹೃದಯ ಭಾಗದಲ್ಲಿರುವ ಚಿನ್ನಾಭರಣ ಅಂಗಡಿಗೆ ಹಾಡಹಗಲೇ ನುಗ್ಗಿದ ದರೋಡೆಕೋರರು ಸಿಬ್ಬಂದಿಗೆ ರಿವಾಲ್ವರ್ ತೋರಿಸಿ, ಕೋಟ್ಯಾಂತರ ರೂ. ಮೌಲ್ಯದ ಚಿನ್ನಾಭರಣ ದರೋಡೆ ಮಾಡಿರುವ ಘಟನೆ ನಡೆದಿದೆ.

ಹುಣಸೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು ಬೈಪಾಸ್ ರಸ್ತೆಯಲ್ಲಿರುವ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಮಳಿಗೆಗೆ ಭಾನುವಾರ ಮಧ್ಯಾಹ್ನ 2.10ರ ಸುಮಾರಿನಲ್ಲಿ ಮೊದಲು ಇಬ್ಬರು ಯುವಕರು ಹೆಲ್ಮೆಟ್ ಧರಿಸಿ ಗ್ರಾಹಕರ ಸೋಗಿನಲ್ಲಿ ಪ್ರವೇಶಿಸಿದ್ದಾರೆ. ಅವರ ಹಿಂದೆಯೇ ಬಂದ ಮತ್ತೆ ಮೂವರು ದುಷ್ಕರ್ಮಿಗಳು ಮುಖಕ್ಕೆ ಮಾಸ್ಕ್ ಹಾಕಿಕೊಂಡು, ರಿವಾಲ್ವರ್ ತೋರಿಸಿ ಸಿಬ್ಬಂದಿಯನ್ನು ಬೆದರಿಸಲಾಗಿ ಮಳಿಗೆಯಲ್ಲಿದ್ದ ಐವರು ಮಹಿಳೆಯರೂ ಸೇರಿದಂತೆ 7 ಸಿಬ್ಬಂದಿಯೂ ತಮ್ಮ ಕೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾರೆ.


ದುಷ್ಕರ್ಮಿಗಳಲ್ಲಿ ಓರ್ವ ಎರಡೂ ಕೈಗಳಲ್ಲೂ ರಿವಾಲ್ವರ್ ಗುರಿ ಇಟ್ಟು ನಿಂತರೆ, ಉಳಿದವರು ಮಳಿಗೆಯ ಸಿಬ್ಬಂದಿಯಿಂದಲೇ ಚಿನ್ನಾಭರಣಗಳನ್ನು ಎತ್ತಿಸಿಕೊಂಡು ಚೀಲಕ್ಕೆ ತುಂಬಿ ಹೊರ ನಡೆದಿದ್ದಾರೆ. ಇದೆಲ್ಲವೂ ಕೇವಲ 6 ನಿಮಿಷಗಳಲ್ಲಿ ನಡೆದು ಮುಗಿದಿದೆ. ಮಳಿಗೆಯಿಂದ ಸುಮಾರು 5 ರಿಂದ 6 ಕೆ.ಜಿ. ಚಿನ್ನಾಭರಣ ಮತ್ತು ವಜ್ರದ ಒಡವೆ



ದರೋಡೆ ನಡೆದ ಚಿನ್ನಾಭರಣ ಮಳಿಗೆ

ಗಳನ್ನು ದೋಚಲಾಗಿದೆ ಎಂದು ತಿಳಿದು ಬಂದಿದೆ.

ದುಷ್ಕರ್ಮಿಗಳು 2 ಬೈಕ್‌ಗಳಲ್ಲಿ ಬಂದಿದ್ದು, ಸುಮಾರು 2 ಕಿ.ಮೀ. ದೂರದಲ್ಲಿ ಕಾರನ್ನು ನಿಲ್ಲಿಸಿದ್ದಾರೆ. ದರೋಡೆಯ ನಂತರ ದುಷ್ಕರ್ಮಿಗಳು ಹೊರ ಬಂದ ಮೇಲೆ ಸಾರ್ವಜನಿಕರು ಕಲ್ಲು ತೂರಿದರು ಎಂದು ಹೇಳಲಾಗಿದ್ದು, ಈ ವೇಳೆ ದರೋಡೆಕೋರರು ಗಾಳಿಯಲ್ಲಿ ಗುಂಡು ಹಾರಿಸಿ ಬೈಕ್‌ಗಳಲ್ಲಿ ಮಡಿಕೇರಿ ಕಡೆಗೆ ಪರಾರಿಯಾಗಿದ್ದಾರೆ. ಅದೇ ವೇಳೆಗೆ ಊಟಕ್ಕೆ ಹೋಗಿದ್ದ ಮಳಿಗೆಯ ■ 6ನೇ ಪುಟಕ್ಕೆ



ಮಳಿಗೆ ಸಿಬ್ಬಂದಿಗೆ ರಿವಾಲ್ವರ್ ತೋರಿಸುತ್ತಿರುವ ದುಷ್ಕರ್ಮಿ.

ಇಂದು ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ದರೋಡೆ ನಡೆದಿದ್ದು, ಮಳಿಗೆಯ ಮ್ಯಾನೇಜರ್ ಊಟಕ್ಕೆ ಹೋಗಿದ್ದ ಸಂದರ್ಭದಲ್ಲಿ ಎರಡು ಬೈಕ್‌ಗಳಲ್ಲಿ ಬಂದ ಐವರು ದರೋಡೆಕೋರರು ಮಳಿಗೆಗೆ ನುಗ್ಗಿ ಸಿಬ್ಬಂದಿಗೆ ರಿವಾಲ್ವರ್ ತೋರಿಸಿ ಹೆದರಿಸಿ, ಚಿನ್ನಾಭರಣ ದರೋಡೆ ಮಾಡಿದ್ದಾರೆ. ಅವೆಲ್ಲವೂ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಮಳಿಗೆಯಲ್ಲಿ 5 ರಿಂದ 6 ಕೆ.ಜಿ. ಚಿನ್ನಾಭರಣ ಹಾಗೂ ವಜ್ರದ ಒಡವೆಗಳು ದರೋಡೆಯಾಗಿವೆ ಎಂದು ಹೇಳಲಾಗುತ್ತಿದೆ. ಆದರೆ ಮಳಿಗೆಯಲ್ಲಿ ಎಷ್ಟು ಸ್ಟಾಕ್ ಇತ್ತು ಎಂಬುದನ್ನು ಪರಿಶೀಲಿಸಿದ ನಂತರ ನಿಖರವಾಗಿ ಗೊತ್ತಾಗಲಿದೆ. ದರೋಡೆಕೋರರು ಹೊರಗೆ ಹೋಗುವಾಗ ಯಾರೋ ಕಲ್ಲು ತೂರಿದರು ಎನ್ನಲಾಗಿದ್ದು, ಆ ವೇಳೆ ಅವರು ಏರ್ ಫೈಯರ್ ಮಾಡಿ ಬೈಕ್‌ಗಳಲ್ಲಿ ಪರಾರಿಯಾಗಿದ್ದಾರೆ. ಈ ಮಳಿಗೆಗೆ ನಾಲ್ವರು ಪಾಲುದಾರರಿದ್ದಾರೆಂದು ತಿಳಿದು ಬಂದಿದೆ.

- ಬೋರಲಿಂಗಯ್ಯ,
ದಕ್ಷಿಣ ವಲಯ ಡಿಐಜಿ

ಮೈಸೂರಲ್ಲಿ ಅಪರಾಧ ತಡೆ–ಪತ್ತೆ, ಪೊಲೀಸ್ ಗಸ್ತಿಗೆ ಡ್ರೋನ್ ಬಳಕೆ



ಪೊಲೀಸ್ ಇಲಾಖೆಗೆ ನೀಡಲಾಗಿರುವ ಡ್ರೋನ್‌ಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪರಿಶೀಲಿಸುತ್ತಿರುವುದು.

ಮೈಸೂರು, ಡಿ. 28 (ಆರ್‌ಕೆ)– ಕೇವಲ ಟಾರ್ಚ್, ಲಾಠಿ ಹಿಡಿದು ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರು, ಅಭಿವೃದ್ಧಿಗೊಂಡಿರುವ ಆತ್ಯಾಧುನಿಕ ತಂತ್ರಜ್ಞಾನ ಬಳಸಲು ಇದೀಗ ಮುಂದಾಗಿದ್ದಾರೆ.

ಕರ್ನಾಟಕದಲ್ಲಿ ಹಳೆ ಪದ್ಧತಿಯ ಶೂ, ಯೂನಿಫಾರಂ, ಹ್ಯಾಟ್ ಧರಿಸುವುದು, ದೊಡ್ಡ ಆಕಾರದ ರೈಫಲ್ ಬಳಸುವುದು ಇದೀಗ ಪೊಲೀಸ್ ಇಲಾಖೆಯಲ್ಲಿ ಕಡಿಮೆಯಾಗುತ್ತಾ ಬಂದಿದ್ದು, ವ್ಯವಸ್ಥೆಯಲ್ಲಿಯು ನಿರೀಕ್ಷಿತ ಸುಧಾರಣೆ ಕಂಡು ಬರುತ್ತಿದೆ. ಕೇವಲ ಲಾಠಿ ಹಿಡಿದು ಗಸ್ತು ತಿರುಗುತ್ತಿದ್ದ ಪೊಲೀಸರು ಈಗ ಡ್ರೋನ್ ಕ್ಯಾಮರಾ ಮೂಲಕ ಕರ್ತವ್ಯ ನಿರ್ವಹಿಸುವಂತಾಗಿದೆ.

ಇತ್ತೀಚೆಗಷ್ಟೇ ರಾಜ್ಯ ಪೊಲೀಸ್ ಇಲಾಖೆಯು ಮೈಸೂರು ನಗರ ಪೊಲೀಸ್ ಘಟಕಕ್ಕೆ ನಾಲ್ಕು ಡ್ರೋನ್ ಕ್ಯಾಮರಾಗಳನ್ನು ಒದಗಿಸಿದ್ದು, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ನಜರ್‌ಬಾದ್‌ನ ತಮ್ಮ ಕಛೇರಿ ಆವರಣದಲ್ಲಿ ಕ್ಯಾಮರಾಗಳ ಕಾರ್ಯಾಚರಣೆ ಬಗ್ಗೆ ತಿಳಿದುಕೊಂಡು ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಅಪರಾಧ ತಡೆ–ಪತ್ತೆ ಕಾರ್ಯಾಚರಣೆ, ಕಾನೂನು–ಸುವ್ಯವಸ್ಥೆ ಕಾಪಾಡುವುದು, ಜನ ಜಂಗುಳಿ ನಿರ್ವಹಣೆಯಂತಹ ಸಂದರ್ಭಗಳಲ್ಲಿ ಡ್ರೋನ್ ಕ್ಯಾಮರಾ ಬಳಸುವಂತೆ ಸಲಹೆ ನೀಡಿದರು.

ಕೆಲವು ಜನಸಂದಣಿ ಪ್ರದೇಶಗಳಲ್ಲಿ ವಾಹನ ತಲುಪಲು ಸಾಧ್ಯವಾಗದೇ ನಿಯಂತ್ರಣ ಕಷ್ಟ ಸಾಧ್ಯವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಡ್ರೋನ್ ಕ್ಯಾಮರಾವನ್ನು ಎತ್ತರಕ್ಕೆ ಹಾರಿಸಿ ಘಟನಾವಳಿಗಳ ದೃಶ್ಯಗಳನ್ನು ಸೆರೆ ಹಿಡಿದು ಸಂಭವಿಸಬಹುದಾದ ಅಹಿತಕರ ಘಟನೆಗಳನ್ನು ತಪ್ಪಿಸಲು ಈ ವ್ಯವಸ್ಥೆಯಿಂದ ಸಾಧ್ಯವಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರವು ಡ್ರೋನ್ ಕ್ಯಾಮರಾ ■ 6ನೇ ಪುಟಕ್ಕೆ

ಒಂದೇ ಸ್ಥಳದಲ್ಲಿ 48 ಗಂಟೆಯಲ್ಲೇ ಎರಡು ಹುಲಿ ಸೆರೆ

ನಾಗರಹೊಳೆ ಕಾಡಂಚಿನ ಡಿಬಿ ಕುಪ್ಪೆ ವಲಯದಲ್ಲಿ ಹುಲಿಗಳ ಸೆರೆ



ಭಾನುವಾರ ಬೆಳಗ್ಗೆ ವಾಕ್ ಥ್ರೂ ಕೇಜ್‌ಗೆ ಬಿದ್ದ ಹೆಣ್ಣು ಹುಲಿಗೆ ಚಿಕಿತ್ಸೆ ನೀಡುತ್ತಿರುವ ಅರಣ್ಯ ಸಿಬ್ಬಂದಿ ತಂಡ.

ಮೈಸೂರು, ಡಿ.28(ಎಂಟಿವೈ)– ಕಾಡಂಚಿನ ಗ್ರಾಮಗಳಲ್ಲಿ ಜಾನುವಾರುಗಳ ಮೇಲೆ ದಾಳಿ ಮಾಡಿ ಹತ್ಯೆ ಮಾಡಿ ಗ್ರಾಮಸ್ಥರನ್ನು ಭಯಬೀತರನ್ನಾಗಿಸಿದ್ದ ಜೋಡಿ ಹುಲಿಯನ್ನು ಒಂದೇ ಸ್ಥಳದಲ್ಲಿ 48 ಗಂಟೆ ಅಂತರದಲ್ಲಿ ಸುರಕ್ಷಿತವಾಗಿ ಸೆರೆ ಹಿಡಿಯುವ ಮೂಲಕ ನಾಗರಹೊಳೆ ಅರಣ್ಯಾಧಿಕಾರಿಗಳ ತಂಡ ಪ್ರಶಂಸೆಗೆ ಪಾತ್ರವಾಗಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ವಲಯದ ಕಾಡಂಚಿನ ಗ್ರಾಮಗಳಾದ ಅಗಸನಹುಂಡಿ, ಸಿದ್ದಪುರ, ಕಲ್ಲಟ್ಟಿ, ಜಿ.ಎಂ.ಹಳ್ಳಿ, ಮೇಟಿಕುಪ್ಪೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕಳೆದ 3–4 ತಿಂಗಳಿಂದ ಜಾನುವಾರುಗಳನ್ನು ಬಲಿ ಪಡೆಯುತ್ತಿದ್ದ ಜೋಡಿ ಹುಲಿಗಳನ್ನು ಸೆರೆ ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿ ಪ್ರತಿಭಟನೆ ಮಾಡಿದ್ದರು. ಕಳೆದ 15 ದಿನಗಳಿಂದ ದನದ ಕೊಟ್ಟಿಗೆಗೆ ನುಗ್ಗಿ ಜಾನುವಾರುಗಳನ್ನು ಬಲಿ ಪಡೆಯುತ್ತಿದ್ದ ಹುಲಿ ಉಪಟಳ ಹೆಚ್ಚಾದ ಕಾರಣ ತೀವ್ರ ಸ್ವರೂಪ ಕಾರ್ಯಾಚರಣೆ ಆರಂಭಿಸಿದ ಅಧಿಕಾರಿಗಳು ಕೇವಲ 48 ಗಂಟೆಯಲ್ಲೇ ಜೋಡಿ ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

6 ವರ್ಷದ ಗಂಡು ಹುಲಿ: ಶುಕ್ರವಾರ ಅಗಸನಪುರದ ಕಾಡಂಚಿನ ಹೊಲದಲ್ಲಿ ಹಸುವೊಂದನ್ನು ಬಲಿ ಪಡೆದ ಹುಲಿ ಸೆರೆಗೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರು. ಹುಲಿ ಸೆರೆಗಾಗಿ ■ 6ನೇ ಪುಟಕ್ಕೆ

ಬೆಂಗಳೂರಿನಲ್ಲಿ ಮೂರು ಡ್ರಗ್ಸ್ ಫ್ಯಾಕ್ಟರಿ ಪತ್ತೆ

ಮಹಾರಾಷ್ಟ್ರ ಪೊಲೀಸರಿಂದ 55.88 ಕೋಟಿ ರೂ. ಬೆಲೆಯ ಎಂಡಿಎಂಎ ವಶ



ವಶಪಡಿಸಿಕೊಂಡ ಎಂಡಿಎಂಎ ಡ್ರಗ್ಸ್

ಬೆಂಗಳೂರು, ಡಿ.28– ಸಾಂಸ್ಕೃತಿಕ ನಗರಿ ಮೈಸೂರಿನ ನಂತರ ರಾಜಧಾನಿ ಬೆಂಗಳೂರು ಹಾಗೂ ಸುತ್ತಮುತ್ತ ಸಕ್ರಿಯವಾಗಿದ್ದ ಮಾದಕ ವಸ್ತು ತಯಾರಿಕಾ ಜಾಲವನ್ನು ಮಹಾರಾಷ್ಟ್ರ ಪೊಲೀಸರು ಪತ್ತೆ ಮಾಡಿ, 55.88 ಕೋಟಿ ರೂ. ಮೌಲ್ಯದ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಮಹಾರಾಷ್ಟ್ರ ಎಎನ್‌ಟಿಎಫ್ ಪೊಲೀಸರು ಮುಂಬಯಿನಲ್ಲಿ ಇತ್ತೀಚೆಗೆ 1.50 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿ, ಅಬ್ದುಲ್ಲಾ ಖಾದರ್ ಶೇಕ್ ಎಂಬಾತನನ್ನು ಬಂಧಿಸಿದ್ದರು. ಆರೋಪಿ ಅಬ್ದುಲ್ಲಾ ಖಾದರ್ ಶೇಕ್, ಪೊಲೀಸರ ವಿಚಾರಣೆ ವೇಳೆ ಮಹತ್ವದ ವಿಚಾರ ಬಾಯ್ಬಿಟ್ಟಿದ್ದ. ಈ ಮಾಹಿತಿ ಆಧರಿಸಿ ಮಹಾರಾಷ್ಟ್ರ ಪೊಲೀಸರು, ಬೆಳಗಾವಿಯ ಪ್ರಶಾಂತ್ ಯಲ್ಲಪ್ಪ ಪಾಟೀಲ್ ಎಂಬಾತನನ್ನು ಬಂಧಿಸಿದ್ದರು. ಪ್ರಶಾಂತ್ ಯಲ್ಲಪ್ಪ ಪಾಟೀಲ್ ನೀಡಿದ ಮಾಹಿತಿ ಆಧರಿಸಿ, ಬೆಂಗಳೂರಿನ ಬಾಗಲೂರು ಪೊಲೀಸ್ ಠಾಣೆ ವ್ಯಾಪ್ತಿಯ ಸ್ಪಂದನಾ ಲೇಔಟ್ ಕಾಲೋನಿ, ಆವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಯರಪ್ಪನ ಹಳ್ಳಿ ಮನೆ, ಕೊತ್ತನೂರು ಠಾಣೆ ವ್ಯಾಪ್ತಿಯ ಎನ್.ಜಿ.ಗೊಲ್ಲಹಳ್ಳಿಯ ಆರ್.ಜೆ. ಈವೆಂಟ್ ಕಾರ್ಖಾನೆ ಸೇರಿ ಮೂರು ಕಡೆ ಮಾದಕ ವಸ್ತು ತಯಾರಿಕಾ ಘಟಕಗಳ ಮೇಲೆ ದಾಳಿ ಮಾಡಿದ್ದಾರೆ. ಪ್ರಕರಣ ಸಂಬಂಧ ರಾಜಸ್ತಾನದ ಸೂರಜ್ ರಮೇಶ್ ಯಾದವ್, ■ 6ನೇ ಪುಟಕ್ಕೆ

ಕರ್ನಾಟದ ಮೇಲೆ ಕೇರಳ ಸವಾರಿ

ಕೋಗಿಲು ಲೇಔಟ್‌ನಲ್ಲಿ ಮನೆ, ಶೆಡ್‌ಗಳ ನೆಲಸಮ ವಿಚಾರಕ್ಕೆ ಕೆ.ಸಿ ವೇಣುಗೋಪಾಲ್ ಎಂಟ್ರಿ



ಬೆಂಗಳೂರು, ಡಿ.28– ಯಲಹಂಕದ ಕೋಗಿಲು ಲೇಔಟ್‌ನಲ್ಲಿ 200 ಮನೆ, ಶೆಡ್‌ಗಳ ನೆಲಸಮ ಪ್ರಕರಣದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಎಂಟ್ರಿಯಾಗಿದ್ದು, ಕೇರಳ ವಿಧಾನಸಭಾ ಚುನಾವಣಾ ಭೀತಿಯಿಂದ ಸಿಎಂ, ಡಿಸಿಎಂ ಮೇಲೆ ಒತ್ತಡ ಹೇರಿದ್ದಾರಾ ಎಂಬ ಪ್ರಶ್ನೆಯೂ ಮೂಡಿದೆ.

ಕೋಗಿಲು ಲೇಔಟ್ ನಲ್ಲಿ ಅಕ್ರಮ ಮನೆ, ಶೆಡ್‌ಗಳ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಕ್ಸ್ ಖಾತೆಯಲ್ಲಿ ಕೆ.ಸಿ ವೇಣುಗೋಪಾಲ್ ಪೋಸ್ಟ್ ಹಂಚಿಕೊಂಡಿದ್ದಾರೆ. ತೆರವು ಬಗ್ಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಜೊತೆಗೆ ಚರ್ಚಿಸಿದ್ದೇನೆ. ಮಾನವೀಯತೆ, ಎಚ್ಚರಿಕೆಯಿಂದ, ಸೂಕ್ಷ್ಮತೆಯಿಂದ ಮತ್ತು ಸಹಾನುಭೂತಿಯಿಂದ ಕ್ರಮ ಕೈಗೊಳ್ಳಬೇಕಾಗಿತ್ತು ಎಂಬ ಎಐಸಿಸಿಯ ಗಂಭೀರ ಕಳವಳವನ್ನು ಅವರು ತಿಳಿಸಿದರು. ಸಂತ್ರಸ್ತ ಕುಟುಂಬಗಳೊಂದಿಗೆ ವೈಯಕ್ತಿಕವಾಗಿ ಸಂವಹನ ನಡೆಸುವುದಾಗಿ, ಕುಂದುಕೊರತೆಗಳನ್ನು ಪರಿಹರಿಸುವುದಾಗಿ, ಪುನರ್ವಸತಿ ಮತ್ತು



ಕೋಗಿಲು ಲೇಔಟ್‌ನ ಅಕ್ರಮ ಮನೆ, ಶೆಡ್‌ಗಳ ತೆರವುಗೊಳಿಸುತ್ತಿರುವುದು.

ಪರಿಹಾರವನ್ನು ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ ವೇಣುಗೋಪಾಲ್.

ಕೆ.ಸಿ.ವೇಣುಗೋಪಾಲ್ ಅವರ ಈ ನಡೆಯಿಂದ ಕೇರಳ ಲಾಬಿಗೆ ಮುಂದಾದರಾ ಎಂಬ ಪ್ರಶ್ನೆ ಎದ್ದಿದೆ. ಜೊತೆಗೆ ಕಾಂಗ್ರೆಸ್ ಪಕ್ಷದ ಕರ್ನಾಟಕ ವಿರೋಧಿ ನಡೆಗೆ ಜನಾಕ್ರೋಶ ಕೂಡ ವ್ಯಕ್ತವಾಗಿದೆ.

ಸಂಕಷ್ಟ ಬಂದಾಗೆಲ್ಲ ಕರ್ನಾಟಕದಿಂದ ನೆರವು: ಕೇರಳಕ್ಕೆ ಸಂಕಷ್ಟ ಬಂದಾಗೆಲ್ಲ ಕರ್ನಾಟಕ ನೆರವಿನ ಹಸ್ತ ಚಾಚಿದೆ. ವಯನಾಡಿನಲ್ಲಿ ಭೂಕುಸಿತ ಸಂಭವಿಸಿದಾಗ ಕರ್ನಾಟಕ ಸರ್ಕಾರ 100 ಮನೆಗಳ ನೆರವು ಘೋಷಿಸಿತ್ತು. ವಯನಾಡಿನಲ್ಲಿ ಆನೇ ತುಳಿತಕ್ಕೆ ಅಲ್ಲಿನ ವ್ಯಕ್ತಿ ಬಲಿಯಾದಾಗ ಕರ್ನಾಟಕ ಅರಣ್ಯ ಇಲಾಖೆ 15 ಲಕ್ಷ ರೂ. ಪರಿಹಾರ ನೀಡಿತ್ತು.

ಯಲಹಂಕದ ಕೋಗಿಲು ಲೇಔಟ್ ನಲ್ಲಿ ಇತ್ತೀಚೆಗಷ್ಟೇ ಜಿಬಿಎ ತೆರವು ಕಾರ್ಯಾಚರಣೆ ನಡೆಸಿತ್ತು. ಕೋಗಿಲು ಬಂಡೆ ಬಳಿ 80 ಕೋಟಿ ಮೌಲ್ಯದ ಗೋಮಾಳ ಜಾಗವನ್ನು ಜಿಲ್ಲಾಧಿಕಾರಿಗಳು ಬಿಬಿಎಂಪಿಯ ಘನತ್ಯಾಜ್ಯ ವಿಭಾಗಕ್ಕೆ ಕೊಟ್ಟಿದ್ದರು. ಈ ಜಾಗದಲ್ಲಿ ಅನಧಿಕೃತವಾಗಿ ಮುಸ್ಲಿಮರು ವಾಸವಿದ್ದ 200ಕ್ಕೂ ಹೆಚ್ಚು ಮನೆಗಳನ್ನು ಜಿಬಿಎ ತೆರವು ಮಾಡಿತ್ತು.

ವೇಣುಗೋಪಾಲ್ ಸರ್ಕಾರದ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿಲ್ಲ, ಸಲಹೆ ನೀಡಿದ್ದಾರೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥನೆ

ಬೆಂಗಳೂರು, ಡಿ.28– ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ.ವೇಣುಗೋಪಾಲ್ ಅವರು ರಾಜ್ಯ ಸರ್ಕಾರದ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿಲ್ಲ. ಅವರು ಸಲಹೆ ನೀಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥನೆ ಮಾಡಿಕೊಂಡಿದ್ದಾರೆ.




ಕೋಗಿಲು ಬಳಿ ಅಕ್ರಮ ಲೇಔಟ್ ತೆರವು ವಿಚಾರದಲ್ಲಿ ವೇಣುಗೋಪಾಲ್ ಮಾಡಿದ್ದ ಟ್ವೀಟ್ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಕೆ.ಸಿ. ವೇಣುಗೋಪಾಲ್ ಅವರು ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ. ಅವರಿಗೆ ಸಲಹೆ ನೀಡಲು ಎಲ್ಲಾ ಅಧಿಕಾರ ಇದೆ. ಏನಾದರೂ ಇದ್ದರೆ ನಾವು ಸಲಹೆ ಪಡೆದುಕೊಳ್ಳುತ್ತೇವೆ ಎಂದಿದ್ದಾರೆ.

ಕೋಗಿಲು ಬಡಾವಣೆ ಬಗ್ಗೆ ನಾನು ಪರಿಶೀಲನೆ ಮಾಡಿದ್ದೇನೆ. ಅಲ್ಲಿ ಒಬ್ಬ ಹಲವರಿಂದ ಹಣ ಪಡೆದು ಶೆಡ್ ಹಾಕಿದ್ದಾನೆ. ಹೀಗಾಗಿ ನಾವು ನೋಟಿಸ್ ಕೊಟ್ಟಿದ್ದೇವೆ. ಅವರು ಲೋಕಲ್ ಜನ ಆಗಿದ್ದರೆ ಬೇರೆ ■ 6ನೇ ಪುಟಕ್ಕೆ

ಈ ನೆಲದ ಸ್ವಾಭಿಮಾನ ಬಲಿಕೊಟ್ಟರೆ ಕನ್ನಡಿಗರ ಪ್ರತಿಭಟನೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ

ಬೆಂಗಳೂರು, ಡಿ.28– ಕೋಗಿಲು ಬಡಾವಣೆ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಒತ್ತಡಕ್ಕೆ ಮಣಿದು ಈ ನೆಲದ ಸ್ವಾಭಿಮಾನ ಹಾಗೂ ಕಾನೂನನ್ನು ಬಲಿಕೊಟ್ಟರೆ ಕನ್ನಡಿಗರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ.



ಕೋಗಿಲು ಬಡಾವಣೆಯಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿದ ನಂತರದ ಬೆಳವಣಿಗೆ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ಕೋಗಿಲು ಬಡಾವಣೆಯ ಅಕ್ರಮ ನಿವಾಸಿಗಳ ತೆರವುಗೊಳಿಸಿರುವ ಜಿಬಿಎ ಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡು, ಕೇರಳ ಮುಖ್ಯಮಂತ್ರಿ ಪಿಣರಾಯ್ ಅವರ ಹೇಳಿಕೆಯನ್ನು ರಾಜಕೀಯ ಗಿಮಿಕ್ ಎಂದು ಟೀಕಿಸಿದ್ದರು. ಇದರ ಬೆನ್ನಲ್ಲೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ■ 6ನೇ ಪುಟಕ್ಕೆ

ಕ್ಯಾಟಲ್ ಗ್ರಿಡ್‌ಗೆ ಸಿಲುಕಿದ ಮಹಿಳಾ ಕಾನ್‌ಸ್ಟೇಬಲ್ ರಕ್ಷಣೆ



ಸಿಎಆರ್ ಮೈದಾನದ ಪ್ರವೇಶ ದ್ವಾರದಲ್ಲಿ ಅಳವಡಿಸಿದ ಕ್ಯಾಟಲ್ ಗ್ರಿಡ್‌ಗೆ ಬಲಗಾಲು ಸಿಲುಕಿಕೊಂಡಿದ್ದ ಮಹಿಳಾ ಕಾನ್‌ಸ್ಟೇಬಲ್ ಒಬ್ಬರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದರು.

ಮೈಸೂರು,ಡಿ.28(ಆರ್‌ಕೆ)–ಪೊಲೀಸ್ ಆಯುಕ್ತರು ನಡೆಸಿದ ಪೆರೇಡ್‌ನಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದಾಗ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸಿಎಆರ್ ಮೈದಾನದ ಪ್ರವೇಶ ದ್ವಾರದಲ್ಲಿ ಅಳವಡಿಸಿರುವ ಕ್ಯಾಟಲ್ ಗ್ರಿಡ್‌ಗೆ ಬಲಗಾಲು ಸಿಲುಕಿಕೊಂಡಿದ್ದ ಮಹಿಳಾ ಕಾನ್‌ಸ್ಟೇಬಲ್ ಒಬ್ಬರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿರುವ ಘಟನೆ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಮೈಸೂರಿನ ಲಕ್ಷ್ಮೀಪುರಂ ಠಾಣೆಯ ನಳಿನಿ ಎಂಬುವರೆ ಅಪಾಯದಿಂದ ಪಾರಾದವರು. ಶುಕ್ರವಾರ ಬೆಳಗ್ಗೆ ಸಿಎಆರ್ ಮೈದಾನದಲ್ಲಿ ಹೊಸ ವರ್ಷಾಚರಣೆ ವಿಶೇಷ ಬಂದೋಬಸ್ತ್ ಬಗ್ಗೆ ತಿಳುವಳಿಕೆ ನೀಡಲು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಪೆರೇಡ್ ಆಯೋಜಿಸಿದ್ದರು. ಅಲ್ಲಿಗೆ ಹಾಜರಾಗಿದ್ದ ನಳಿನಿ ಅವರು ಪೆರೇಡ್ ಮುಗಿದ ಬಳಿಕ ನಡೆದುಕೊಂಡು ಹೊರಗೆ ಬರುತ್ತಿದ್ದಾಗ ಸಿಎಆರ್ ಪ್ರವೇಶದ್ವಾರದಲ್ಲಿ ದನಕರುಗಳು ಬಾರದಂತೆ ಅಳವಡಿಸಿರುವ ಕಬ್ಬಿಣದ ಕ್ಯಾಟಲ್ ಗ್ರಿಡ್‌ಗೆ ಆಕಸ್ಮಿಕವಾಗಿ ಬಲಗಾಲು ಸಿಲುಕಿಕೊಂಡಿತು.

ವಿಷಯ ತಿಳಿಯುತ್ತಿದ್ದಂತೆಯೇ ಕಾರ್ಯಪ್ರವೃತ್ತರಾದ ಸಿಎಆರ್ ಅಧಿಕಾರಿಗಳು ಅಗ್ನಿಶಾಮಕ ಸಿಬ್ಬಂದಿಗಳನ್ನು ಕರೆಸಿ, ಕಬ್ಬಿಣದ ಟ್ರ್ಯಾಪ್‌ಗೆ ಸಿಲುಕಿದ್ದ ನಳಿನಿ ಅವರ ಕಾಲನ್ನು ಹೊರತೆಗೆದು, ರಕ್ಷಿಸುವಲ್ಲಿ ಯಶಸ್ವಿಯಾದರು. ನಳಿನಿ ಅವರು ಯಾವುದೇ ಗಾಯಗಳಾಗದೇ ಸುರಕ್ಷಿತವಾಗಿದ್ದು ನಾಳೆ (ಡಿ.29) ಕರ್ತವ್ಯಕ್ಕೆ ಹಾಜರಾಗಲಿದ್ದಾರೆ ಎಂದು ಬಿ.ಎಸ್.ರವಿಶಂಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಅಮೃತೇಶ್ ಅವರಿಗೆ ವಿಜ್ಞಾನ ಅಕಾಡೆಮಿ ಫೆಲೋಶಿಪ್



ಮೈಸೂರು ವಿವಿ ಪ್ರಾಧ್ಯಾಪಕರಾದ ಡಾ.ಕೆ.ಎನ್.ಅಮೃತೇಶ್ ಅವರಿಗೆ ಪ್ರತಿಷ್ಠಿತ ವಿಜ್ಞಾನ ಅಕಾಡೆಮಿ ಫೆಲೋಶಿಪ್ ಅನ್ನು ನಾಸಿ ಅಧ್ಯಕ್ಷ ಪ್ರೊ.ವಿನೋದ್ ಕೆ.ಸಿಂಗ್ ಅವರು ಪ್ರದಾನ ಮಾಡಿದರು. ಈ ವೇಳೆ ನಾಸಿ ಪ್ರಧಾನ ಕಾರ್ಯದರ್ಶಿ ಪ್ರೊ.ಜಯೇಶ್ ಬೆಳ್ಳಾರೆ ಉಪಸ್ಥಿತರಿದ್ದರು.

ಮೈಸೂರು, ಡಿ.28–ಮೈಸೂರು ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಖಾತರಿ ಘಟಕದ (ಐಕ್ಯೂಎಸಿ) ನಿರ್ದೇಶಕ ಡಾ. ಕೆ.ಎನ್.ಅಮೃತೇಶ್ ಅವರು 2025ನೇ ಸಾಲಿನ ಪ್ರತಿಷ್ಠಿತ 'ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಫೆಲೋಶಿಪ್' ಗೌರವಕ್ಕೆ ಪಾತ್ರರಾಗಿದ್ದಾರೆ.

ಅಲಹಾಬಾದ್‌ನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯಿಂದ ಕೊಡಮಾಡುವ ಈ ಫೆಲೋಶಿಪ್ ಅನ್ನು ಗುಹಾಹಟಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ)ಯಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಇಂಡಿಯಾ (ನಾಸಿ) ಅಧ್ಯಕ್ಷ ಪ್ರೊ.ವಿನೋದ್ ಕೆ.ಸಿಂಗ್ ಅವರು ಡಾ.ಕೆ.ಎನ್.ಅಮೃತೇಶ್ ಅವರಿಗೆ ಪ್ರದಾನ ಮಾಡಿದರು. ಈ ಪ್ರಶಸ್ತಿಯು ಪ್ರಮಾಣ ಪತ್ರ, ಭಿನ್ನವತ್ತಳೆ, ಪದಕ ಮತ್ತು ಫೆಲೋಶಿಪ್ ಪಿನ್‌ಗಳನ್ನು ಒಳಗೊಂಡಿದ್ದು, ಅಮೃತೇಶ್ ಅವರು ಕೃಷಿ ಮತ್ತು ಸಸ್ಯ ವಿಜ್ಞಾನಕ್ಕೆ ನೀಡಿದ ಮಹತ್ತರ ಕೊಡುಗೆಗಾಗಿ ಈ ಗೌರವವನ್ನು ನೀಡಲಾಗಿದೆ.

ಮೈಸೂರು ವಿವಿಯ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಡಾ.ಕೆ.ಎನ್.ಅಮೃತೇಶ್ ಅವರು, ನಾಸಿ ಫೆಲೋಶಿಪ್ ಪಡೆದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಥಮ ಪ್ರಾಧ್ಯಾಪಕರು ಎಂಬ ಹೆಮ್ಮೆಗೆ ಪಾತ್ರರಾಗಿದ್ದಾರೆ.

ಅಭಿನಂದನೆ



ಮೈಸೂರು ತಾಲೂಕು ಕೈಗಾರಿಕಾ ಸಹಕಾರ ಸಂಘದ ನೂತನ ಉಪಾಧ್ಯಕ್ಷ ಕೆಂಪಚ್ಚೇಗೌಡ, ಸಂಘದ ಅಧ್ಯಕ್ಷ ಬಿ.ಎಸ್.ಶಿವಣ್ಣ, ನಿರ್ದೇಶಕರಾದ ಎನ್.ನಂಜಪ್ಪ, ಡಿ.ನಿಜಲಿಂಗಪ್ಪ, ಚಿಕ್ಕಣ್ಣೇಗೌಡ, ರಾಜಶೇಖರ್ ಮೂರ್ತಿ, ಮಹಾಲಿಂಗು, ಸುನಂದ, ಸಾಕಮ್ಮ, ಲಕ್ಷ್ಮಿ ಸಿದ್ದೇಗೌಡ, ರಾಜಶೇಖರ್ ಹಾಗೂ ಕಾರ್ಯದರ್ಶಿ ಹಿನಕಲ್ ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು.

ವಾಲಿಬಾಲ್ ವಿಜೇತರು



ಮೈಸೂರಿನ ದಕ್ಷಾ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಪ್ರೌಢಶಾಲಾ ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿದ್ದಾರೆ. ಶಾಲಾ ಪ್ರಾಂಶುಪಾಲೆ ಕೆ.ಎಸ್.ಪೂರ್ಣಿಮಾ, ಉಪಪ್ರಾಂಶುಪಾಲೆ ಸುಷ್ಮ ಕಿರಣ್, ದೈಹಿಕ ಶಿಕ್ಷಣ ಶಿಕ್ಷಣ ನಾಗರಾಜ್ ಇನ್ನಿತರರಿದ್ದರು.

ಅಪರಿಚಿತ ವೃದ್ಧ ಸಾವು

ಮೈಸೂರು, ಡಿ.28–ಅಪರಿಚಿತ ವೃದ್ಧನೋರ್ವ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ವಿಜಯನಗರ ರಿಂಗ್ ರಸ್ತೆ ಟ್ರಾಫಿಕ್ ಸಿಗ್ನಲ್ ಬಳಿ ಡಿಸೆಂಬರ್ 13ರಂದು ಅಸ್ವಸ್ಥರಾಗಿ ಬಿದ್ದಿದ್ದ ಸುಮಾರು 60 ವರ್ಷ ವಯಸ್ಸಿನ ವೃದ್ಧನನ್ನು ಪೊಲೀಸರು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಆತ ಡಿ.23ರಂದು ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈತನ ಬಲ ರಟ್ಟೆಯ ಮೇಲೆ ನಂಜುಂಡೇಗೌಡ್ರು, ಎನ್.ಮಂಜು, ಎನ್.ಮಣಿ ಎಂದು ಕನ್ನಡದಲ್ಲಿ ಹಚ್ಚೆ ಗುರುತಿದ್ದು, ಈತನ ವಾರಸುದಾರರು ವಿಜಯನಗರ ಠಾಣೆ ದೂರವಾಣಿ ಸಂಖ್ಯೆ 0821–2418317 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಸಿಎಂ ಮಾಡುವಂತೆ ಪರಮೋತ್ಸವ ಸಮಿತಿ ಆಗ್ರಹ

ಮೈಸೂರು, ಡಿ.28(ಎಂಕೆ)– ಕಾಂಗ್ರೆಸ್‌ನಿಂದ ದಲಿತ ಸಿಎಂ ಮಾಡುವ ಬ್ಯಾಲೆನ್ಸ್ ಶೀಟ್ ಇದ್ದು, ಡಾ.ಜಿ.ಪರಮೇಶ್ವರ್ ಅವರನ್ನೇ ರಾಜ್ಯದ ಮುಂದಿನ ಮುಖ್ಯಮಂತ್ರಿಗಳನ್ನಾಗಿ ಘೋಷಣೆ ಮಾಡಬೇಕು ಎಂದು ಪರಮೋತ್ಸವ ಸಮಿತಿ ಹಾಗೂ ಡಿ.ದೇವರಾಜ ಅರಸು ಅಭಿಮಾನಿಗಳ ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ಆಗ್ರಹಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಎರಡು ಬಾರಿ ಸಿಎಂ ಸ್ಥಾನದಿಂದ ವಂಚಿತರಾಗಿರುವ ಡಾ.ಜಿ.ಪರಮೇಶ್ವರ್ ಅವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿ ಕಾಂಗ್ರೆಸ್ ಸರ್ವಾನುಮತದಿಂದ ಆಯ್ಕೆ ಮಾಡಬೇಕು. ಇಲ್ಲವಾದರೆ ದಲಿತರ ಬೆಂಬಲ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಾಗಲಿದೆ ಎಂದು ಎಚ್ಚರಿಸಿದರು.

ರಾಜ್ಯದ ಶೇ.90ರಷ್ಟು ದಲಿತ ಸಮುದಾಯ ಕಾಂಗ್ರೆಸ್ ಪರವಾಗಿದ್ದು, ದಲಿತ ನಾಯಕರೂ ಕಾಂಗ್ರೆಸ್‌ನಲ್ಲೇ ಇದ್ದಾರೆ. ಪಕ್ಷದಲ್ಲಿ ಅನ್ಯಾಯವಾಗುತ್ತಿದ್ದರೂ ದಲಿತ ನಾಯಕರು ಪಕ್ಷ ಬಿಟ್ಟು ಹೋಗಿಲ್ಲ. ಅಲ್ಲದೆ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 150–170 ಕ್ಷೇತ್ರಗಳಲ್ಲಿ ದಲಿತರ ಮತಗಳೇ ನಿರ್ಣಾಯಕವಾಗಿದ್ದು, ಗೆಲ್ಲುವ ಮತ್ತು ಗೆಲ್ಲಿಸುವ ಶಕ್ತಿ ದಲಿತರಿಗೆ ಇದೆ. ಅದಾಗ್ಯೂ, ದಲಿತ ನಾಯಕರೊಬ್ಬರಿಗೆ ಸಿಎಂ ಸ್ಥಾನ ದೊರೆದಿರುವುದರಿಂದ ಮತ್ತೆ ಹೋರಾಟ ಹಾದಿ ಹಿಡಿಯುತ್ತಿದ್ದೇವೆ ಎಂದರು.



ಪರಮೋತ್ಸವ ಸಮಿತಿ ಹಾಗೂ ಡಿ.ದೇವರಾಜ ಅರಸು ಅಭಿಮಾನಿಗಳ ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ಸುದ್ದಿಗೋಷ್ಠಿ ನಡೆಸಿದರು.

ಅಹಿಂದ ಸಮಾವೇಶಕ್ಕೆ ಹೋಗಲ್ಲ.... ಪ್ರತ್ಯೇಕ ದಲಿತ ಸಮಾವೇಶ ಮಾಡುತ್ತೇವೆ...

"ಮೈಸೂರಲ್ಲಿ ಅಹಿಂದ ಸಮಾವೇಶ ಮಾಡುತ್ತಿರುವುದಕ್ಕೆ ವಿರೋಧವಿಲ್ಲ. ಡಾ.ಜಿ.ಪರಮೇಶ್ವರ್ ಅವರನ್ನು ಸಿಎಂ ಮಾಡಲು ನಿರ್ಣಯ ಕೈಗೊಳ್ಳುವುದಾದರೆ ನಾವೆಲ್ಲರೂ ಭಾಗವಹಿಸುತ್ತೇವೆ. ಇಲ್ಲವಾದರೆ ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು ಸೇರಿದಂತೆ ಸಣ್ಣ ಸಣ್ಣ ದಲಿತ ಸಮುದಾಯಗಳನ್ನು ಒಂದುಗೂಡಿಸಿ, ಮೈಸೂರಲ್ಲೇ ಬೃಹತ್ ದಲಿತ ಸಮಾವೇಶ ಮಾಡುತ್ತೇವೆ. ಸಿದ್ದರಾಮಯ್ಯ ಅವರಿಗೂ ಕೂಡ ಜಿ.ಪರಮೇಶ್ವರ್ ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡುವಂತೆ ಕೇಳಿಕೊಳ್ಳುತ್ತೇವೆ. ಜಿ.ಪರಮೇಶ್ವರ್ ಅವರಿಗೆ ಸಿಎಂ ಆಗಬೇಕು ಎಂಬುದು ಅವರ ಮನದಲ್ಲಿದೆ.

–ಬಿಳಿಕೆರೆ ರಾಜು, ಅಧ್ಯಕ್ಷ, ಪರಮೋತ್ಸವ ಸಮಿತಿ ಹಾಗೂ ಡಿ.ದೇವರಾಜ ಅರಸು ಅಭಿಮಾನಿಗಳ ವೇದಿಕೆ

ಕಳೆದ 25 ವರ್ಷಗಳಿಂದ ರಾಜ್ಯ ರಾಜಕಾರಣದಲ್ಲಿ ದಲಿತ ಸಿಎಂ ಕೂಗು ಕೇಳುತ್ತಲೇ ಇದೆ. ಹೋರಾಟಗಳು ನಡೆಯುತ್ತಾ ಬಂದಿವೆ. ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹತೆಯುಳ್ಳ ದಲಿತ ನಾಯಕರಿದ್ದರೂ ಅವಕಾಶ ನೀಡದೆ ಕಡೆಗಣಿಸಿ, ಅನ್ಯಾಯ ಮಾಡಲಾಗಿದೆ. ಹಾಗಾಗಿ ಹೋರಾಟ ಮಾಡದಿದ್ದರೆ ಮುಂದೆಯೂ ದಲಿತ ನಾಯಕರಿಗೆ ಸಿಎಂ ಸ್ಥಾನ ಸಿಗಲ್ಲ. ದಲಿತರ ಬೆಂಬಲ ಪಡೆದಿರುವ ಕಾಂಗ್ರೆಸ್, ದಲಿತ ಸಿಎಂ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಡಾ.ಪರಮೇಶ್ವರ್ ಅವರಿಗೆ ರಾಜ್ಯದ ಸಿಎಂ ಆಗುವ ಎಲ್ಲಾ ಅರ್ಹತೆಯೂ ಇದೆ. ಅಮೆರಿಕಾದಲ್ಲಿ ಓದಿ ಬಂದಿದ್ದಾರೆ. ರಾಜಕೀಯ ಅನುಭವದ ಜೊತೆಗೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲಾ–ಕಾಲೇಜು ನಡೆಸುತ್ತಿದ್ದಾರೆ. ವಿಪರ್ಯಾಸವೆಂದರೆ ಪ್ರತೀ ಚುನಾವಣೆ ಬಂದಾಗಲೂ ಪರಮೇಶ್ವರ್ ಅವರ ಮನೆಯಲ್ಲಿ ಊಟ ಮಾಡಿ ಬರುತ್ತಾರೆಯೇ ವಿನಃ ಮುಖ್ಯಮಂತ್ರಿಗಳನ್ನಾಗಿ ಆಯ್ಕೆ ಮಾಡಿಲ್ಲ. ಪ್ರತೀ ಚುನಾವಣೆಯಲ್ಲಿಯೂ ದಲಿತರ ಮತಗಳಿಂದ ಗೆದ್ದ ಬಳಿಕ ದಲಿತರನ್ನೇ ಬಿಟ್ಟು ಹೋಗುತ್ತಾರೆ ಎಂದು ಬೇಸರ ಹೊರಹಾಕಿದರು. ಸುದ್ದಿಗೋಷ್ಠಿಯಲ್ಲಿ ದಲಿತ ಸಂಘಟನೆ ಜಿಲ್ಲಾ ಸಂಚಾಲಕ ಕೃಷ್ಣ, ಜಿಪಂ ಮಾಜಿ ಸದಸ್ಯ ಶಿವರಾಜ್, ಡಾ.ಜಿ.ಪರಮೇಶ್ವರ್ ಅಭಿಮಾನಿ ಬಳಗದ ಅಧ್ಯಕ್ಷ ಮಂಜುನಾಥ್, ಕಾಂಗ್ರೆಸ್ ಮುಖಂಡ ಗುಂಡಣ್ಣ ಮತ್ತಿತರರಿದ್ದರು.

ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿ.ಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ)ಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯಿಂದ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಜ.9ರೊಳಗೆ ಅರ್ಜಿ ಸಲ್ಲಿಸಬೇಕು. ಆಸಕ್ತರು https://bcwd.kar nataka.gov.in ಮೂಲಕ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗೆ ಸೇರಿರಬೇಕು. ಪ್ರವರ್ಗ–1, ರೂ.4.50 ಲಕ್ಷ 2(ಎ), 3(ಎ) ಹಾಗೂ 3(ಬಿ) ರೂ.3.50 ಲಕ್ಷ ವಾರ್ಷಿಕ ಆದಾಯ ಮಿತಿಯನ್ನು ಹೊಂದಿರಬೇಕು. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು. ಅಭ್ಯರ್ಥಿಗಳು ಪೂರ್ಣಾವಧಿ ಪಿಎಚ್.ಡಿ ಅಧ್ಯಯನಕ್ಕಾಗಿ ಮಾಡಿಸುವ ನೋಂದಣಿ ದಿನಾಂಕವು ವ್ಯಾಸಂಗ ವೇತನ, ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಹಿಂದಿನ 2 ವರ್ಷದೊಳಗಿದ್ದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಾಲಿನಿಂದ ಪ್ರಥಮ ವರ್ಷದ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರಬೇಕು. ಮಾಹಿತಿಗೆ ದೂ.ಸಂಖ್ಯೆ: 8050 770004 ಅನ್ನು ಸಂಪರ್ಕಿಸಬಹುದು.

ಚಾಮರಾಜ ಕ್ಷೇತ್ರದ ಬಿಜೆಪಿ ರೈತ ಮೋರ್ಚಾದಿಂದ ರೈತರಿಗೆ ಸನ್ಮಾನ



ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ರೈತ ಮೋರ್ಚಾ ವತಿಯಿಂದ ರೈತರನ್ನು ಸನ್ಮಾನಿಸಲಾಯಿತು.

ಮೈಸೂರು,ಡಿ.28(ಪಿಎಂ)– ರಾಷ್ಟ್ರೀಯ ರೈತ ದಿನಾಚರಣೆ ಅಂಗವಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ರೈತ ಮೋರ್ಚಾ ವತಿಯಿಂದ ಅನ್ನದಾತರಿಗೆ ಸನ್ಮಾನ ಮತ್ತು ಸಸಿ ವಿತರಣೆ ಜೊತೆಗೆ ಸಸಿ ನೆಡುವ ಕಾರ್ಯಕ್ರಮವನ್ನು ಮೈಸೂರಿನ ಪಡುವಾರಹಳ್ಳಿಯ ಶ್ರೀಮಹದೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರದ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ರೈತರು ದೇಶದ ಬೆನ್ನೆಲುಬು. ರೈತರ ಸರ್ವತೋಮುಖ ಬೆಳವಣಿಗೆಗೆ ಕೇಂದ್ರ ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸಿದೆ. ನಾನು ಕೂಡ ರೈತನಾಗಿ ಬಾಳೆ ಬೆಳೆದು ಲಾಭ ಗಳಿಸಿದ್ದು, ಇದು ನನಗೆ ಹೆಮ್ಮೆ. ದೇಶ ಕಾಯುವ ನಮ್ಮ ಯೋಧರು ಹಾಗೂ ದೇಶಕ್ಕೆ ಅನ್ನ ಹಾಕುವ ರೈತರು ನಮ್ಮ ರಾಷ್ಟ್ರದ ಎರಡು ಕಣ್ಣುಗಳಿಂದ್ದಂತೆ. ಅವರಿಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯ ಎಂದು ಹೇಳಿದರು.

ಇದೇ ವೇಳೆ ಲಾಲ್ ಬಹದ್ದೂರ್‌ಶಾಸ್ತ್ರಿ ಅವರ 'ಜೈ ಜವಾನ್ ಜೈ ಕಿಸಾನ್' ಘೋಷಣೆಯೊಂದಿಗೆ 10 ಮಂದಿ ಪ್ರಗತಿಪರ ರೈತರಿಗೆ ಮೈಸೂರು ಪೇಟೆ ತೊಡಸಿ, ಶಾಲು–ಹಾರ ಹಾಕಿ ಒಂದೊಂದು ಸಸಿ ನೀಡಿ ಸನ್ಮಾನಿಸಲಾಯಿತು.

ಪಡುವಾರಹಳ್ಳಿಯ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ರಾಮಣ್ಣ, ಬಿಜೆಪಿ ವಾರ್ಡ್ ಅಧ್ಯಕ್ಷ ಆಟೋ ಮಂಜು, ನಗರಪಾಲಿಕೆ ಮಾಜಿ ಸದಸ್ಯ ಸಿ.ಶ್ರೀರಾಮ್, ಮುಖಂಡರಾದ ಎಂ.ಚಿಕ್ಕವೆಂಕಟು, ಗುರುವಿನಾಯಕ, ರವೀಂದ್ರ, ಈ.ಬಸವರಾಜು, ಚಾಮರಾಜ ಕ್ಷೇತ ರೈತ ಮೋರ್ಚಾ ಅಧ್ಯಕ್ಷ ಎಂ. ಕುಮಾರ್, ಪ್ರಧಾನ ಕಾರ್ಯದರ್ಶಿ ನರಸಿಂಹ, ಪ್ರಶಾಂತ್, ನಗರ ಕಾರ್ಯದರ್ಶಿ ಎಂ.ಎಸ್.ಪುನೀತ್ ಗೌಡ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮುಖಂಡರಾದ ಆರ್.ಗುರುದತ್ತ, ರಾಘವ್ ಎಂ.ಗೌಡ, ಕುಂಬಾರಕೊಪ್ಪಲ್ ಭೈರಪ್ಪ, ಎಸ್.ಪ್ರವೀಣ, ಒಂಟಿಕೊಪ್ಪಲ್ ಪ್ರೇಮ್‌ಕುಮಾರ್, ಅರುಣ, ದೇವೇಗೌಡ, ಶಿವಕುಮಾರ್, ಕಿಶೋರ್, ಸಿ.ಡಿ. ಕುಮಾರ್, ಸಂತೋಷ್, ಚಾಮರಾಜ ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಕೆ.ಗಿರೀಶ್, ವೇಣು, ಸ್ವಾಮಿ, ಸಚಿನ್ ಗೌಡ, ಬೋಟಿ ಬಜಾರ್ ಯೋಗಿ, ಲೋಕೇಶ್, ಮಧು ಕುಮಾರ್, ಬಾಲ್ಲನ್ ನಾಗರಾಜ, ಹೊಸಳ್ಳಿ ನಾಗರಾಜು, ಎಂ.ಸಿ.ಕುಮಾರ್ ಮತ್ತಿತರರು ಹಾಜರಿದ್ದರು.

ಪಿಎಚ್.ಡಿ ಪದವಿ



ಮೈಸೂರು,ಡಿ.28–ಡಾ.ಸಿ.ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಹೆಚ್.ಎನ್.ಚಂದ್ರಶೇಖರ ಅವರು ದೈಹಿಕ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.12.2025 ಸೋಮವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು:** ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರಾದ ಮಂಜುಶ್ರೀ, ಪ್ರೊ.ಶೋಭಾ, ಡಾ.ಪ್ರತಿಮಾ, ಸ್ಥಳ: ಸೆಮಿನಾರ್ ಹಾಲ್, ಮಹಾರಾಣಿ ವಿಜ್ಞಾನ ಕಾಲೇಜು ನೂತನ ಕಟ್ಟಡ, ಬೆಳಗ್ಗೆ 9.30ಕ್ಕೆ.
- **ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ದೇಜಗೌ ಟ್ರಸ್ಟ್ :** ಶ್ರೀ ಕುವೆಂಪು ಅವರ 122ನೇ ಜಯಂತಿ ಮತ್ತು ವಿಶ್ವಮಾನವ ದಿನಾಚರಣೆ ಸಮಾರಂಭ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ.ಜೆ.ಶಶಿಧರ ಪ್ರಸಾದ್, ಉಪಸ್ಥಿತಿ: ಕುವೆಂಪು ವಿದ್ಯಾ ಪರಿಷತ್ ಅಧ್ಯಕ್ಷ ಡಾ.ಡಿ.ಕೆ.ರಾಜೇಂದ್ರ, ಡಾ.ಎಂ.ಕೆಂಪಮ್ಮ, ಸ್ಥಳ: ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಶ್ರೀ ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ರಾಷ್ಟ್ರಕವಿ ಕುವೆಂಪು ಅವರ 122ನೇ ಜನ್ಮ ದಿನಾಚರಣೆ: ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿ: ಮೈಸೂರು ವಿವಿ ಮಹಾರಾಜ ಕಾಲೇಜು ಕನ್ನಡ ಪ್ರಾಧ್ಯಾಪಕ ಪ್ರೊ.ಟಿ.ಕೆ.ಕೆಂಪೇಗೌಡ, ಉಪಸ್ಥಿತಿ: ಮುಕ್ತ ವಿವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕುಲಸಚಿವ (ಪರೀಕ್ಷಾಂಗ) ಡಾ.ಸಿಎನ್.ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ.ಎಸ್. ನಿರಂಜನ್‌ರಾಜ್, ಪ್ರಾಸ್ತಾವಿಕ ನುಡಿ: ಮುಕ್ತ ವಿವಿ ಸಂಯೋಜನಾಧಿಕಾರಿ ಡಾ.ಎನ್.ಆರ್.ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿ, ಬೆಳಗ್ಗೆ 11.30ಕ್ಕೆ.
- **ಶ್ರೀ ರಾಮಕೃಷ್ಣ ಸೇವಾ ಸಂಘ, ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ, ಸಂಯುಕ್ತ ಪಪೂ ಕಾಲೇಜು :** ಕಲಾ ಸಂಭ್ರಮ, ದಿವ್ಯ ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಂಶುಪಾಲ ಪ್ರೊ.ಕೆ.ರಾಮಮೂರ್ತಿರಾವ್, ಮೈಸೂರು ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಶ್ರೀಮತಿ ನಾಗಮ್ಮ, ಉಪಸ್ಥಿತರು: ಹೆಚ್.ಕೆ.ಅಶೋಕ್‌ಕುಮಾರ್, ಕೆಂಪಲಿಂಗರಾಜು, ದೊರೆರಾಜು, ಹೆಚ್.ಜಿ.ರಮೇಶ್, ಪ್ರೊ.ಜಿ.ಚಂದ್ರಶೇಖರ್, ಸಿ.ಶಿವಪ್ಪ, ವಿ.ಪಿ.ಸವಿತಾ, ಸ್ಥಳ: ಶ್ರೀ ಶಾರದಾ ಸಭಾಂಗಣ, ರಾಮಕೃಷ್ಣ ವಿದ್ಯಾಕೇಂದ್ರ, ಮಧ್ಯಾಹ್ನ 2 ಗಂಟೆಗೆ.
- **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ವಿಭಾಗ, ಕನ್ನಡ ಕ್ರಿಯಾ ಸಮಿತಿ :** 70ನೇ ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ, ಉದ್ಘಾಟನೆ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅತಿಥಿಗಳು: ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖ್ಯ ಭಾಷಣಕಾರರು: ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಸ್ಥಳ: ಕುವೆಂಪುನಗರ ಬಸ್ ನಿಲ್ದಾಣ, ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಎ.ಎಸ್.ಬಾಲಸುಬ್ರಹ್ಮಣ್ಯಂ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಅಮೃತಾ ನಿತಿನ್ ಶಾಸ್ತ್ರಿ, ಪಿ.ಸುರಭಿ, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ –ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು –ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್ 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನೋತ್ಸವದ ಅಂಗವಾಗಿ ಕುವೆಂಪು ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿ ಸಂದ ಸಂದರ್ಭದಲ್ಲಿ ಅವರೊಡನೆ ಡಾ.ಪ್ರಭುಶಂಕರ ಅವರು ನಡೆಸಿದ್ದ ಸಂವಾದ ನಂತರ ಕುವೆಂಪು ಅವರಿಂದ ಸ್ವರಚಿತ ಕವನ ವಾಚನ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ – ಯು.ಶ್ರೀನಿವಾಸ್ ಮ್ಯಾಂಡೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, ಮಧ್ಯಾಹ್ನ 12.05 ವನಿತಾ ವಿಹಾರ, 12.35 ದೇವರನಾಮ : ಬಿ.ಆರ್.ಗೀತಾ, 12.45 ನಮ್ಮ ಆರೋಗ್ಯ ಬೇಸಿಕ್ ಲೈಫ್ ಸಪೋರ್ಟ್‌ಕುರಿತು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಸುಮಂತ್.ಎಂ.ಎಂ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಅಲ್ಪಸಂಖ್ಯಾತರಿಗಾಗಿ ಪ್ರಧಾನಮಂತ್ರಿಗಳ ಹದಿನೈದು ಅಂಶಗಳ ಕಾರ್ಯಕ್ರಮ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತ ಬಿ.ಸತೀಶ್ ಆರಾಧ್ಯ. 1.20 ಭಾವಗೀತೆಗಳು ಜಯಂತಿ. ವಿ.ಭಟ್ 2.30 ಪ್ರದೇಶ ಸಮಾಚಾರ 2.40 ಚಿತ್ರಗೀತೆಗಳು 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಣಕ್ಕಲ್ ರಂಗರಾಜನ್–ಹಾಡುಗಾರಿಕೆ 4.00 ಮಹಿಳಾರಂಗ ಭಾವಸಂಗಮ ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ –ಪೂರ್ಣಿಮಾ.ಎಂ.ಎ 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ: ಸ್ಮಿತಾ ಚಿಪ್ಳೂಣ್ಕರ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮುಸುಕಿನ ಜೋಳದ ಬೇಸಾಯ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು ಅವರೊಂದಿಗೆ ಸಂದರ್ಶನ. ಸಂದರ್ಶಕರು –ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು 8.00 ಯುವವಾಣಿ: ಹೊಸ ವರ್ಷದ ಪ್ರಯುಕ್ತ ವಿಶೇಷ ಕಾರ್ಯಕ್ರಮ. ಪ್ರಸ್ತುತಿ –ಸಹೋದರರಾದ ಆರೋನ್ ರಾಜಣ್ಣ ಮತ್ತು ಸಂಗಡಿಗರು. 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಭಾರ್ಗವಿ ಕೆ ಹಾಡುಗಾರಿಕೆ 10.00 ಆಕಾಶವಾಣಿ ಸಂಗೀತ ಸಮ್ಮೇಳನ–2025, ಪಂಡಿತ್ ವೆಂಕಟೇಶ್‌ಕುಮಾರ್–ಗಾಯನ.

- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಸಂಗೀತ ಕಾರ್ಯಕ್ರಮ, ಗಾಯನ–ವಿದುಷಿ ಎಂ.ಆರ್.ಸುಧಾ, ಪಿಟೀಲು–ವಿದ್ವಾನ್ ವೆಂಕಟೇಶ ಜೋಸ್ಯರ್, ಮೃದಂಗ–ವಿದ್ವಾನ್ ಜಿ.ಎಸ್.ರಾಮಾನುಜನ್, ಮೋರ್ಚಿಂಗ್–ವಿದ್ವಾನ್ ವಿ.ಎಸ್.ರಮೇಶ್, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಸಂಜೆ 6 ಗಂಟೆಗೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸ್ಥಳ: ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ.
- **ಪರಂಪರೆ :** ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ನೃತ್ಯಾಲಯ ತಂಡದಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಅರಮನೆ ಭದ್ರತೆ ಬಗ್ಗೆ ಸರ್ಕಾರದ ದಿವ್ಯ ನಿರ್ಲಕ್ಷ್ಯ

ಹೀಗಾದರೆ ಮುಂದೊಂದು ದಿನ ಅರಮನೆ ಸ್ಫೋಟಿಸಲಿದ್ದಾರೆ

ಎಂಎಲ್‌ಸಿ ವಿಶ್ವನಾಥ್ ಎಚ್ಚರಿಕೆ

ಮೈಸೂರು, ಡಿ.28(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ಅರಮನೆಯ ಭದ್ರತೆ ಬಗ್ಗೆ ರಾಜ್ಯ ಸರ್ಕಾರ ಹೀಗೆ ನಿರ್ಲಕ್ಷ್ಯ ತೋರಿದರೆ ಮುಂದೊಂದು ದಿನ ದೇಶ ದ್ರೋಹಿಗಳು ಇಡೀ ಅರಮನೆಯನ್ನು ಸ್ಫೋಟಿಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಎಚ್ಚರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೀಲಿಯಂ ಸಿಲಿಂಡರ್ ಸ್ಫೋಟ ಮೈಸೂರು ಅರಮನೆಯ ಭದ್ರತಾ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆ ಎಂದು ಆರೋಪಿಸಿದರು.

ಮೈಸೂರು ಅರಮನೆಯ ವೀಕ್ಷಕರ ತಪಾಸಣಾ ಸ್ಥಳದಲ್ಲಿ ಆಧುನಿಕವಾದ ಹೈಟೆಕ್ ಉಪಕರಣಗಳಿಲ್ಲ. ಇದರಿಂದ ಅರಮನೆಗೆ ಸುರಕ್ಷೆ ಇಲ್ಲ ಎಂಬುದು ಸ್ಪಷ್ಟವಾಗಿದೆ. ಇದನ್ನು ಅರಿತು ಸಮಾಜ ಘಾತುಕರು ಮೈಸೂರು ಅರಮನೆಯನ್ನು ಸ್ಫೋಟಿಸಿದರೆ ಯಾರು ಹೊಣೆ? ಎಂದು ಪ್ರಶ್ನಿಸಿದ ವಿಶ್ವನಾಥ್ ಅವರು, ಇಂತಹ ದುರ್ಘಟನೆ ನಡೆದ ಮೇಲೆ ನಾನಲ್ಲ, ನಾನಲ್ಲ ಎಂದು ಪ್ರತಿಯೊಬ್ಬರು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ ಎಂದು ಕಿಡಿಕಾರಿದರು.

ಮೈಸೂರು ಅರಮನೆ ಪಾರಂಪರಿಕ ಕಟ್ಟಡವಾಗಿದ್ದು, ಅಪರೂಪದ ಕಲಾಕೃತಿಗಳನ್ನು ಹೊಂದಿರುವ ಅಪರೂಪದ ಕಟ್ಟಡವಾಗಿದೆ. ಇಂತಹ ಮಹತ್ವವಾದ ಅರಮನೆಯಲ್ಲಿ ನಕಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಇದರಿಂದ ಅಲ್ಲಿನ ಚಲನವಲನದ ಬಗ್ಗೆ ಯಾರಿಗೂ ಅರಿವು ಇರುವುದಿಲ್ಲ. ಮೊನ್ನೆ ಹೀಲಿಯಂ ಸಿಲಿಂಡರ್ ಸ್ಫೋಟದ ದೃಶ್ಯ ಸಿಸಿ ಕ್ಯಾಮರಾದಲ್ಲಿ ದೊರೆಯಲಿಲ್ಲ. ಇದು ಅರಮನೆಯ ಭದ್ರತಾ ವೈಫಲ್ಯಕ್ಕೆ ಮತ್ತೊಂದು ಸ್ಪಷ್ಟ ನಿದರ್ಶನ ಎಂದು ಹೇಳಿದರು.

ಮೈಸೂರು ಅರಮನೆಯಲ್ಲಿ ನಡೆದ ಈ ದುರ್ಘಟನೆ ಬಗ್ಗೆ ನಮ್ಮೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಕನಿಷ್ಟ ಒಂದು ಹೇಳಿಕೆ ಕೂಡ ನೀಡಲಿಲ್ಲ. ಮೈಸೂರು ರಾಜವಂಶಸ್ಥರ ಬಗ್ಗೆ ವೈಮನಸ್ಸು ಹೊಂದಿರುವ ಸಿದ್ದರಾಮಯ್ಯ ಅವರು ಅರಮನೆ ಕುರಿತಂತೆ ಏನೇನನ್ನೂ ಮಾತನಾಡುವುದಿಲ್ಲ ಎಂದು ದೂರಿದರು.

ಮೈಸೂರು ಅರಮನೆಯ ಪ್ರವೇಶ ಶುಲ್ಕದಿಂದ ದಿನಕ್ಕೆ ಕನಿಷ್ಟವೆಂದರೂ 5 ಲಕ್ಷ ಆದಾಯ ಬರುತ್ತಿದೆ. ವಾಹನಗಳ ಪಾರ್ಕಿಂಗ್, ಚಪ್ಪಲಿ ಸ್ಟ್ಯಾಂಡ್ ಸೇರಿದಂತೆ ಇತರೆ ಮೂಲದಿಂದ ಲಕ್ಷಾಂತರ ರೂಪಾಯಿ ಆದಾಯ ಸಂದಾಯವಾಗುತ್ತಿದೆ. ಆದರೆ ಈ ಹಣದ ಬಿಡಿಗಾಸನ್ನು ಅರಮನೆ ನಿರ್ವಹಣೆಗೆ ಬಳಸುಲುತ್ತಿಲ್ಲ. ಈ ಮೂಲಕ ಮೈಸೂರು ಅರಮನೆಯನ್ನು ಆದಾಯ ಮಾಡಿಕೊಳ್ಳುವ ದಂಧೆಯಾಗಿ ಮಾಡಿಕೊಂಡಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಅರಮನೆಯಲ್ಲಿ ನಕಲಿ ಟಿಕೆಟ್ ಮಾರಾಟವಾಗುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ಜನರನ್ನು ನಿಯೋಜನೆ ಮಾಡಲಾಗಿದೆ ಎಂದು ದೂರಿದರು. ಮೈಸೂರು ಅರಮನೆಯಲ್ಲಿ ಸೂಕ್ತ ನಿರ್ವಹಣೆ ಮಾಡದ ಕಾರಣ ಪಾರಂಪರಿಕ ಕಟ್ಟಡದ ಒಂದೊಂದೆ ಭಾಗಗಳು ಕುಸಿದು ಬೀಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿಂದೆ ಅರಮನೆ ಒಳಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿತ್ತು. ಧ್ವನಿವರ್ಧಕದಿಂದ ಅರಮನೆ ಕಟ್ಟಡಕ್ಕೆ ಹಾನಿಯಾಗುತ್ತದೆ ಎಂದು ತಜ್ಞರು ಎಚ್ಚರಿಸಿದರು. ಈ ಹಿನ್ನೆಲೆ ಒಳಗೆ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹೊರಗೆ ಆರಂಭಿಸಲಾಯಿತು. ಆದರೆ ಈಗ ಡಿಜೆ ಸೌಂಡ್ ಸಿಸ್ಟಂನಿಂದ ಮನೋರಂಜನೆ ನೀಡಲಾಗುತ್ತಿದೆ. ಇದರಿಂದ ಅರಮನೆಯ ಭದ್ರತೆಗೆ ಧಕ್ಕೆ ತರುತ್ತಿದ್ದಾರೆ ಎಂದರು.

ಮೈಸೂರು ಅರಮನೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಗಮನಕ್ಕೆ ಈ ವಿಚಾರವನ್ನು ವಿವರಿಸಿದರೆ, ಅವರು ನಾನೇನು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಅವರು ಕೈಚೆಲ್ಲಿದರು ಎಂದು ಹೇಳಿದರು.

ಇನ್ನು ಮಂಡಳಿಯ ಉಪ ನಿರ್ದೇಶಕ ಸುಬ್ರಹ್ಮಣ್ಯ ಇಡೀ ಅರಮನೆಗೆ ರಾಜ, ಮಹಾರಾಜ, ಆತನೆ ಅರಮನೆಯ ಮಾಲೀಕನಂತೆ ವರ್ತಿಸುತ್ತಿದ್ದಾರೆ. ಈಗ ಸುಬ್ರಹ್ಮಣ್ಯ ನಿವೃತ್ತಿ ಹೊಂದುತ್ತಿದ್ದು, ಈತನನ್ನೆ ಮೂರು ವರ್ಷಕ್ಕೆ ಮುಂದುವರೆಸಲು ವ್ಯಾಪಾರ ನಡೆಯುತ್ತಿದೆ ಎಂದು ವಿಶ್ವಾಥ್ ಆರೋಪಿಸಿದರು.

ಅಂತೂ ಕುಂತಿ ಮಕ್ಕಳಿಗೆ ರಾಜ್ಯ ಸಿಗಲಿಲ್ಲ

ಅಂತೂ ಕುಂತಿ ಮಕ್ಕಳಿಗೆ ರಾಜ್ಯ ಸಿಗಲಿಲ್ಲ ಎಂಬಂತೆ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ ಎಂದು ವಿಶ್ವನಾಥ್ ಆರೋಪಿಸಿದರು.

ಕರ್ನಾಟಕ ಕಾಂಗ್ರೆಸ್ ಪಕ್ಷದ ಅವ್ಯವಸ್ಥೆ ಬಗ್ಗೆ ಈ ಮೊದಲು ಹೈಕಮಾಂಡ್‌ಗೆ ಪತ್ರ ಬರೆದಿದ್ದೆ. ಆದರೆ ಮತ್ತೊಂದು ಪತ್ರ ಬರೆದರೆ ಅದನ್ನು ಓದುವಷ್ಟು ಪುರುಷೊತ್ತು ರಾಹುಲ್ ಗಾಂಧಿ ಅವರಿಗೆ ಇಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರು ನೀಡೋಣವೆಂದರೆ ಅವರು ಸೋನಿಯಾ ಗಾಂಧಿ, ರಾಹುಲ್ ಗಾಂಧಿಯೇ ಹೈಕಮಾಂಡ್ ಎಂದು ಅವರತ್ತ ಬೊಟ್ಟು ಮಾಡಿ ತೋರಿಸುತ್ತಾರೆ ಎಂದು ವಿಶ್ವನಾಥ್ ಆರೋಪಿಸಿದರು.


ಮೈಸೂರಿನಲ್ಲಿ ಅಹಿಂದ ಸಮಾವೇಶ ಏರ್ಪಾಡು ಮಾಡುತ್ತಾರಂತೆ. ಕಾಂಗ್ರೆಸ್ ಪಕ್ಷವೇ ಅಹಿಂದ, ಹೀಗಿರುವಾಗ ಪ್ರತ್ಯೇಕ ಅಹಿಂದ ಸಮಾವೇಶದ ಅಗತ್ಯವೇನಿದೆ ಎಂದು ಪ್ರಶ್ನಿಸಿದ ವಿಶ್ವನಾಥ್ ಅವರು, ಹಾಗಾದರೆ ಸಿದ್ದರಾಮಯ್ಯ ಯಾವ ಪಾರ್ಟಿಯಲ್ಲಿದ್ದಾರೊ ಎಂಬ ಅನುಮಾನ ಕಾಡುತ್ತಿದೆ ಎಂದರು. ಸಿದ್ದರಾಮಯ್ಯ ಅವರ ಸರ್ವಾಧಿಕಾರ ಸಹಿಸಿಕೊಳ್ಳದೆ ಬಹಳಷ್ಟು ಕಾಂಗ್ರೆಸ್ಸಿಗರು ಬಾಯಿ ಮುಚ್ಚಿ ಕುಳಿತಿದ್ದಾರೆ. ಸಿದ್ದರಾಮಯ್ಯ ಅವರನ್ನು ಪ್ರಶ್ನಿಸುವ ತಾಕತ್ತು ಯಾರಿಗೂ ಇಲ್ಲ ಎಂದು ವಿಶ್ವಾಥ್ ಆಪಾದಿಸಿದರು.

ಮೈಸೂರು ರೇಷ್ಮೆ ಸೀರೆ ಹೆಸರಿನಲ್ಲಿ ದೊಡ್ಡ ದಂಧೆ ನಡೆಯುತ್ತಿದೆ

ವಿಶ್ವ ಪ್ರಸಿದ್ಧ ಮೈಸೂರು ರೇಷ್ಮೆ ಸೀರೆ ಹೆಸರಿನಲ್ಲಿ ದೊಡ್ಡ ದಂಧೆ ನಡೆಯುತ್ತಿದೆ ಎಂದು ವಿಶ್ವನಾಥ್ ಆರೋಪಿಸಿದರು. ಅಸಲಿ ರೇಷ್ಮೆ ಸಿಗುವುದು ಮೈಸೂರಿನ ಮಾನಂದವಾಡಿಯ ಸಿಲ್ಕ್ ಫ್ಯಾಕ್ಟರಿಯಲ್ಲಿ ಮಾತ್ರ. ಆದರೆ ಬಹಳಷ್ಟು ವ್ಯಾಪಾರಸ್ಥರು ಮೈಸೂರು ರೇಷ್ಮೆ ಸೀರೆ ಸಿಗುತ್ತದೆ ಎಂದು ಪ್ರಚಾರ ಮಾಡಿ ನಕಲಿ ಸೀರೆ ಕೊಟ್ಟು ಭಾರೀ ಲಾಭ ಮಾಡುತ್ತಿದ್ದಾರೆ. ಇಂತಹ ಸೀರೆ ಅಂಗಡಿಗಳು ನಾಯಿ ಕೊಡೆಗಳಂತೆ ತಲೆ ಎತ್ತಿವೆ ಎಂದು ಆರೋಪಿಸಿದರು.

ಹೊರ ರಾಜ್ಯ ಹಾಗೂ ಹೊರ ದೇಶದ ಪ್ರವಾಸಿಗರಿಗೆ ನಕಲಿ ಮೈಸೂರು ರೇಷ್ಮೆ ಸೀರೆ ಮಾರಾಟ ಮಾಡುತ್ತಿದ್ದಾರೆ. ನಕಲಿ ಸೀರೆ ಖರೀದಿಸಿದ ಪ್ರವಾಸಿಗರು ಮೈಸೂರು ಜನರು ವಂಚಕರೆಂದು ಶಾಪ ಹಾಕುತ್ತಿದ್ದಾರೆ. ಈ ಹಿನ್ನೆಲೆ ನಕಲಿ ರೇಷ್ಮೆ ಸೀರೆ ಮಾರಾಟ ಮಾಡುವವರಿಗೆ ಕಡಿವಾಣ ಹಾಕಬೇಕು ಎಂದು ವಿಶ್ವನಾಥ್ ಆಗ್ರಹಿಸಿದರು.

- ಅರಮನೆಗೆ ಯಾರು ಬೇಕಾದರೂ ಹೋಗಿ ಬರಬಹುದು
- ವೀಕ್ಷಕರ ತಪಾಸಣೆಗೆ ಹೈಟೆಕ್ ಉಪಕರಣಗಳಿಲ್ಲ
- ನಕಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದಾರೆ
- ದಿನಕ್ಕೆ 5 ಲಕ್ಷ ಆದಾಯ, ಆದರೆ ನಿರ್ವಹಣೆ ಮಾತ್ರ ಶೂನ್ಯ



ನರೇಗಾ ರದ್ದತಿಯಿಂದ ರಾಜ್ಯಕ್ಕೆ 25,000 ಕೋಟಿ ಹೊರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ

ಬೆಂಗಳೂರು, ಡಿ.28– ಕೇಂದ್ರ ನರೇಗಾ ಯೋಜನೆ ಬದಲಾವಣೆ ಮಾಡಿದೆ. ಇದರಿಂದ ರಾಜ್ಯದ ಮೇಲೆ 25 ಸಾವಿರ ಕೋಟಿ ರೂಪಾಯಿ ಆರ್ಥಿಕ ಹೊರೆ ಬೀಳುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿಂದು ನಡೆದ ಕಾಂಗ್ರೆಸ್ ಸಂಸ್ಥಾಪಕ ದಿನಾಚರಣೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಆರ್ಥಿಕತೆ ಹಾಳು ಮಾಡಲು ಹೊರಟಿದ್ದಾರೆ. ದಲಿತರು, ಮಹಿಳೆಯರಿಗೆ ನರೇಗಾ ಕೆಲಸ ಕೊಡಲಾಗುತ್ತಿತ್ತು. ಇದನ್ನು ಬಿಜೆಪಿ ನಾಶ ಮಾಡೋಕೆ ಹೊರಟಿದೆ. ಶೇ.60:40 ಶೇರ್ ಕೊಡಬೇಕು ಎಂದು ಕೇಂದ್ರ ಮಾಡಿದೆ. ರಾಜ್ಯದ ಮೇಲೆ 25 ಸಾವಿರ ಕೋಟಿ ಹೊರೆ ಬರುತ್ತದೆ. ಇದನ್ನು ಆಗಲು ಬಿಡಬಾರದು. ಇಡೀ ದೇಶದಲ್ಲಿ ಹೆಚ್ಚು ಕಾರ್ಯಕರ್ತರು ಇರುವ ಪಕ್ಷ ಕಾಂಗ್ರೆಸ್. ನರೇಗಾ ಉಳಿಸಲು ನಾವೆಲ್ಲರು ಕೆಲಸ ಮಾಡೋಣ ಎಂದು ಕರೆ ನೀಡಿದರು.

ಅಸಮಾನತೆ ಹೋಗಲಾಡಿಸಲು ಅನೇಕ ಕಾರ್ಯಕ್ರಮಗಳನ್ನು ಕಾಂಗ್ರೆಸ್ ನೀಡಿದೆ. ಸೋನಿಯಾ ಗಾಂಧಿ ನಾಯಕತ್ವದಲ್ಲಿ ಮನಮೋಹನ್ ಸಿಂಗ್ ಅವರ ಕಾರ್ಯಕ್ರಮಗಳನ್ನು ಮೂಲಭೂತ ಹಕ್ಕುಗಳನ್ನಾಗಿ ಮಾಡಿದರು. ಆರ್‌ಟಿಐ, ಆರ್‌ಟಿಇ ಎಲ್ಲಾ ಮಾಡಿದ್ದು ಕಾಂಗ್ರೆಸ್. ಬಿಜೆಪಿ ಅವರು ಅಲ್ಲ. ಈಗ 'ರೈಟ್ ಟು ವರ್ಕ್ ನರೇಗಾ' ಹೆಸರು ಬದಲಾವಣೆ ಮಾಡಲು ಹೊರಟಿದ್ದಾರೆ. ದ್ವೇಷ ಇರಬೇಕು ಮನುಷ್ಯನಿಗೆ. ಆದರೆ ಈ ಪ್ರಮಾಣದಲ್ಲಿ ಇರಬಾರದು. ಗಾಂಧಿಯನ್ನು ಕೊಂದಮೇಲೂ ದ್ವೇಷ ಬಿಡಲಿಲ್ಲ. ನೆಹರು, ಗಾಂಧಿ, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಕಂಡರೆ ಅವರಿಗೆ ಆಗುವುದಿಲ್ಲ. ನನ್ನನ್ನು ಕಂಡರು ಆಗುವುದಿಲ್ಲ. ನನಗೇನು ಮಾಡೊಲ್ಲ ಬಿಡಿ. ಆದರೆ ನರೇಗಾ ಹೆಸರು ಬದಲಾವಣೆ ಮಾಡಿ ಜೀ ರಾಮ್ ಜೀ ಮಾಡಿದ್ದಾರೆ. ರಾಮ ಅಂದರೆ ದಶರಥ ರಾಮ ಅಲ್ಲ. ಬಿಜೆಪಿ ಅವರ ರಾಮ ಎಂದು ಕಿಡಿ ಕಾರಿದರು.

21ನೇ ಶತಮಾನಕ್ಕೆ ಅಭಿವೃದ್ಧಿ ತಂದವರು ಕಾಂಗ್ರೆಸ್‌ನವರು. ಬಿಜೆಪಿ ಕೊಡುಗೆ ಶೂನ್ಯ. ದೇಶ ಒಡೆಯೋದು, ಸಮಾಜ ಒಡೆಯೋದು, ಜಾತಿ ವ್ಯವಸ್ಥೆ ಹುಟ್ಟುಹಾಕಿದ್ದು ಇವಿಷ್ಟೇ ಬಿಜೆಪಿ ಕೊಡುಗೆ. ಚಾತುರ್ವರ್ಣ ವ್ಯವಸ್ಥೆ ಹುಟ್ಟುಹಾಕಿದ್ದು ಬಿಜೆಪಿಯವರೇ, ಸಮಾನ ಅವಕಾಶ ಬಂದಿದ್ದು ಸಂವಿಧಾನ ರಚನೆ ಆದಮೇಲೆ. ಭಾರತ ಪ್ರಜಾಪ್ರಭುತ್ವ ದೇಶ. ವಿಶ್ವದ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಜಾಪ್ರಭುತ್ವ ಬೇರೆ ಕಡೆ ಇಲ್ಲ ಎಂದ ಅವರು ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವನ್ನ ಸ್ಮರಿಸಿದರು.

ಆರ್‌ಎಸ್‌ಎಸ್ ಅವರಿಗೆ ದೇಶಕ್ಕೆ ಸ್ವಾತಂತ್ರ್ಯ ಬರೋದು ಇಷ್ಟ ಇರಲಿಲ್ಲ. ಆಧುನಿಕ ಭಾರತದ ರೂವಾರಿ ಇದ್ದರೆ ಜವಹರ ಲಾಲ್ ನೆಹರು ಅವರೇ ಹೊರತು ಬಿಜೆಪಿಯ ಅಡ್ವಾಣಿ, ವಾಜಪೇಯಿ ಆಗಲಿ ಅಲ್ಲ. ಆರ್‌ಎಸ್‌ಎಸ್, ಜನಸಂಘ, ಬಿಜೆಪಿ, ಹಿಂದೂ ಮಹಾಸಭಾ ಯಾರಿಂದಲೂ ಅಲ್ಲ. ನಾವೆಲ್ಲರು ಕಾಂಗ್ರೆಸ್ ಅನ್ನೋದು ಹೆಮ್ಮೆ ವಿಚಾರ. ಏಕೆಂದರೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್. 'ಜೈ ಜವಾನ್ ಜೈ ಕಿಸಾನ್' ಅಂತ ಹೇಳಿದರು ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ ಸಾಮಾಜಿಕ ಕ್ರಾಂತಿ ರೂವಾರಿ. ಗರೀಬಿ ಹಠಾವೋ, 20 ಅಂಶದ ಕಾರ್ಯಕ್ರಮದ ರೂವಾರಿ. ಆಹಾರದಲ್ಲಿ ಸ್ವಾವಲಂಬನೆ ಬಂದಿದ್ದರೆ ಅದೂ ಕೂಡ ಇಂದಿರಾ ಗಾಂಧಿ, ಬಾಬೂ ಜಗಜೀವನ್‌ರಾಮ್ ಅವರಿಂದ ಎಂದು ತಿಳಿವಳಿಕೆ ನೀಡಿದರು ಎಂದು ಸಿದ್ದರಾಮಯ್ಯ ಹೇಳಿದರು.

ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದಿಂದ ಪ್ರತಿಭಾ ಪುರಸ್ಕಾರ



ಕುವೆಂಪು ಜಯಂತಿ ಅಂಗವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.28(ಎಸ್‌ಪಿಎನ್)– ಮೈಸೂರು ಜೆ.ಪಿ.ನಗರದ ಡಾ.ಪುಟ್ಟರಾಜ ಗವಾಯಿ ಕ್ರೀಡಾಂಗಣದ ಯೋಗಮಂದಿರದಲ್ಲಿ ವಿಶ್ವ ಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪು ಜಯಂತಿ ಅಂಗವಾಗಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ಹಿರಿಯ ಸದಸ್ಯರಿಗೆ ಹಾಗೂ ಪೌರಕಾರ್ಮಿಕರನ್ನು ಶಾಸಕ ಕೆ.ಹರೀಶ್ ಗೌಡ ಭಾನುವಾರ ಸನ್ಮಾನಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಆರ್.ಗಾನವಿ, ಆರ್.ದಕ್ಷ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಟಿ.ವಿ.ಹಿಮಂತ್, ಗಂಧರ್ವ ಜಿ.ಗೌಡ, ಎಂ.ಜಿ.ಶುಭ ಮತ್ತು ಸಿನಿಮಾ ಹಿನ್ನಲೆ ಗಾಯಕಿ ಎಚ್.ಎಂ.ಲಹರಿ, ಶಿಕ್ಷಣ ಕ್ಷೇತ್ರದ ಪ್ರೇರಣ ತೇಜ್‌ರಾಜ್, ಕ್ರೀಡಾವಿಭಾಗದಲ್ಲಿ ಬಿ.ಭಾರತಿ ಅವರಿಗೆ ವಿಶೇಷ ಪುರಸ್ಕಾರ ಮಾಡಲಾಯಿತು. ಹಿರಿಯ ಸದಸ್ಯರಾದ ಮೆ.ಸು.ನಿಂಗೇಗೌಡ, ಶಿವಣ್ಣ, ರಾಘವ ಗೌಡ ಅವರನ್ನು ಸನ್ಮಾನಿಸಲಾಯಿತು. ಬಳಿಕ ಪೌರ ಕಾರ್ಮಿಕರಾದ ಶಾಂತಿ ಅಮ್ಮನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಶಾಸಕ ಕೆ.ಹರೀಶ್ ಗೌಡ, ಕುವೆಂಪು ಅವರು ಮೈಸೂರು ವಿವಿ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅವರು ಕುಲಪತಿಗಳಾಗಿದ್ದಾಗ ನಮ್ಮ ತಂದೆ ಗ್ರಂಥಾಲಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರ ಅಕಾಲಿಕ ಮರಣದಿಂದಾಗಿ ನನಗೆ ಅನುಕಂಪದ ಆಧಾರ ಮೇಲೆ ಮೈಸೂರು ವಿವಿಯಲ್ಲಿ ಕೆಲಸ ಧಕ್ಕಿತು. ನಾನೂ ಮೈಸೂರು ವಿವಿಯಲ್ಲಿ 15 ವರ್ಷ ಕೆಲಸ ಮಾಡಿದ್ದೇನೆ ಎಂದು ಹಿಂದಿನ ಅನುಭವಗಳನ್ನು ಬಿಚ್ಚಿಟ್ಟರು.

ಕೆಲಸ ನಿರ್ವಹಿಸುವ ವೇಳೆ ಮೈಸೂರು ವಿವಿ ಬೋಧಕ ಹಾಗೂ ಬೋಧಕೇತರ ಸಂಘಕ್ಕೆ ಚುನಾವಣೆ ಮೂಲಕ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಈ ವೇಳೆ ರಾಷ್ಟ್ರಕವಿ ಕುವೆಂಪು ಅವರ ಕುರಿತು ಅನೇಕ ವಿಚಾರ ಸಂಕಿರಣ, ಬದುಕು–ಬರಹ ಕುರಿತು ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ನಾನು ಕಂಡಂತೆ ಕುವೆಂಪು ಅವರ ಚಿಂತನೆಗಳು ವಿಶ್ವಮಟ್ಟದ್ದಾಗಿದೆ. ಅವರ ನಿಲುವು ಮಾನವೀತೆಯ ಪರವಾಗಿರುತ್ತಿದ್ದವು. ಇಂದಿಗೂ ಅವರ ಚಿಂತನೆಗಳು ಯುವ ಪೀಳಿಗೆಗೆ ಆದರ್ಶಪ್ರಾಯವಾಗಿದೆ ಎಂದರು.

ವೇದಿಕೆಯಲ್ಲಿ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ ಈಶ್ವರ್, ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.



ರಾಕೇಶ್ ಪಾಪಣ್ಣಗೆ ಹುಟ್ಟುಹಬ್ಬದ ಶುಭ ಹಾರೈಕೆ

ಹುಟ್ಟುಹಬ್ಬ ಆಚರಿಸಿಕೊಂಡ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರಿಗೆ ಕಾಂಗ್ರೆಸ್ ಮುಖಂಡರಾದ ಧನಗಳ್ಳಿ ಬಸವರಾಜು, ಲೋಕೇಶ್, ಕುಮಾರ್ ಮತ್ತು ಮಂಜು ಮತ್ತಿತರರು ಶುಭಾಶಯ ಕೋರಿದರು.

ಉಳ್ಳವರು ಸಮಾಜಮುಖಿ ಕಾರ್ಯಗಳಿಗೆ ಕೈ ಜೋಡಿಸಿ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ



ನಟರಾಜ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಮಾಡ್ಯೂಲ್ ಕೃತಕ ಕೈ ಮತ್ತು ಕಾಲಿನ ಅಂಗಾಂಗಳನ್ನು ವಿಶೇಷ ವಿಕಲಚೇತನರಿಗೆ ವಿತರಿಸುವ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಉದ್ಘಾಟಿಸಿದರು.

ಮೈಸೂರು, ಡಿ.28– ಉಳ್ಳವರು ಸಮಾಜಮುಖಿ ಕಾರ್ಯಗಳಿಗೆ ಕೈ ಜೋಡಿಸಿ ದಾನ ಮಾಡುವ ಮೂಲಕ ಪುಣ್ಯ ಕಟ್ಟಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಪ್ರೈವೇಟ್ ಲಿಮಿಟೆಡ್ ಮೈಸೂರು, ಆಶ್ರಯ್ ಸೇವಾ ಸನ್‌ಸ್ಥಾನ್, ಲಯನ್ಸ್ ಅಂತರಾಷ್ಟ್ರೀಯ ಜಿಲ್ಲೆ317ಜಿ, ಜೈನ ಮಿಲನ್ ಚಾರಿಟೇಬಲ್ ಟ್ರಸ್ಟ್ ಮೈಸೂರು ವತಿಯಿಂದ ನಟರಾಜ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಮಾಡ್ಯೂಲ್ ಕೃತಕ ಕೈ ಮತ್ತು ಕಾಲಿನ ಅಂಗಾಂಗಳನ್ನು ವಿಶೇಷ ವಿಕಲಚೇತನರಿಗೆ ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನಿಗೆ ಅತಿ ಮುಖ್ಯವಾದುದು ಕೈ–ಕಾಲು ಅಂಗಾಂಗಳು, ಇವು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಸರ್ಕಾರದಿಂದ ಯಾವುದೇ ಸಹಾಯ ಪಡೆಯದೇ ಹಲವಾರು ಸಂಘ–ಸಂಸ್ಥೆಗಳನ್ನು ಒಗ್ಗೂಡಿಸಿಕೊಂಡು ಎಲ್ಲರಿಗೂ ಕೃತಕ ಕೈ ಕಾಲುಗಳನ್ನು ನೀಡುತ್ತಿರುವುದು ಒಳ್ಳೆಯ ಕೆಲಸ. ಸರ್ಕಾರ ಎಲ್ಲವನ್ನೂ ಎಲ್ಲರಿಗೂ ಕೊಡಲು ಸಾಧ್ಯವಿಲ್ಲ. ಎಷ್ಟು ಕೊಟ್ಟರೂ ಕೂಡ ಇಂದು ಸಮಾಜದಲ್ಲಿ ಕೈ ಕಾಲು ಇಲ್ಲದವರು, ಕಣ್ಣು ಇಲ್ಲದವರು ಲಕ್ಷಾಂತರ ಜನರಿಗೆ ಬೇಡಿಕೆ ಇದೆ. ಜೈನ ಸಮಾಜ ಯಾವುದೇ ಪ್ರಚಾರ ಪಡೆಯದೆ ಒಳ್ಳೆಯ ಕೆಲಸ ಮಾಡುತ್ತಿದೆ. ಪಿಂಜರಾಪೋಲ್ ನಡೆಸುತ್ತಿದೆ ಎಂದರು.

ಪ್ರತಿಯೊಬ್ಬ ಮನುಷ್ಯನಿಗೂ ಏನಾದರೊಂದು ನೋವು ಇದ್ದೇ ಇರುತ್ತದೆ. ಮನುಷ್ಯ ಈ ಭೂಮಿಯ ಮೇಲೆ ಹುಟ್ಟಿದ ಮೇಲೆ ಒಳ್ಳೆಯ ಹೆಜ್ಜೆ ಗುರುತನ್ನು ಬಿಟ್ಟು ಹೋಗಬೇಕು ಎಲ್ಲರ ಬಳಿ ಹಣ ಇರುತ್ತದೆ. ಆದರೆ ಅವರ ಕುಟುಂಬಕ್ಕೆ ಮಾತ್ರ ವಿನಿಯೋಗಿಸುತ್ತಾರೆ ಆದರೆ ಇಂತಹ ಸೇವಾ ಸಂಸ್ಥೆಗಳು ಸೇರಿಕೊಂಡು ಉಚಿತವಾಗಿ ಕೃತಕ ಕಾಲು, ಕೈಗಳನ್ನು ದಾನ ಮಾಡುತ್ತಿದ್ದಾರೆ. ಇಂತಹ ದಾನ ಮಾಡುವ ಉದ್ದಾರತೆ ಎಲ್ಲರಿಗೂ ಬರಲಿ ಎಂದರು.

ಸಮಾರಂಭದಲ್ಲಿ ಕನಕಗಿರಿ ಜೈನ ಮಠದ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶಾಸಕ ಟಿ.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಲಯನ್ ಹೇಮಂತ ಕುಮಾರ್ ಬನ್ನಾರಿ, ಕೆ.ರಾಜಶೇಖರ್, ಡಾ. ಶಂಕರೇಗೌಡ, ವಿನೋದ್ ಕುಮಾರ್ ಜೈನ್, ಮದನ್ ಲಾಲ್ ಮಾರೋ, ಗೋಲ್ಚಾ ಸುರೇಶ್ ಹಾಜರಿದ್ದರು. ಕಾರ್ಯಕ್ರಮದಲ್ಲಿ 80ಕ್ಕೂ ಹೆಚ್ಚು ಮಂದಿಗೆ ಕೃತಕ ಕೈ ಕಾಲು ಅಂಗಾಂಗಗಳನ್ನು ವಿತರಿಸಲಾಯಿತು.

'ಅಂಬೇಡ್ಕರ್ ವಿಚಾರಧಾರೆ-ನಾನೇಕೆ ಒಪ್ಪುತ್ತೇನೆ' ಮಹಾಕೃತಿ ಕುರಿತ ಚರ್ಚೆ-ಸಂವಾದ

ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ವಿಚಾರಧಾರೆಗಳೊಂದಿಗೆ ಅಸಮಾನತೆ, ಶೋಷಣೆ ವಿರುದ್ಧ ಹೋರಾಡಬೇಕು

ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಕರೆ



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ನಡೆದ 'ಅಂಬೇಡ್ಕರ್ ವಿಚಾರಧಾರೆ–ನಾನೇಕೆ ಒಪ್ಪುತ್ತೇನೆ' ಮಹಾಕೃತಿ ಕುರಿತ ಚರ್ಚೆ–ಸಂವಾದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು

ಮೈಸೂರು,ಡಿ.28(ಪಿಎಂ)– ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಕುವೆಂಪು ಅವರ ವಿಚಾರಧಾರೆಗಳೊಂದಿಗೆ ನಾವು ಅಸಮಾನತೆ, ಶೋಷಣೆ ಹಾಗೂ ಯಾವುದೇ ಅನ್ಯಾಯದ ವಿರುದ್ಧ ಹೋರಾಡಬೇಕು ಎಂದು ಪ್ರಗತಿಪರ ಚಿಂತಕ ಪ್ರೊ. ಕಾಳೇಗೌಡ ನಾಗವಾರ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ, ಕರ್ನಾಟಕ ವಿಕಾಸವಾಹಿನಿ ಹಾಗೂ ಅಂಬೇಡ್ಕರ್ ಕಾರವಾನ್ ದ್ವಿ ಭಾಷಾ ಪತ್ರಿಕೆ ಮತ್ತು ವಿಶ್ವಪಥ ಮಾಸ ಪತ್ರಿಕೆ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ 'ಅಂಬೇಡ್ಕರ್ ವಿಚಾರಧಾರೆ–ನಾನೇಕೆ ಒಪ್ಪುತ್ತೇನೆ' ಮಹಾಕೃತಿ ಕುರಿತ ಚರ್ಚೆ–ಸಂವಾದ ಹಾಗೂ ವಿಶ್ವಪಥ ಮತ್ತು ಅಂಬೇಡ್ಕರ್ ಕಾರವಾನ್ ವಿಶೇಷಾಂಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಸಮಾನತೆ, ಸಹಬಾಳ್ವೆ ನೆಲೆಗೊಳ್ಳಬೇಕಾದರೆ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ವಿಚಾರಧಾರೆಗಳನ್ನು ಸಮಾಜಕ್ಕೆ ತಲುಪಿಸಬೇಕಿದೆ. ಒಳ್ಳೆಯ ಮನಸ್ಸು ಮಾತ್ರ ನಮ್ಮನ್ನು ಕಾಪಾಡುತ್ತದೆಯೇ ಹೊರತು ನಾವು ಗಳಿಸುವ ಸಂಪತ್ತಲ್ಲ. ಸರ್ವಾಧಿಕಾರಿಗಳು ಒಂದಲ್ಲ ಒಂದು ದಿನ ಮಣ್ಣು ಮುಕ್ಕುತ್ತಾರೆ. ಹಿಟ್ಲರ್ ಸೇರಿದಂತೆ ಮೊದಲಾದವರು ಸರ್ವಾಧಿಕಾರಿಗಳಾಗಿ ಮೆರೆದರು. ಅಂತಹ ವಾತಾವರಣವನ್ನು ಯಾರು ಕೊಂಡಾಡುವುದಿಲ್ಲ ಎಂದು ಹೇಳಿದರು.


ಉದ್ಘಾಟನೆ ನೆರವೇರಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಾಗೂ ಆದಿವಾಸಿ ಮುಖಂಡ ಎಂ.ಸೋಮಣ್ಣ ಮಾತನಾಡಿ, ನಮ್ಮ ತಂದೆ–ತಾಯಿಗೆ ನಾನೇ ಕೊನೆ ಮಗ. ನಮ್ಮ ಕುಟುಂಬದಲ್ಲಿ ಕಿತ್ತು ತಿನ್ನುವ ಬಡತನ ಇತ್ತು. ನಮ್ಮ ತಂದೆ ಹುಣಸೂರು ತಾಲೂಕಿನ ಅರಣ್ಯ ಪ್ರದೇಶದಿಂದ ಕೋಟೆ ತಾಲೂಕಿನತ್ತ ವಲಸೆ ಬಂದರು. ನನ್ನ ತಾಯಿಗೆ ವಯಸ್ಸಾದಾಗಿದ್ದ ದಿನಗಳಲ್ಲಿ ನಾನು ಇನ್ನು ಚಿಕ್ಕವನು. ಓದಲು ಶಾಲೆಗೆ ಸಹ ಸೇರಿಸಿದ್ದರು. ಆದರೆ ಓದು ತಲೆಗೆ ಹತ್ತಲಿಲ್ಲ, ಕೇವಲ ನಾಲ್ಕನೇ ತರಗತಿವರೆಗೆ ಅಷ್ಟೇ ಓದಿದೆ ಎಂದು ಹೇಳಿದರು.

ನಮ್ಮ ತಾಯಿ ಜಮೀನ್ದಾರ ಜಮೀನಿನಲ್ಲಿ ಹುಲ್ಲು ಕೊಯ್ದು ಅದನ್ನು ಮಾರಿ ಅದರಲ್ಲಿ ಬರುತ್ತಿದ್ದ ಹಣದಲ್ಲಿ ಗಂಜಿ ಕಾಯಿಸಿ ಕೊಡುತ್ತಿದ್ದರು. ಒಂದು ದಿನ ದುಡ್ಡು ಹೆಚ್ಚು ಸಿಗಲೆಂದು ದಪ್ಪ ಹೊರೆ ಕಟ್ಟಿ ಹೊತ್ತುಕೊಂಡು ಬರುವಾಗ ಮಳೆ ಕಾರಣ ಜಾರಿ ಬಿದ್ದರು. ಆಗ ಕೆಳಗೆ ಬಿದ್ದ ಹುಲ್ಲಿನ ಹೊರೆ ಕಂಡ ದನಗಳು ಮೇಯಲು ಬಂದು ನಮ್ಮ ತಾಯಿಯನ್ನು ತುಳಿದು ಗಾಯಗೊಳಿಸಿದ್ದವು. ಅಂದೇ ಓದುವುದು ಬೇಡವೆಂದು ತೀರ್ಮಾನಿಸಿ ಕೆಲಸ ಹುಡುಕಿಕೊಂಡು ಹೊರಟೆ, ಜಮೀನ್ದಾರರ ಮನೆಯಲ್ಲಿ ಕಸ ಗುಡಿಸುವ, ದನ ಮೇಯಿಸುವ ಕೆಲಸ ಸಿಕ್ಕಿತು. ಒಂದು ದಿನ ಕೊಟ್ಟಿಗೆ ಸ್ವಚ್ಛ ಮಾಡದೆ ಇದ್ದ ನನ್ನನ್ನು ಸರಿಯಾಗಿ ಗುಡಿಸಿಲ್ಲವೆಂದು ಜಮೀನ್ದಾರರು ಹಿಂಬದಿಯಿಂದ ಮುಳ್ಳು ಕಡ್ಡಿಯಿಂದ ಹಲ್ಲೆ ಮಾಡಿದ್ದರು. ರಕ್ತ ಹರಿದರು ಜಮೀನ್ದಾರರ ಮನೆಯಲ್ಲಿ ಕೊಡುವ ಮುದ್ದೆ ಪಡೆದು ನಮ್ಮ ತಾಯಿಗೆ ತಿನ್ನಿಸಿದ್ದೆ ಎಂದು ತಮ್ಮ ಬದುಕಿನ ನೋವು ಹಂಚಿಕೊಂಡರು.

ನಾವೇ ಇಷ್ಟು ಕಷ್ಟ ಅನುಭವಿಸಿದ್ದೇವೆ ಎಂದರೆ ಡಾ.ಅಂಬೇಡ್ಕರ್ ಅವರು ಎಷ್ಟು ಸಂಕಷ್ಟಗಳನ್ನು ಅನುಭವಿಸಿದ್ದರು ಎಂದು ನಾವು ಅವಲೋಕಿಸಬೇಕು. ಆ ಕಷ್ಟದಲ್ಲೂ ಅವರು ಹೋರಾಡಿ ಸಂವಿಧಾನ ಕಲ್ಪಿಸದೇ ಇದ್ದರೆ ನಮ್ಮ ಸಮುದಾಯದವರು ಈ ಮಟ್ಟಕ್ಕೆ ಬರಲು ಸಾಧ್ಯವಿರುತ್ತಿರಲಿಲ್ಲ. ಅಂಬೇಡ್ಕರ್ ಅವರಿಗೆ ನಾವು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಅವರ ಮತ್ತೆ ಹುಟ್ಟಿಬರಬೇಕು ಎಂದು ಭಾವುಕರಾದರು.

ಇದೇ ವೇಳೆ ಹೋರಾಟಗಾರ ಎಂ.ವಿ. ಶಿವಪ್ರಕಾಶ್ ಮಕೋಡು, ಶ್ರೀ ಕೆಂಗಾಕಿ ಮಾರಮ್ಮ ದೇವಸ್ಥಾನದ ಕಾರ್ಯದರ್ಶಿ ಎಸ್.ಎನ್.ರಮೇಶ್, ಗೌಸ್ ಆರ್ಟ್ಸ್‌ನ ಕುಂಚ ಕಲಾವಿದ ಅಲ್ತಾಫ್ ಪಾಷಾ, ಚಿಂತಕ ಅಲ್ಲಾಡಾಸ್, ಶ್ರೀ ಕೇಶವ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರೊ.ಎಸ್.ಶ್ರೀವತ್ಸ ಅವರಿಗೆ ಮೈಸೂರುರತ್ನ ಕಾಯಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಅಲ್ಲದೆ, 'ಅಂಬೇಡ್ಕರ್ ವಿಚಾರಧಾರೆ–ನಾನೇಕೆ ಒಪ್ಪುತ್ತೇನೆ' ಕೃತಿಯ 2ನೇ ಮುದ್ರಣ ಬಿಡುಗಡೆ ಮಾಡಲಾಯಿತು. ಮಹಾಬೋಧಿ ಭಗವಾನ್ ಬುದ್ಧ ಶಿಕ್ಷಣ ಸಂಸ್ಥೆಗಳ ಡಾ.ಯಮದೂರು ಸಿದ್ದರಾಜು, ನಂಜನಗೂಡಿನ ಅಖಿಲ ಭಾರತ ವಿಶ್ವಕರ್ಮ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ಹೆಚ್.ಎಂ.ಶಿವಕುಮಾರ್, ಮುಖಂಡ ಅಹಿಂದ ಜವರಪ್ಪ ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಪೂರ್ಣಿಗಾಲಿ ಮರಡೇಶಮೂರ್ತಿ ಮತ್ತಿತರರು ಹಾಜರಿದ್ದರು.

ಹುಟ್ಟುಹಬ್ಬದ ಶುಭ ಹಾರೈಕೆ



ಮೈಸೂರು ನಗರ ಕಾಂಗ್ರೆಸ್ ಸಮಿತಿ ವತಿಯಿಂದ ಕೆಪಿಸಿಸಿ ಸಂಯೋಜಕ ಸಿ.ಎಸ್.ರಘು ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಮುಖಂಡ ನಾಗೇಶ್ ಕರಿಯಪ್ಪ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡ ಕೊಪ್ಪಲ್, ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎಸ್.ಆರ್.ನಾಗೇಶ್, ಸೇವಾದಳದ ಅಧ್ಯಕ್ಷ ಅಶೋಕ್, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜ್ ಅರಸು, ಮಾಧ್ಯಮ ವಕ್ತಾರ ಮಹೇಶ್, ಕಾರ್ಯದರ್ಶಿಗಳಾದ ಗಿರೀಶ್, ಡೈರಿ ವೆಂಕಟೇಶ್, ಓಬಿಸಿ ಅಧ್ಯಕ್ಷ ಮಹೇಂದ್ರ, ಸೇವಾದಳದ ಮೋಹನ್, ಲತಾ ರಂಗನಾಥ್, ನಾಗಣ್ಣ, ಕುಮಾರ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಅಕಸ್ಮಾತ್ ಸತ್ತು ಹೋದ್ರೆ ನೀವು ಏನ್ ಮಾಡ್ತೀರಿ?
ಗಂಡ : ನೀನಿಲ್ಲದೆ ನಾ ಹೇಗಿರಲಿ, ನಾನು ನಿನ್ನ ಹಿಂದೇನೇ ಬರ್ತೀನಿ!
ಹೆಂಡತಿ : ನನ್ನ ಕಂಡ್ರೆ ಅಷ್ಟು ಪ್ರೀತಿನೇ?
ಗಂಡ : ಹಾಗಲ್ವೆ.... ನೀನಿದ್ರೆ... ನಿನ್ನ ಬಾಯಿಗೆ ಹೆದರಿ ಸಾಲಗಾರರು ಯಾರು ನನ್ನ ಹತ್ತಿರ ಬರಲ್ಲ. ನೀನೇ ಹೋದ್ರೆ ನನ್ನ ಗತಿ ಏನು? ಅವರು ಸಾಯಿಸೋಕೆ ಮುಂಚೆ ನಾನೇ ಸಾಯೋದು ಒಳ್ಳೇದಲ್ವೆ?

ಮೈಸೂರು ಮಿತ್ರ
ಸೋಮವಾರ, 29 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜಗಳವಾಗದ ಸಂಬಂಧಗಳು ಸುಂದರವಾದವು,
ಜಗಳವಾದರೂ ಮುರಿಯದ ಸಂಬಂಧಗಳು ಅದ್ಭುತವಾದವು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಸವನ ಹಿಂದೆ ಬಾಲ, ಲಗ್ನದ ಹಿಂದೆ ಸಾಲ

ನಿಮ್ಮ ಪತ್ರಗಳು

ಮಧ್ಯವರ್ತಿಗಳ ಪಾಲಾದ ಮಾರ್ಗಸೂಚಿ ಫಲಕಗಳು

ಮಾನ್ಯರೆ,

ಮೈಸೂರು ಪ್ರಮುಖ ಪ್ರವಾಸಿ ತಾಣವಾಗಿದ್ದು, ದೇಶ–ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಸಹಾಯಕವಾಗುವ ಉದ್ದೇಶದಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ನಗರದ ಪ್ರಮುಖ ಜಂಕ್ಷನ್‌ಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಾರ್ಗಸೂಚಿ ಫಲಕಗಳನ್ನು ಅಳವಡಿಸಲಾಗಿದೆ. ಈ ಫಲಕಗಳು ಪಾರಂಪರಿಕ ಸ್ಥಳಗಳು, ಆಸ್ಪತ್ರೆಗಳು, ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತು ಇತರೆ ಅಗತ್ಯ ಸ್ಥಳಗಳಿಗೆ ಸರಿಯಾದ ಮಾರ್ಗ ತಿಳಿಸುವ ಉದ್ದೇಶದಿಂದ ನಿರ್ಮಿಸಲಾಗಿತ್ತು.

ಆದರೆ, ವಿಷಾದಕರ ಸಂಗತಿಯೆಂದರೆ ಇವುಗಳಲ್ಲಿ ಬಹುತೇಕ ಫಲಕಗಳನ್ನು ಈಗ ಮಧ್ಯವರ್ತಿಗಳು ಹಾಗೂ ಖಾಸಗಿ ವ್ಯಕ್ತಿಗಳು ವಾಣಿಜ್ಯ ಜಾಹೀರಾತುಗಳಿಗಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಕೆಲವು ಫಲಕಗಳ ಎರಡೂ ಬದಿಗಳಲ್ಲೂ ಜಾಹೀರಾತುಗಳನ್ನು ಅಳವಡಿಸಿರುವುದು ಪ್ರವಾಸಿಗರು ಹಾಗೂ ನಾಗರಿಕರಲ್ಲಿ ಗೊಂದಲ ಉಂಟುಮಾಡುವುದಲ್ಲದೆ, ಫಲಕಗಳ ಉದ್ದೇಶವನ್ನೇ ಹಾಳು ಮಾಡುತ್ತಿದೆ.

ಉದಾಹರಣೆಗೆ ಐಶ್ವರ್ಯ ಪೆಟ್ರೋಲ್ ಬಂಕ್ ಜಂಕ್ಷನ್ ನಿಂದ ಮೆಟ್ರೋಪೋಲ್ ಸಿಗ್ನಲ್‌ವರೆಗೆ 16 ಫಲಕಗಳಿದ್ದು, ಎಲ್ಲಾ ಫಲಕಗಳ ಎರಡು ಬದಿಯಲ್ಲೂ ಜಾಹೀರಾತು ಅಳವಡಿಸಿರುವುದು ಖಂಡನೀಯ. ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಲಾದ ಆಸ್ತಿಯನ್ನು ಖಾಸಗಿ ಲಾಭಕ್ಕಾಗಿ ಬಳಸಿಕೊಳ್ಳೋದು ಅತ್ಯಂತ ಅಸಮಂಜಸ,

ಇಂತಹ ದುರುಪಯೋಗದಿಂದ ಪಾರಂಪರಿಕ ನಗರಿಯೆಂದೇ ಪ್ರಸಿದ್ಧವಾದ ಮೈಸೂರಿನ ಸೌಂದರ್ಯ, ಘನತೆ ಕುಂಠಿತವಾಗುತ್ತಿದ್ದು, ಜಾಹೀರಾತು ಹಕ್ಕುಗಳನ್ನು ನೀಡಬೇಕಾದರೆ, ಸ್ಪಷ್ಟ ಮಾರ್ಗಸೂಚಿಗಳೊಂದಿಗೆ, ದಿಕ್ಕು ಸೂಚನೆ ದೃಶ್ಯ ಯಾವುದೇ ರೀತಿಯಲ್ಲಿ ಹಾನಿಗೊಳಗಾಗಬಾರದು. ಆದ್ದರಿಂದ, ಕೂಡಲೇ ನಗರದಲ್ಲಿನ ಎಲ್ಲಾ ದಿಕ್ಕು ಸೂಚನಾ ಫಲಕಗಳ ಪರಿಶೀಲನೆ ನಡೆಸಿ, ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಿ ಈ ದುರುಪಯೋಗಕ್ಕೆ ಕಾರಣರಾದ ಅಧಿಕಾರಿಗಳು ಅಥವಾ ಏಜೆನ್ಸಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಸ್ವಚ್ಛ, ಪ್ರವಾಸಿಗರ ಸ್ನೇಹಿ ನಗರವೆಂಬ ಮೈಸೂರಿನ ಗುರುತನ್ನು ಕಾಪಾಡಲು ತಕ್ಷಣವೇ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ವಿನಂತಿಸಿದೆ. **–ವಿನೋದ್ ಶಂಕರ್, ಅವಿಯಾನ ಫೌಂಡೇಶನ್.**

ಬಲೂನ್ ಮಾರಾಟ, ಬಳಕೆ ನಿಷೇಧಿಸಿ

ಮಾನ್ಯರೆ,

ಮೈಸೂರು ಅರಮನೆ ಸಮೀಪ ಸಂಭವಿಸಿದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದ ಹಿನ್ನೆಲೆಯಲ್ಲಿ ಬಲೂನ್ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸುವಂತೆ ಕ್ರಮ ಕೈಗೊಳ್ಳುವುದು ಅಗತ್ಯ.ಇತ್ತೀಚೆಗೆ ಮೈಸೂರು ಅರಮನೆ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಸಂಭವಿಸಿದ್ದು, ಸಾರ್ವಜನಿಕ ಸುರಕ್ಷತೆಗೆ ಗಂಭೀರ ಅಪಾಯ ಉಂಟಾಗಿದೆ. ಮೈಸೂರು ಅರಮನೆ ದೇಶ–ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡುವ ಪ್ರಮುಖ ಐತಿಹಾಸಿಕ ಸ್ಮಾರಕವಾಗಿದ್ದು, ಇಲ್ಲಿ ಮಕ್ಕಳೂ ಸೇರಿದಂತೆ ಸಾವಿರಾರು ಜನರು ಪ್ರತಿದಿನ ಆಗಮಿಸುತ್ತಾರೆ.

ಈ ಪ್ರದೇಶದಲ್ಲಿ ಹೀಲಿಯಂ ಗ್ಯಾಸ್ ಬಲೂನ್‌ಗಳ ಅಕ್ರಮ ಮಾರಾಟ ಮತ್ತು ಅಸುರಕ್ಷಿತ ಬಳಕೆ ಇಂತಹ ಅಪಘಾತಗಳಿಗೆ ಪ್ರಮುಖ ಕಾರಣವಾಗುತ್ತಿರುವುದು ಆತಂಕಕಾರಿ ವಿಷಯ. ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ತಡೆಯಲು, ಮೈಸೂರು ಅರಮನೆ ಸುತ್ತಮುತ್ತಲ ಪ್ರದೇಶದಲ್ಲಿ ಹೀಲಿಯಂ ಗ್ಯಾಸ್ ಬಲೂನ್‌ಗಳ ಮಾರಾಟ, ಸಂಗ್ರಹ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ವಿನಂತಿಸಿಕೊಳ್ಳಲಾಗುತ್ತದೆ. ಅದೇ ರೀತಿ, ಸಾರ್ವಜನಿಕ ಸುರಕ್ಷತೆ ದೃಷ್ಟಿಯಲ್ಲಿಟ್ಟುಕೊಂಡು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ತಕ್ಷಣ ಸ್ಪಂದಿಸಬೇಕೆಂದು ಮನವಿ. **–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು.**

ವಿದ್ಯಾರ್ಥಿಗಳ ಸಹಾಯಧನ ಹೆಚ್ಚಿಸಿ

ಮಾನ್ಯರೆ,

ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದಲ್ಲಿ ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳನ್ನು ಮನಗಂಡು ಸರ್ಕಾರವು ವಿದ್ಯಾರ್ಥಿ ಸಹಾಯಧನ ಯೋಜನೆಗಳನ್ನು ಪ್ರಾರಂಭಿಸಿದೆ. ಅವುಗಳಲ್ಲಿ ನ್ಯಾಷನಲ್ ಮೀನ್–ಕಂ–ಮೆರಿಟ್ ವಿದ್ಯಾರ್ಥಿ ಸಹಾಯಧನ ಯೋಜನೆ (ಎನ್‌ಎಂಎಂಎಸ್‌ಎಸ್) ಅತ್ಯಂತ ಮಹತ್ವಪೂರ್ಣವಾದ ಯೋಜನೆಯಾಗಿದೆ. ಈ ಯೋಜನೆಯಡಿ, ಆರ್ಥಿಕವಾಗಿ ಬಡ ಕುಟುಂಬಗಳಿಂದ ಬಂದ ಪ್ರತಿಭಾಶಾಲಿ ವಿದ್ಯಾರ್ಥಿಗಳಿಗೆ ಪ್ರತಿವರ್ಷ 12,000 ರೂ. (ಪ್ರತಿ ತಿಂಗಳು 1000 ರೂ.) ಸಹಾಯಧನ ನೀಡಲಾಗುತ್ತದೆ. ಆದರೆ, ಇಂತಹ ಬಡತನದಲ್ಲಿರುವ ವಿದ್ಯಾರ್ಥಿಗಳ ಪೋಷಕರು, ಈ ಮೊತ್ತವನ್ನು ಆಸರೆಗಾಗಿ ಸಮರ್ಪಕವಾಗಿ ಬಳಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು, ಆರ್ಥಿಕವಾಗಿ ಹೆಚ್ಚು ಬಲವಾದ ಪ್ರೋತ್ಸಾಹವು ಅಗತ್ಯವಿದೆ. ಆದ್ದರಿಂದ, ಈ ಮೊತ್ತವನ್ನು ಕನಿಷ್ಠ 2000 ರೂ.ಗೆ ಹೆಚ್ಚಿಸಬೇಕು.

ಈ ಸಹಾಯಧನವು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿಗೆ ಪೂರಕವಾಗುತ್ತದೆ. ದೇಶ ಎದುರಿಸುತ್ತಿರುವ ಹಣದುಬ್ಬರದಿಂದಾಗಿ, ಪಠ್ಯಪುಸ್ತಕಗಳು, ತರಗತಿಗೆ ಹೋಗಲು ಸಾರಿಗೆ ಖರ್ಚು ಮತ್ತು ಇತರೇ ಖರ್ಚುಗಳು ಆರ್ಥಿಕ ಹೊರೆ ಹೆಚ್ಚು ಮಾಡುತ್ತಿವೆ. ಹಾಗಾಗಿ, ಸಹಾಯಧನದ ಮೊತ್ತವನ್ನು 2000 ರೂ.ಗೆ ಹೆಚ್ಚಿಸುವುದರಿಂದ, ವಿದ್ಯಾರ್ಥಿಗಳಿಗೆ ಹೆಚ್ಚು ಸಹಾಯವಾಗುತ್ತದೆ ಮತ್ತು ಅವರು ತಮ್ಮ ವಿದ್ಯಾಭ್ಯಾಸವನ್ನು ತುಸು ಸುಲಭವಾಗಿ ಮುಂದುವರೆಸಬಹುದು. ಆದ್ದರಿಂದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ತಕ್ಷಣ ಈ ಕ್ರಮಗಳು ಅತ್ಯವಶ್ಯಕ.

–ಡಾ.ವಿಜಯಕುಮಾರ ಎಚ್.ಕೆ., ಮೈಸೂರು.

ಕುವೆಂಪುನಗರ ಮಾರ್ಗಕ್ಕೆ ಹೆಚ್ಚು ಬಸ್ ಬರಲಿ

ಮಾನ್ಯರೆ,

ಕುವೆಂಪುನಗರ ಎಂ–ಬ್ಲಾಕ್ ಬಸ್ ತಂಗುದಾಣದಿಂದ ನಿತ್ಯವೂ ಬೆಳಗ್ಗೆ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ತೆರಳುವ ಈ ಮಾರ್ಗದಲ್ಲಿ ಬೆಮಲ್ ಇಂದ ಬರುವ 94 ನಂ. ನಗರ ಸಾರಿಗೆ ಬಸ್ಸುಗಳು ಸರಿಯಾದ ಸಮಯಕ್ಕೆ ಬರುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕೆಲವು ಸಂದರ್ಭಗಳಲ್ಲಿ ಕುವೆಂಪುನಗರ ಕಾಂಪ್ಲೆಕ್ಸ್ ಹತ್ತಿರ ಹೋಗಿ, ಬೇರೆ ಬೇರೆ ಕಡೆಯಿಂದ ಬರುವ ಬಸ್ಸುಗಳನ್ನು ಹತ್ತುವ ಪ್ರಸಂಗ ಎದುರಾಗಿದೆ. ಆದ್ದರಿಂದ ಸಂಬಂಧಪಟ್ಟವರು ಈ ಮಾರ್ಗದಕ್ಕೆ ಹೆಚ್ಚಿನ ಬಸ್ ಸೌಕರ್ಯ ಕಲ್ಪಿಸಲು ಮನವಿ.

–ಸಾಯಿ ಸಂದೇಶ್ ಬಿ.ಎಸ್, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಬದುಕಲು ಬದ್ಧರಾಗಿರಬೇಕು; ಸಾಯಲು ಸಿದ್ಧರಾಗಿರಬೇಕು!



> “ ಬದುಕು ನಿಜಕ್ಕೂ ಸುಂದರವಾಗಿರುತ್ತದೆ. ಅದೆಷ್ಟೋ ಜನ ಇಲ್ಲಸಲ್ಲದ ಕಾರಣಗಳಿಗೆ ಬದುಕನ್ನು ಕುರೂಪ/ವಿರೂಪ ಮಾಡಿಕೊಂಡು ನಮ್ಮ ಬದುಕು ಚೆನ್ನಾಗಿಲ್ಲ ಎಂದು ಗೊಣಗುತ್ತಾರೆ. ಅವರವರ ಬದುಕು ಅವರಿಗೆ ಎಂದು ಭಾವಿಸಿ, ಈ ಬದುಕು ನನ್ನದು, ಅದು ಹೇಗೆ ಇರಲಿ ಅದನ್ನು ಪ್ರೀತಿಸುತ್ತೇನೆ ಎಂಬ ಮನೋ ಭಾವ ಹೊಂದಬೇಕು. ತಾಯಿಯು ತಾನು ಹೆತ್ತ ಮಗು ಹೇಗೇ ಇದ್ದರೂ ಪ್ರೀತಿಸುವಂತೆ ನಮಗೆ ದಕ್ಕಿರುವ ಬದುಕನ್ನು ಪ್ರೀತಿಸಬೇಕು, ಅದನ್ನು ಸಿಂಗರಿಸಿ ಖುಷಿಪಡಬೇಕು. ನಿರಾಸೆಯಿಂದ, ಜಿಗುಪ್ಸೆಯಿಂದ ಬದುಕಿನ ಯಾತ್ರೆಯನ್ನು ಅರ್ಧದಲ್ಲಿ ಮೊಟಕುಗೊಳಿಸಿಕೊಳ್ಳಬಾರದು ಅಂದರೆ ಆತ್ಮಹತ್ಯೆಗೆ ಶರಣಾಗಬಾರದು. ಪ್ರತಿಯೊಂದು ಪ್ರಾಣಿಪಕ್ಷಿಯು ಬದುಕಿಗಾಗಿ ಹೋರಾಟ ಮಾಡುತ್ತವೆ. ಹಾಗೆಯೇ ಮನುಷ್ಯ ಸಾಯುವ ಆಲೋಚನೆ ಬಿಟ್ಟು ಸುಂದರ ಬದುಕು ಕಟ್ಟುವ ಚಿಂತನೆ ನಡೆಸಬೇಕು. ಸಾವು ಸಹಜವಾಗಿ ಹತ್ತಿರವಾದಾಗ ಸ್ವೀಕರಿಸಬೇಕು.

ಭೂಮಿಯ ಮೇಲೆ ಜನ್ಮ ತಾಳುವ ಪ್ರತಿಯೊಂದು ಪ್ರಾಣಿಪಕ್ಷಿಯೂ ಅಂತಿಮವಾಗಿ ಮರಣಹೊಂದಲೇಬೇಕು. ಆಯುಷ್ಯ ವ್ಯತ್ಯಾಸವಾಗಬಹುದು, ಆದರೆ ಸಾವಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಸಾವು ಎಂಬುದು ಅಂತಿಮ ಸತ್ಯ. ಮನುಷ್ಯ ಹುಟ್ಟಿದ ದಿನದಿಂದಲೇ ಅವನ ಪಯಣ ಸಾವಿನೆಡೆಗೆ ಎಂಬುದು ಕಹಿ ಎನಿಸಿದರೂ ಸತ್ಯವೇ ! ಬದುಕಿನ ಮೇಲೆ ಯಾರಿಗೆ ಎಷ್ಟು ಪ್ರೀತಿ ಇದೆಯೋ ಗೊತ್ತಿಲ್ಲ. ಆದರೆ ಸಾವಿನ ಬಗ್ಗೆ ಬಹುತೇಕ ಎಲ್ಲರಿಗೂ ಭಯ ಇದ್ದೇ ಇರುತ್ತದೆ. ನಿತ್ಯ ಸಾವುಗಳನ್ನು ನೋಡುತ್ತಿದ್ದರೂ, ಕೇಳುತ್ತಿದ್ದರೂ, ಸ್ಮಶಾನಗಳಿಗೆ ಹೋದಾಗ ಮೃತ ದೇಹಗಳನ್ನು ಹೂಳುವುದು/ಸುಡುವುದನ್ನು ಕಂಡರೂ, ಸಾವಿನ ಸತ್ಯವನ್ನು ಅಷ್ಟು ಸುಲಭವಾಗಿ ಅರಗಿಸಿಕೊಳ್ಳಲು ಅನೇಕರಿಗೆ ಕಷ್ಟವಿದೆ. ಅಳುತ್ತಲೇ ಈ ಭೂಮಿಗೆ ಬರುವ ಮನುಷ್ಯ, ಅವಕಾಶವಿದ್ದಷ್ಟು ಕಾಲ ಅರ್ಥಪೂರ್ಣವಾಗಿ ಬದುಕಿ, ನಗುಮುಖದಿಂದ ಈ ಭೂಮಿಯಿಂದ ನಿರ್ಗಮಿಸುವುದು ಒಳಿತು.

ಇತ್ತೀಚೆಗೆ ಕೇರಳದ ಮಾಲಪಳ್ಳಿಯಲ್ಲಿ ಹಿರಿಯ ಜೀವ ಮರಿಯಮ್ಮ ಅವರು ನಿಧನ ಹೊಂದುತ್ತಾರೆ. 95 ವರ್ಷಗಳು ಸಾರ್ಥಕವಾದ ತುಂಬು ಜೀವನವನ್ನು ಕಂಡ ಮರಿಯಮ್ಮ ಅವರನ್ನು ಅವರ ಕುಟುಂಬ ಸದಸ್ಯರು ನಗುಮುಖದಿಂದ ಅವರನ್ನು ಬೀಳ್ಕೊಡುತ್ತಾರೆ. ಅವರ ಶವಪೆಟ್ಟಿಗೆಯೊಂದಿಗೆ ಕುಟುಂಬದ ಸದಸ್ಯರೆಲ್ಲಾ ನಗುಮುಖದಿಂದ ಗುಂಪುಚಿತ್ರವನ್ನು ತೆಗೆಸಿಕೊಳ್ಳುತ್ತಾರೆ. ಇಡೀ ಕುಟುಂಬದ ಸದಸ್ಯರು ಇದೊಂದು ಸಹಜ ಘಟನೆ ಎಂದು ಪರಿಗಣಿಸಿ, ತಮ್ಮೊಟ್ಟಿಗೆ ಇಷ್ಟು ವರ್ಷಗಳು ಸಂತೋಷದಿಂದ ಇದ್ದ ಆ ಹಿರಿಯ ಸದಸ್ಯರನ್ನು ಕಣ್ಣೀರಿಟ್ಟು, ಗೋಳಾಡಿ ಕಳುಹಿಸುವ ಬದಲು ಸಂತೋಷದಿಂದ ಅವರಿಗೆ ವಿದಾಯ ಹೇಳಿದ್ದಾರೆ. ಬಂದ ಸದಸ್ಯರನ್ನು ನಗುಮುಖದಿಂದ ಸತ್ಕರಿಸಿ ಮಾದರಿಯಾಗಿದ್ದಾರೆ. ಈ ವಿಚಾರವು ಸಮಾಜಿಕ ಜಾಲತಾಣದಲ್ಲಿ ವಿಲಕ್ಷಣ ನಡವಳಿಕೆ ಎಂಬಂತೆ ಕೇರಳದಲ್ಲಿ ತುಂಬಾ ಟೀಕೆಗೆ ಗುರಿಯಾಯಿತು. ಆದರೆ ಕೆಲವರು ಈ ಕುಟುಂಬ ಸದಸ್ಯರ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಅಕಾಲಿಕ ಸಾವು ಉಂಟಾದಾಗ, ಕಿರಿಯ ವಯಸ್ಸಿಗೆ ಅನಾರೋಗ್ಯದಿಂದ ನಿಧನ ಹೊಂದಿದಾಗ, ಕುಟುಂಬದ ಜವಾಬ್ದಾರಿ ಹೊತ್ತಿರುವ ಸದಸ್ಯ ತೀರಿಹೋದಾಗ ತೀವ್ರವಾದ ನೋವಾಗುವುದು ಸಹಜ. ಆದರೆ ವೃದ್ಧರಾದವರು, ಬದುಕಿನ ಸುಖ ಸಂತೋಷಗಳನ್ನು ಅನುಭವಿಸಿದವರು, ತಮ್ಮ ಜವಾಬ್ದಾರಿಗಳನ್ನು ಮುಗಿಸಿದವರು, ಬೇರೆಯವರಿಗೆ ಹೊರೆಯಾಗದೆ ವಯೋಸಹಜ ಖಾಯಿಲೆಗಳಿಂದ ಮೃತರಾದವರು ತೀರಿ ಹೋದರೆ ಅಷ್ಟೇನು ನೋವಾಗುವುದಿಲ್ಲ. ವಯೋವೃದ್ಧರು ನಿಧನ ಹೊಂದಿದಾಗ ಬದುಕಿದ್ದಾಗ ಎಂದಿಗೂ ಬಂದು ವಿಚಾರಿಸಿದ ಕೆಲವು ಕುಟುಂಬ ಸದಸ್ಯರು ನೈಜತೆಯೋ/ತೋರಿಕೆಯೋ ತಮ್ಮ ದುಃಖವನ್ನು ದೊಡ್ಡ ಮಟ್ಟದಲ್ಲಿ ತೋರಿಸಿಕೊಳ್ಳುತ್ತಾರೆ. ನೆರೆದವರ ಗಮನ ಸೆಳೆಯಲು ಮೊಸಳೆ ಕಣ್ಣೀರು ಸುರಿಸಿ ನಟಿಸುತ್ತಾರೆ. ಕೆಲವರು ಮಾತ್ರ ನೈಜ ದುಃಖ ಅನುಭವಿಸುತ್ತಾರೆ.

ವಯೋವೃದ್ಧರು ಸಂತೋಷವಾಗಿ ಬದುಕಿದರಷ್ಟೇ ಸಾಲದು, ಸಂತೋಷವಾಗಿ ಭೂಮಿಯಿಂದ ಮುಕ್ತಿ ಪಡೆಯಬೇಕು. ಅಂದರೆ 80–90 ವರ್ಷ ಪೂರೈಸಿದ ಅನೇಕರಿಗೆ ಕೆಲವು ಖಾಯಿಲೆಗಳು ಸಹಜವಾಗಿ ಇರುತ್ತವೆ, ಅವರ ಅಂತಿಮ ದಿನಗಳಲ್ಲಿ ವೈದ್ಯರು ಚಿಕಿತ್ಸೆ ನೀಡಿದರೂ, ಹೆಚ್ಚು ದಿನ ಬದುಕುವುದಿಲ್ಲ ಎಂದು ತಿಳಿಸಿದರೂ ಕುಟುಂಬ ಸದಸ್ಯರು ಅವರನ್ನು ಐಸಿಯುನಲ್ಲಿ ಹಾಕಿ ಅನಗತ್ಯವಾಗಿ ಅವರ ಸಾವನ್ನು ಮುಂದೂಡುತ್ತಿರುತ್ತಾರೆ. ಕುಟುಂಬ ಸದಸ್ಯರ ಅತಿಯಾದ ಪ್ರೀತಿ ಮತ್ತು ಕಾಳಜಿಯಿಂದ ಕೃತಕ ಉಸಿರಾಟದಲ್ಲಿ ದಿನದೂಡುವ ಹಿರಿಯರಿಗೆ ಅದು ಯಮಯಾತನೆಯಾಗಿರುತ್ತದೆ. ಇದೊಂದು ರೀತಿ ಅಮಾನವೀಯ ಎನಿಸಿಬಿಡುತ್ತದೆ. ಒಂದು ಕಡೆ ಇದು ಸೆಂಟಿಮೆಂಟ್ ಅನಿಸಿದರೂ ಆ ಹಿರಿಯ ಜೀವಿಗೆ ಆಸ್ಪತ್ರೆಯ ಚಿಕಿತ್ಸೆಯು ಸುಖವಾಗಿರುವುದಿಲ್ಲ, ಅವರಿಗೆ ಆ ನೋವಿಗಿಂತ ಸಾವೇ ಮೇಲು ಅನಿಸುತ್ತಿರುತ್ತದೆ. ಹೌದು ಇನ್ನಷ್ಟು ದಿನ ಬದುಕಬೇಕು ಎಂಬ ಅಭಿಲಾಷೆ ಇದ್ದೇ ಇರುತ್ತದೆ. ಆದರೆ ನೋವು ಅತಿಯಾದಾಗ ಮಾತ್ರ ಸಾವೇ ಸುಖ ಎನಿಸಿಬಿಡಬಹುದು. ತುಂಬಾ ಬದ್ಧತೆಯಿಂದ ಬದುಕನ್ನು ಅನುಭವಿಸಿದವರು ಇಳಿವಯಸ್ಸಿನಲ್ಲಿ ಸಾಯಲು ಸಹ ಮಾನಸಿಕವಾಗಿ ಸಿದ್ಧತೆ ಮಾಡಿಕೊಳ್ಳುವುದು ಪ್ರಬುದ್ಧತೆ ಎನಿಸುತ್ತದೆ. ಎಷ್ಟೋ ಜನ ಹಿರಿಯರು ಹೀಗೆ ಚಿಕಿತ್ಸೆಯನ್ನು ನಿರಾಕರಿಸಿ ಸಹಜ ಸಾವನ್ನು ಆಹ್ವಾನಿಸಿರುವ ಉದಾಹರಣೆಗಳು ಸಹ ಉಂಟು. ಅವರನ್ನು ಹಾಗೆ ಹೆಚ್ಚಿನ ನೋವಿಲ್ಲದಂತೆ ಬದುಕಿಗೆ ವಿದಾಯ ಹೇಳಲು ಅವಕಾಶ ಮಾಡಿಕೊಡುವುದು ಸಹ ಪ್ರಭುದ್ಧತೆಯೇ ಆಗಿರುತ್ತದೆ.

ಅಷ್ಟೇ ಅಲ್ಲ, ಎಷ್ಟೋ ಕುಟುಂಬಗಳಲ್ಲಿ ಹಿರಿಯರು ಕೆಲವೇ ದಿನ/ಗಂಟೆಗಳಲ್ಲಿ ಗತಿಸುತ್ತಾರೆ ಎಂಬ ಅರಿವಿದ್ದರೂ ಅಂತಿಮ ವಿಧಿವಿಧಾನಗಳ ಬಗ್ಗೆ, ಸಂಸ್ಕಾರ ಮಾಡಬೇಕಾದ ಊರು ಇನ್ನಿತರ ವಿಚಾರಗಳ ಬಗ್ಗೆ ಚರ್ಚಿಸಿ ಒಂದು ತೀರ್ಮಾನಕ್ಕೆ ಬರದೆ, ಅವರು ಜೀವ ತ್ಯಜಿಸಿದಾಗ ಶವ ಇರಿಸಿಕೊಂಡು ವಿಚಿತ್ರ ಚರ್ಚೆಗಳನ್ನು ಮಾಡುತ್ತಿರುತ್ತಾರೆ. ಒಂದು ಸಣ್ಣ ಯಾತ್ರೆಗೆ ಹೊರಡಬೇಕಾದರೆ ಅನೇಕ ರೀತಿ ಸಿದ್ಧತೆ ಮಾಡಿಕೊಳ್ಳುವ ಜನ, ತಮ್ಮ ಕುಟುಂಬ ಸದಸ್ಯರು ಅಂತಿಮ ಯಾತ್ರೆಗೆ ಹೊರಡುವಾಗ ಕನಿಷ್ಠ ಸಿದ್ಧತೆಯನ್ನು ಮಾಡಿಕೊಳ್ಳದೇ ಇರುವುದು ವಿಪರ್ಯಾಸದ ಸಂಗತಿ. ಮನೆಯಲ್ಲಿ ಗರ್ಭಿಣಿ ಸ್ತ್ರೀ ಇದ್ದಾಗ, ಮಗುವಿನ ನಿರೀಕ್ಷೆಯಲ್ಲಿ ಸಿದ್ಧತೆ ಮಾಡಿಕೊಳ್ಳುವಂತೆ ಅಂತಿಮಯಾತ್ರೆಗೆ ಹೊರಡುವವರಿಗೂ ಒಂದು ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಒಳಿತು. ಸಾವು/ನೋವು ಯಾರಿಗೂ ಖುಷಿ ಕೊಡದಂತಹ ಸಂಗತಿಯಾದರೂ, ಅದು ಸತ್ಯ ಸಂಗತಿ. ಅದನ್ನು ಒಪ್ಪಿಕೊಳ್ಳುವ ಗಟ್ಟಿ ಮನಸ್ಸು ಅಗತ್ಯವಾಗಿರುತ್ತದೆ. ಇಲ್ಲವಾದಲ್ಲಿ ಮನೆಯ ಸದಸ್ಯರು ಖಿನ್ನತೆಗೆ, ಮಾನಸಿಕ ಆಘಾತ/ಕ್ಷೋಭೆಗೆ ಒಳಗಾಗುತ್ತಾರೆ.

ಹೌದು, ರೈಲಿನಲ್ಲಿ ನಮ್ಮೊಟ್ಟಿಗೆ ಹತ್ತಾರು ಗಂಟೆಗಳ ಕಾಲ ಪ್ರಯಾಣ ಮಾಡಿ, ಆಪ್ತರಾಗಿ, ಅವರ ನಿಲ್ದಾಣ ಬಂದಾಗ ಇಳಿದು ಹೋಗುವ ಸಹ ಪ್ರಯಾಣಿಕರ ಅನುಪಸ್ಥಿತಿ ಕೆಲಕಾಲ ಬೇಸರ ಮೂಡಿಸುತ್ತದೆ. ಅಂತಹುದರಲ್ಲಿ ದಶಕಗಳ ಕಾಲ ನಮ್ಮೊಟ್ಟಿಗಿದ್ದ ಜೀವಗಳು ನಮ್ಮನ್ನು ತ್ಯಜಿಸಿದಾಗ ನೋವಾಗುವುದು, ತೀವ್ರ ದುಃಖವಾಗುವುದು ಸಹಜ. ಆದರೆ ಅದನ್ನು ಕಣ್ಣೀರಿಟ್ಟು ದುಃಖ ಕಡಿಮೆಯಾದಾಗ ಹಗುರಾಗಿ ಅವರನ್ನು ಬೀಳ್ಕೊಡಲು ಮಾನಸಿಕವಾಗಿ ಸಿದ್ಧತೆ ನಡೆಸಿಕೊಳ್ಳಬೇಕು.

ಸಾವಿನಿಂದ ಹೇಗೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೋ ಹಾಗೆ ಬದುಕಿನಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮನುಷ್ಯರಾಗಿ ಹುಟ್ಟಿದ ಮೇಲೆ ಎಲ್ಲರ ಬದುಕು ಒಂದೇ ತೆರನಾಗಿ ಇರುವುದಿಲ್ಲ. ಹಾಗಿದ್ದರೆ ಸ್ವಾರಸ್ಯವೂ ಇರುವುದಿಲ್ಲ. ಬದುಕನ್ನು ಪ್ರೀತಿಸಬೇಕು, ಸಂಭ್ರಮಿಸಬೇಕು. ಎಂದೋ ಒಂದು ದಿನ ಸಾಯುತ್ತೇವೆ ಎಂದು ನಿತ್ಯ ಸಾಯಬಾರದು. ಅನಗತ್ಯ ಚಿಂತೆ ಮಾಡಬಾರದು. ಚಿಂತೆ ಮೃತದೇಹ ವನ್ನು ದಹಿಸಿದರೆ ಚಿಂತೆ ಜೀವಂತ ದೇಹವನ್ನೇ ದಹಿಸಿಬಿಡುತ್ತದೆ. ಪ್ರತಿಯೊಬ್ಬರು ಅವರವರ ಶಕ್ತಿ, ಯುಕ್ತಿಗೆ ಅನುಗುಣವಾಗಿ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಎಲ್ಲವೂ ಅಂದುಕೊಂಡಂತೆ ಇರುವುದಿಲ್ಲ/ಆಗುವುದಿಲ್ಲ.

ನಿತ್ಯವೂ ಅಧಮ್ಯ ಜೀವನಪ್ರೀತಿಯೊಂದಿಗೆ ಬದುಕನ್ನು ಅನುಭವಿಸಬೇಕು. ಪ್ರತಿದಿನ, ಪ್ರತಿಕ್ಷಣವನ್ನು ಅರ್ಥಪೂರ್ಣವಾಗಿಸಿ, ಒಂದೊಳ್ಳೆ ನೆನೆಪಿನ ಬುತ್ತಿಯಾಗುವಂತೆ ಮಾಡಬೇಕು. ಬದುಕಿನಲ್ಲಿ ಸೋಲು–ಗೆಲುವುಗಳು, ಕಷ್ಟಸುಖಗಳು, ಸವಾಲುಗಳನ್ನು ಸ್ವೀಕರಿಸಿ ಬದುಕಲು ಬದ್ಧರಾಗಿರಬೇಕು. ಬೇರೆಯವರ ಬದುಕಿನ ಜೊತೆಗೆ ನಮ್ಮ ಬದುಕನ್ನು ಹೋಲಿಸಿಕೊಂಡು ನನ್ನ ಕರ್ಮ, ನನ್ನದು ಒಂದು ಬದುಕಾ? ದರಿದ್ರ ಲೈಫು ನನ್ನದು ಎಂದು ನಿತ್ಯ ಬೈದಾಡಿಕೊಂಡು ಬದುಕಬಾರದು. ಎಲ್ಲರ ಬದುಕಿನಲ್ಲೂ ಬೇವುಬೆಲ್ಲದಂತೆ ಸಂತೋಷ–ದುಃಖ ಎರಡೂ ಇರುತ್ತವೆ. ನೋವುಗಳೂ, ಸೋಲುಗಳು, ನಿರಾಸೆಗಳು ಸಹಜವಾಗಿಯೇ ಇರುತ್ತವೆ. ಪುಸ್ತಕದಲ್ಲಿ ಒಂದೆರಡು ಪುಟಗಳು ಚೆನ್ನಾಗಿಲ್ಲ ಎಂದ ಮಾತ್ರಕ್ಕೆ ಹೇಗೆ ಅದನ್ನು ನಿರಾಕರಿಸುವುದಿಲ್ಲವೋ ಹಾಗೆ ಬದುಕೆಂಬ ಪುಸ್ತಕದಲ್ಲಿ ಆಗಾಗ್ಗೆ ಎದುರಿಸುವ ಸೋಲು, ನೋವುಗಳಿಗೆ ಇಡೀ ಬದುಕನ್ನೇ ನಿರಾಕರಿಸಬಾರದು.

ಬದುಕು ನಿಜಕ್ಕೂ ಸುಂದರವಾಗಿರುತ್ತದೆ. ಅದೆಷ್ಟೋ ಜನ ಇಲ್ಲಸಲ್ಲದ ಕಾರಣಗಳಿಗೆ ಬದುಕನ್ನು ಕುರೂಪ/ವಿರೂಪ ಮಾಡಿಕೊಂಡು ನಮ್ಮ ಬದುಕು ಚೆನ್ನಾಗಿಲ್ಲ ಎಂದು ಗೊಣಗುತ್ತಾರೆ. ಅವರವರ ಬದುಕು ಅವರಿಗೆ ಎಂದು ಭಾವಿಸಿ, ಈ ಬದುಕು ನನ್ನದು, ಅದು ಹೇಗೆ ಇರಲಿ ಅದನ್ನು ಪ್ರೀತಿಸುತ್ತೇನೆ ಎಂಬ ಮನೋಭಾವ ಹೊಂದಬೇಕು. ತಾಯಿಯು ತಾನು ಹೆತ್ತ ಮಗು ಹೇಗೇ ಇದ್ದರೂ ಪ್ರೀತಿಸುವಂತೆ ನಮಗೆ ದಕ್ಕಿರುವ ಬದುಕನ್ನು ಪ್ರೀತಿಸಬೇಕು, ಅದನ್ನು ಸಿಂಗರಿಸಿ ಖುಷಿಪಡಬೇಕು. ನಿರಾಸೆಯಿಂದ, ಜಿಗುಪ್ಸೆಯಿಂದ ಬದುಕಿನ ಯಾತ್ರೆಯನ್ನು ಅರ್ಧದಲ್ಲಿ ಮೊಟಕು ಗೊಳಿಸಿಕೊಳ್ಳಬಾರದು ಅಂದರೆ ಆತ್ಮಹತ್ಯೆಗೆ ಶರಣಾಗಬಾರದು. ಪ್ರತಿಯೊಂದು ಪ್ರಾಣಿಪಕ್ಷಿಯು ಬದುಕಿಗಾಗಿ ಹೋರಾಟ ಮಾಡುತ್ತವೆ. ಹಾಗೆಯೇ ಮನುಷ್ಯ ಸಾಯುವ ಆಲೋಚನೆ ಬಿಟ್ಟು ಸುಂದರ ಬದುಕು ಕಟ್ಟುವ ಚಿಂತನೆ ನಡೆಸಬೇಕು. ಸಾವು ಸಹಜವಾಗಿ ಹತ್ತಿರವಾದಾಗ ಸ್ವೀಕರಿಸಬೇಕು.

ಬದುಕನ್ನು ತೆಗಳಲು ಹತ್ತು ಕಾರಣಗಳು ಸಿಕ್ಕರೆ ಅದೇ ಬದುಕಿನ್ನು ಪ್ರಶಂಸಿಸಲು ನೂರು ಕಾರಣಗಳು ಲಭ್ಯವಿರುತ್ತವೆ. ನಮ್ಮಲ್ಲಿ ಏನೆಲ್ಲಾ ಇಲ್ಲ ಎಂಬ ಪಟ್ಟಿ ಮಾಡಿ ನಿರಾಸೆ ಹೊಂದುವ ಬದಲು, ಏನೆಲ್ಲಾ ಇವೆ ಎಂಬ ಪಟ್ಟಿ ಮಾಡಿ ಸಮಾಧಾನಮಾಡಿಕೊಳ್ಳಬೇಕು. ಈ ಲೇಖನ ಓದಲು ನಿಮಗೆ ಕಣ್ಣಿನ ದೃಷ್ಟಿ ಉತ್ತಮವಾಗಿದೆ ಎಂದಾದರೆ ಅದಕ್ಕೆ ದೇವರಿಗೆ ನಿಜಕ್ಕೂ ಧನ್ಯವಾದ ಹೇಳಬೇಕು. ಏಕೆಂದರೆ ಎಷ್ಟೋ ಮಂದಿಗೆ ದೃಷ್ಟಿಭಾಗ್ಯವೇ ಇಲ್ಲ, ಶಾಶ್ವತ ಕುರುಡುತನದಿಂದ ಬದುಕಿನಲ್ಲಿ ನಿತ್ಯವೂ ಹೋರಾಟ ಮಾಡುತ್ತಿರುತ್ತಾರೆ. ಎಷ್ಟೋ ಜನ ಅಂಗಾಂಗಳ ತೊಂದರೆ ಇದ್ದರೂ, ತಮ್ಮ ಬದುಕನ್ನು ಇನ್ನಿಲ್ಲದಂತೆ ಪ್ರೀತಿಸುತ್ತಿರುತ್ತಾರೆ. ಅಷ್ಟೇ ಅಲ್ಲ ಸಾಧನೆಗಳನ್ನು ಸಹ ಮಾಡಿರುತ್ತಾರೆ. ಕೊರತೆಗಳು/ಸಮಸ್ಯೆಗಳು ಎಲ್ಲರಿಗೂ ಒಂದಲ್ಲ ಒಂದು ರೀತಿ ಇದ್ದೇ ಇರುತ್ತವೆ. ಸದಾ ಸುಖ, ಶ್ರೀಮಂತಿಕೆ ಇದ್ದರೂ, ಅದರಿಂದ ಅನೇಕ ಪರೋಕ್ಷ ಸಮಸ್ಯೆಗಳು ಸಹ ಉಂಟಾಗುತ್ತವೆ. ಮನುಷ್ಯ ಬದ್ಧತೆಯಿಂದ ಬದುಕಲು ಉತ್ತಮ ಆರೋಗ್ಯ ಮುಖ್ಯ. ಆದರೆ ಅನೇಕರು ಕುಳಿತಲ್ಲಿಯೇ ಅನವಶ್ಯಕ ಚಿಂತೆಗಳನ್ನು ಮಾಡುತ್ತಾ, ಅನಗತ್ಯವಾದ ಒತ್ತಡ ಹೇರಿಕೊಂಡು ಖಾಯಿಲೆಗಳನ್ನು ಆಹ್ವಾನಿಸುತ್ತಾರೆ. ನಂತರ ಉತ್ತಮ ಆರೋಗ್ಯಕ್ಕಾಗಿ ಹೋರಾಟ ಮಾಡುತ್ತಿರುತ್ತಾರೆ. ಸಿಕ್ಕಿರುವ ಬದುಕನ್ನು ಬದ್ಧತೆಯಿಂದ ಅನುಭವಿಸುವುದು ಜಾಣತನ.

ಹೂರಣ: ಹುಟ್ಟು–ಸಾವು ನಿನ್ನ ಕೈಯಲ್ಲಿಲ್ಲ,
ಆದರೆ ಬದ್ಧತೆಯಿಂದ ಬದುಕುವುದು
ನಿನ್ನ ಕೈಯಲ್ಲಿದೆ !

ಶರಣು ವಿಶ್ವವಚನ ಫೌಂಡೇಷನ್‌ನಿಂದ ಕೃತಿಗಳ ಲೋಕಾರ್ಪಣೆ, ಸಾಧಕರಿಗೆ ಪ್ರಶಸ್ತಿ ಪ್ರದಾನ



ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರಿಗೆ 'ಕಾಯಕಯೋಗಿ', ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ–ಶಾರದಾ ಅವರಿಗೆ 'ಆದರ್ಶ ಶರಣ ದಂಪತಿ', ನಿವೃತ್ತ ಸೈನಿಕ ಬಸವರಾಜ ಮಲಾಬಾದಿ ಅವರಿಗೆ 'ವೀರ ಗಣಾಚಾರಿ ಮಡಿವಾಳ ಮಾಚಿದೇವ', ಐತಿಚಂಡ ರಮೇಶ್ ಉತ್ತಪ್ಪ ಅವರಿಗೆ 'ವಚನ ಭಂಡಾರಿ ಶಾಂತರಸ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಡಿ.28(ಎಂಕೆ)–ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಭಾಂಗಣದಲ್ಲಿ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಕೃತಿಗಳ ಲೋಕಾರ್ಪಣೆ ಹಾಗೂ ಸಾಧಕರಿಗೆ ರಾಜ್ಯಮಟ್ಟದ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಭಾನುವಾರ ನಡೆಯಿತು.

2026ರ 'ಶರಣು ದಿನಚರಿ'ಯನ್ನು ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, 'ಬಸವ ಭಾನು' ಸಂಚಿಕೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕವಯತ್ರಿ ಮಂಗಳಾ ಮುದ್ದುಮಾದಪ್ಪ ಅವರ 'ವಚನ ಗುಮ್ಮಟ ಡಾ. ಫ.ಗು. ಹಳಕಟ್ಟಿ' ಕೃತಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಹಾಗೂ 'ಜ್ಞಾನಸಂಗಮ' ಕೈಪಿಡಿಯನ್ನು ಮಂಗಳಾ ಮುದ್ದುಮಾದಪ್ಪ ಬಿಡುಗಡೆ ಮಾಡಿದರು.

ಬಳಿಕ 'ಕಾಯಕಯೋಗಿ ಪ್ರಶಸ್ತಿ'ಯನ್ನು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, 'ವಚನ ಭಂಡಾರಿ ಶಾಂತರಸ ಪ್ರಶಸ್ತಿ'ಯನ್ನು ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, 'ಆದರ್ಶ ಶರಣ ದಂಪತಿ ಪ್ರಶಸ್ತಿ'ಯನ್ನು ಶಾರದಾ ಜತ್ತಿ ಮತ್ತು ಅರವಿಂದ ಜತ್ತಿ, 'ವೀರ ಗಣಾಚಾರಿ ಮಡಿವಾಳ ಮಾಚಿದೇವ ಪ್ರಶಸ್ತಿ'ಯನ್ನು ಬಾಗಲಕೋಟೆ ಜಿಲ್ಲೆ ನಿವೃತ್ತ ಸೈನಿಕ ಬಸವರಾಜ ಮಾಲಾಬಾದಿ, 'ಶಿಕ್ಷಕರ ಕಣ್ಮಣಿ ಪ್ರಶಸ್ತಿ'ಯನ್ನು ಯೋಗಾಚಾರ್ಯ ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ ಸಿ.ವಿರುದ್ರಾರಾಧ್ಯ, 'ವಚನ ಸೇವಾ ರತ್ನ ಪ್ರಶಸ್ತಿ'ಯನ್ನು ಕನ್ನಡ ಸಾಹಿತ್ಯ ಕಲಾಕೂಟದ ಎಂ.ಚಂದ್ರಶೇಖರ್, 'ವಚನ ಕೋಗಿಲೆ ಪ್ರಶಸ್ತಿ'ಯನ್ನು ಗಾಯಕಿ ಅನುರಾಗ್ ಗದ್ದಿ ಅವರಿಗೆ ಪ್ರದಾನ ಮಾಡಲಾಯಿತು.

ಚಿನ್ಮಯ ಜ್ಞಾನ ಶಿಕ್ಷಕ ಪ್ರಶಸ್ತಿ ಪ್ರದಾನ: ನಂತರ ಕಡೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಎಂ.ಎನ್.ಕುಮಾರಸ್ವಾಮಿ, ಬೆಂಗಳೂರು ಶೇಷಾದ್ರಿಪುರಂ ಸಂಜೆ ಕಾಲೇಜಿನ ಸಹ ಪ್ರಾಧ್ಯಾಪಕ ಜೆ.ವಿ.ಸಂತೋಷ್, ಜಮಖಂಡಿ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಶಿಕ್ಷಕ ರಾಘವೇಂದ್ರ ಕುಲಕರ್ಣಿ, ಹುಲ್ಯಾಳ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಶಿಕ್ಷಕಿ ವನಜಾಕ್ಷಿ ನಾರಾಯಣ ಕುಲಕರ್ಣಿ, ಸವದಿ ಚಿಪ್ಪಾಡಿ ತೋಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಆನಂದ ಅಣ್ಣಾಜಿ ದೇಶಮುಖ, ಪಿರಿಯಾಪಟ್ಟಣ ತಾಲೂಕು ಆವರ್ತಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ರೇಣುಕಾಸ್ವಾಮಿ, ಗುಡ್ಡೇನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಕಲಾವತಿ, ಮೈಸೂರು ಗೋಕುಲಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಕೆ.ಎನ್.ಅನ್ನಪೂರ್ಣ, ಕಡೂರು ಮಲ್ಲೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ವಿರೂಪಾಕ್ಷಪ್ಪ, ಮಲ್ಲಿದೇವಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಂ.ಆರ್.ಅನಿತಾ, ಹೊಳಲ್ಕೆರೆ ಎಸ್‌ಜೆಎಂ ಪ್ರೌಢಶಾಲೆ ಶಿಕ್ಷಕ ಎಸ್.ಎಸ್.ವಿರೂಪಾಕ್ಷಯ್ಯ, ಕುಶಾಲನಗರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಬಿ.ಬಿ. ಹೇಮಲತಾ, ಬೆಂಗಳೂರು ಅಂಚೆಪಾಳ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಸ್.ರಾಜೇಶ್ವರಿ, ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಓಂ ಶಿವ ವಿದ್ಯಾಸಂಸ್ಥೆಯ ಮುಖ್ಯ ಶಿಕ್ಷಕಿ ಆರ್.ಶಬರಿ ಕುಮಾರ್ ಅವರಿಗೆ ರಾಜ್ಯ ಮಟ್ಟದ 'ಚಿನ್ಮಯ ಜ್ಞಾನಿ ಶಿಕ್ಷಕ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ವಚನ ಗಾಯನ: ಇದೇ ವೇಳೆ ಯು.ಶ್ರದ್ಧಾ ಕುತ್ನಿಕರ್ ವಚನ ನೃತ್ಯ ಪ್ರದರ್ಶನ ನೀಡಿದರೆ, ಚೂಡಾಮಣಿ ಮತ್ತು ಸರಸ್ವತಿ ರಾಮಣ್ಣ ವಚನ ಗಾಯನ ಪ್ರಸ್ತುತಪಡಿಸುವ ಮೂಲಕ ನೆರೆದಿದ್ದವರ ಗಮನ ಸೆಳೆದರು. ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರೂಪಾ ಕುಮಾರಸ್ವಾಮಿ, ಜಿಲ್ಲಾ ಶರಣು ವಿಶ್ವ ವಚನ ಫೌಂಡೇಷನ್‌ನ ಅಧ್ಯಕ್ಷ ಅನಿಲ್‌ಕುಮಾರ್ ವಾಜಂತ್ರಿ, ನಿವೃತ್ತ ಶಾಖಾ ಅಧೀಕ್ಷಕ ಪಂಚಾಕ್ಷರಯ್ಯ, ಶ್ರೀ ರಾಜರಾಜೇಶ್ವರಿ ಅಕ್ಕನ ಬಳಗದ ವೀಣಾ ನಂದೀಶ್, ಎ.ಆರ್.ನಾಗೇಂದ್ರಸ್ವಾಮಿ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com





ಪ್ರಮುಖ ಘಟನಾವಳಿಗಳು

ಜನವರಿ

ಜ. 1 ಮೈಸೂರು ವಿವಿ ಬಡಾವಣೆಯಲ್ಲಿ ಭವ್ಯವಾದ ಸಿದ್ಧರಾಮಯ್ಯ ವೃತ್ತ
ಜ. 1 ಹೊಸ ವರ್ಷ: ದೇವಾಲಯಗಳಿಗೆ ಹರಿದು ಬಂದ ಭಕ್ತ ಸಾಗರ
ಜ. 2 ಬನ್ನಿಮಂಟಪದಲ್ಲಿ ಅತ್ಯಾಧುನಿಕ ಹೊಸ ಬಸ್ ನಿಲ್ದಾಣ 120 ಕೋಟಿ ವೆಚ್ಚದಲ್ಲಿ ನಿರ್ಮಾಣಕ್ಕೆ ಸಂಪುಟ ಸಭೆ ಒಪ್ಪಿಗೆ



ಜ. 2 ಬಸ್ ಪ್ರಯಾಣ ದರ ಶೇ.15ರಷ್ಟು ಹೆಚ್ಚಳ
ಜ. 3 ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಸುಳಿವು ನೀಡಿದ ಪ್ರಹ್ಲಾದ್ ಜೋಶಿ
ಜ. 4 ಭಾರತದ ನ್ಯೂಕ್ಲಿಯರ್ ವಿಜ್ಞಾನಿ ಆರ್.ಚಿದಂಬರಂ ಇನ್ನಿಲ್ಲ


ಆರ್.ಚಿದಂಬರಂ

ಜ. 4 ಮಧ್ಯರಾತ್ರಿಯಿಂದಲೇ ಬಸ್ ದರ ಏರಿಕೆ
ಜ. 4 ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಮುಜಾಫರ್ ಅಸ್ಸಾದಿ ನಿಧನ
ಜ. 4 ಅಮೇರಿಕಾ ಆಸ್ಪತ್ರೆಯಿಂದ ನಟ ಶಿವರಾಜ್ ಕುಮಾರ್ ಡಿಸ್ಚಾರ್ಜ್


ಪ್ರೊ.ಅಸಾದಿ

ಜ. 5 ಸಿಮೆಂಟ್ ಕಾಂಕ್ರಿಟ್ ಬ್ಯಾರಿಕೇಡ್‌ಗೆ ಸಿಲುಕಿ ಒದ್ದಾಡಿದ ಒಂಟಿ ಸಲಗ : ಜೆಸಿಬಿ ಬಳಸಿ ರಕ್ಷಣೆ
ಜ. 5 ಖ್ಯಾತ ಹಿರಿಯ ಸಾಹಿತಿ ಡಾ. ನಾ. ಡಿಸೋಜ ನಿಧನ
ಜ. 6 ಬೆಂಗಳೂರಿನ ಇಬ್ಬರು ಮಕ್ಕಳಲ್ಲಿ ಚೀನಾ ವೈರಸ್ ಪತ್ತೆ
ಜ. 6 ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ವಿವಿಧ ಸಂಘಟನೆಗಳಿಂದ ಮೈಸೂರು ಬಂದ್


ನಾ.ಡಿಸೋಜ

ಜ. 7 ಮೈಸೂರು ಬಂದ್ ಯಶಸ್ವಿ
ಜ. 8 ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ಶರಣಾದ ಆರು ನಕ್ಸಲರು
ಜ. 8 ತಿರುಪತಿಯಲ್ಲಿ ಕಾಲ್ತುಳಿತ: 7 ಮಂದಿ ದುರ್ಮರಣ



ಜ. 8 ಮೈಸೂರು ಜೈಲಲ್ಲಿ ರಸಾಯನಿಕ ಸೇವಿಸಿ 3 ಖೈದಿಗಳು ಸಾವು
ಜ. 10 ಮೈಸೂರು ವಿಮಾನ ನಿಲ್ದಾಣ ಅಭಿವೃದ್ಧಿಗೆ ತ್ವರಿತ ಕ್ರಮ
ಜ. 11 ಶೋ ರೂಂಗಳಾಗಿವೆ ಮೈಸೂರು ರಸ್ತೆಗಳು
ಜ. 12 ಪಾಂಡವಪುರದ ರೈತ ಮಹಿಳೆಗೆ ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ
ಜ. 12 ಪ್ರಯಾಗ್‌ರಾಜ್ ಮಹಾಮೇಳದಲ್ಲಿ ಆಪಲ್ ಕಂಪನಿ ಮಾಲೀಕ ಸ್ಟೀವ್ ಜಾಬ್ಸ್ ಪತ್ನಿ ಲಾರೆನ್ ಭಾಗಿ
ಜ. 16 ಬಾಲಿವುಡ್ ನಟ ಸೈಫ್ ಆಲಿಖಾನ್‌ಗೆ ಚಾಕುವಿನಿಂದ 6 ಬಾರಿ ಹಿರಿದ ದುಷ್ಕರ್ಮಿ



ಜ. 17 **ಮುಡಾ ಹಗರಣ:** ಇಡಿಯಿಂದ 300 ಕೋಟಿಗೂ ಅಧಿಕ ಮೌಲ್ಯದ 142 ಸ್ಥಿರಾಸ್ತಿಗಳ ಮುಟ್ಟುಗೋಲು
ಜ. 18 ಮುಡಾ ಆಯುಕ್ತನ ಹೆಸರಲ್ಲಿ 198, ಎಂಎಲ್‌ಸಿ ಹೆಸರಲ್ಲಿ 128 ಬೇನಾಮಿ ಸೈಟ್ ಸೇರಿ 631 ಸೈಟುಗಳ ಮಾಹಿತಿ ಕೇಳಿದ ಇಡಿ
ಜ. 19 ಅಮೇರಿಕಾ ಅಧ್ಯಕ್ಷರಾಗಿ ಟ್ರಂಪ್ ಪ್ರಮಾಣವಚನ



ಜ. 19 **ಚೊಚ್ಚಲ ಖೋ ಖೋ ವಿಶ್ವಕಪ್ ಪಂದ್ಯಾವಳಿ ಭಾರತ ಮಹಿಳಾ, ಪುರುಷ ತಂಡಗಳು ಚಾಂಪಿಯನ್**





ಜ. 19 ಪಾಲಹಳ್ಳಿ ಹೊರವಲಯದಲ್ಲಿ ರೌಡಿಶೀಟರ್ ಭೀಕರ ಹತ್ಯೆ
ಜ. 20 ಹೆಚ್.ಡಿ. ಕೋಟೆ ರಸ್ತೆಯ ಜಯಪುರದ ಹಾರೋಹಳ್ಳಿ ಬಳಿ ಕೇರಳದ ಉದ್ಯಮಿಗಳ ಮೇಲೆ ದಾಳಿ, ಹಾಡ ಹಗಲೇ ಮುಸುಕುಧಾರಿಗಳಿಂದ ಹಣದೊಂದಿಗೆ ಕಾರು ಅಪಹರಣ
ಜ. 22 ಕಿಚ್ಚ ಸುದೀಪ್ ಅತ್ಯುತ್ತಮ ನಟ, ಅನುಪಮಾಗೌಡ ಅತ್ಯುತ್ತಮ ನಟಿ ಪ್ರಶಸ್ತಿ
ಜ. 22 ರಾಷ್ಟ್ರೀಯ ಆರೋಗ್ಯ ಮಿಷನ್ 5 ವರ್ಷ ವಿಸ್ತರಣೆ
ಜ. 24 ಶೇಖ್ ತನ್ವೀರ್ ಆಸಿಫ್ ಮೈಸೂರು ಪಾಲಿಕೆ ನೂತನ ಆಯುಕ್ತ
ಜ. 24 ಬೆಂಗಳೂರು ಅರಮನೆ ಮೈದಾನ ಸರ್ಕಾರದ ಸುಪರ್ದಿಗೆ ಸುಗ್ರೀವಾಜ್ಞೆ, ಸಚಿವ ಸಂಪುಟ ತೀರ್ಮಾನ




ಜ. 25 ಲಕ್ಷ್ಮೀನಾರಾಯಣ, ಸುಬ್ರಹ್ಮಣ್ಯಂ ಸೇರಿ 7 ಮಂದಿಗೆ ಪದ್ಮ ವಿಭೂಷಣ, ನಟ ಅನಂತ್‌ನಾಗ್, ಅಂಕಣಕಾರ ಸೂರ್ಯ ಪ್ರಕಾಶ್, ತೆಲುಗು ನಟ ನಂದಮೂರಿ ಬಾಲಕೃಷ್ಣ, ತಮಿಳು ನಟ ಅಜಿತ್‌ಕುಮಾರ್ ಸೇರಿ 9 ಮಂದಿಗೆ ಪದ್ಮಭೂಷಣ ಪ್ರಶಸ್ತಿ
ಜ. 25 ಬಸ್ ಕಿಟಕಿಯಿಂದ ತಲೆ ಹೊರ ಹಾಕಿದ ಮಹಿಳೆ ದುರಂತ ಸಾವು
ಜ. 27 ಸುತ್ತೂರು ಶ್ರೀ ಕ್ಷೇತ್ರದಲ್ಲಿ ಅದ್ದೂರಿ ಸಾಮೂಹಿಕ ವಿವಾಹ ಮಹೋತ್ಸವ
ಜ. 28 ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಮತ್ತೊಮ್ಮೆ ಮಹಾಕುಸಿತ; ಅವಶೇಷದಡಿ ಸಿಲುಕಿದ ಕಾರ್ಮಿಕ ಸಾವು
ಜ. 28 ವಿಜೃಂಭಣೆಯ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ
ಜ. 29 ಮಹಾಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆ ಪವಿತ್ರ ಸ್ನಾನಕ್ಕೆ ಒಮ್ಮೆಲೆ ನುಗ್ಗಿದಾಗ ನಡೆದೇ ಹೋಯ್ತು ಘೋರ ದುರಂತ; ತ್ರಿವೇಣಿ ಸಂಗಮದ ಬಳಿ ಕಾಲ್ತುಳಿತ ಕರ್ನಾಟಕದ ನಾಲ್ವರು ಸೇರಿ 30 ಮಂದಿ ಸಾವು



ಜ. 30 ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಕಡಿವಾಣ ಸುಗ್ರೀವಾಜ್ಞೆಗೆ ರಾಜ್ಯ ಸಂಪುಟ ಅನುಮೋದನೆ
ಜ. 30 ಸುತ್ತೂರಲ್ಲಿ 43ನೇ ರಾಷ್ಟ್ರ ಮಟ್ಟದ ನಾಡಕುಸ್ತಿ ಪಂದ್ಯಾವಳಿ, ದರಸಗುಪ್ಪೆ ಪೈ. ವಿಜಯೇಂದ್ರಗೆ ಸುತ್ತೂರು ಕೇಸರಿ, ಪೈ ಸೂರಜ್‌ಗೆ ಸುತ್ತೂರು ಕುಮಾರ ಪ್ರಶಸ್ತಿ
ಜ. 31 ರಾಜ್ಯದಲ್ಲೂ ಘನತೆಯ ಸಾವು!

ಫೆಬ್ರವರಿ

ಫೆ. 1 ತೆರಿಗೆದಾರರಿಗೆ ಬೊಂಬಾಟ್ ಬಜೆಟ್ 12 ಲಕ್ಷದವರೆಗಿನ ಆದಾಯಕ್ಕೆ ಯಾವ ತೆರಿಗೆಯೂ ಇಲ್ಲ ವಿತ್ತ ಸಚಿವ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡನೆ



ಫೆ. 2 ಐಸಿಸಿ 19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ ದಕ್ಷಿಣ ಆಫ್ರಿಕಾ ಮಣಿಸಿದ ಭಾರತ ಚಾಂಪಿಯನ್
ಫೆ. 2 ಮಿತಿ ಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರಿಗೆ 10 ವರ್ಷ ಜೈಲು
ಫೆ. 3 ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿ ಇಬ್ಬರ ಸಾವು; ಒಬ್ಬ ನಾಪತ್ತೆ ಮತ್ತೊಬ್ಬನ ರಕ್ಷಣೆ
ಫೆ. 5 ಮಹಾಕುಂಭ ಮೇಳ: ರುದ್ರಾಕ್ಷಿ ಮಾಲೆ ಧರಿಸಿ ತ್ರಿವೇಣಿ ಸಂಗಮದಲ್ಲಿ ಮೋದಿ ಪುಣ್ಯಸ್ನಾನ



ಫೆ. 6 ಬ್ಯಾಂಕ್‌ಗೆ ವಂಚನೆ ಪ್ರಕರಣ: ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಸೇರಿ ನಾಲ್ವರಿಗೆ 3 ವರ್ಷ ಜೈಲು ಶಿಕ್ಷೆ
ಫೆ. 7 ಐತಿಹಾಸಿಕ 'ಕೊಡವ ಮಾಮೆ ಬಾಳೋ' ಮಹಾಪಾದಯಾತ್ರೆ ಯಶಸ್ವಿ
ಫೆ. 8 ಬಿಜೆಪಿಗೆ ದೆಹಲಿ ಗದ್ದುಗೆ
ಫೆ. 9 ದೆಹಲಿ ಸಿಎಂ ಸ್ಥಾನಕ್ಕೆ ಅತಿಶಿ ರಾಜೀನಾಮೆ
ಫೆ. 10 ತಿರುಮಕೂಡಲು ನರಸೀಪುರದ ತ್ರಿವೇಣಿ ಸಂಗಮದಲ್ಲಿ ಮೂರು ದಿನಗಳ ಕುಂಭಮೇಳ ಪುಣ್ಯಸ್ನಾನ ಪ್ರಾರಂಭ
ಫೆ. 10 ಬೆಂಗಳೂರಲ್ಲಿ ಏರ್ ಶೋ 2025ಕ್ಕೆ ರಾಜನಾಥ್ ಸಿಂಗ್ ಚಾಲನೆ




ಫೆ. 11 ತಿರುಮಕೂಡಲು ಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ವಾರಣಾಸಿ ಮಾದರಿ ಗಂಗಾ ಪೂಜೆ, ಕಾವೇರಿ ದೀಪಾರತಿ
ಫೆ. 12 ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ: ಸಿಸಿಬಿ ಪೊಲೀಸರಿಂದ ಎಂಟು ಮಂದಿ ಬಂಧನ
ಫೆ. 12 ಮೈಸೂರು–ಬೆಂಗಳೂರು ರೈಲಿನಲ್ಲಿ ದರೋಡೆ; ನಾಲ್ವರ ಬಂಧನ
ಫೆ. 13 ಮುಡಾ ಅಕ್ರಮ ನಿವೇಶನ ಹಂಚಿಕೆ ಹಗರಣ ಸಂಬಂಧ ಲೋಕಾಯುಕ್ತ ವರದಿ ಸಿಎಂ ಸಿದ್ದರಾಮಯ್ಯರದ್ದು ಏನೂ ಪಾತ್ರವಿಲ್ಲ
ಫೆ. 15 ಸುಸಜ್ಜಿತ ಅಶೋಕಪುರಂ ರೈಲ್ವೆ ನಿಲ್ದಾಣ ಸಂಪೂರ್ಣ ಸೇವೆಗೆ ಸಮರ್ಪಣೆ; ಟಿಕೆಟ್ ಬುಕ್ಕಿಂಗ್ ಕೌಂಟರ್ ಉದ್ಘಾಟನೆ, ವಿಸ್ತರಣೆಗೊಂಡ ರೈಲು ಸೇವೆಗೆ ರೈಲ್ವೆ ರಾಜ್ಯ ಸಚಿವ ಸೋಮಣ್ಣ ಚಾಲನೆ
ಫೆ. 17 ಮೈಸೂರಿನ ಅಪಾರ್ಟ್‌ಮೆಂಟ್‌ನಲ್ಲಿ ಒಂದೇ ಕುಟುಂಬದ ನಾಲ್ವರ ಮೃತದೇಹ ಪತ್ತೆ, ತಾಯಿ, ಪತ್ನಿ, ಪುತ್ರನ ಹತ್ಯೆ; ಯಜಮಾನ ಆತ್ಮಹತ್ಯೆ
ಫೆ. 18 ಅನಧಿಕೃತ ಬಡಾವಣೆ ತಲೆ ಎತ್ತಿದರೆ ಡಿಸಿ, ನಗರ ಯೋಜನಾ ಅಧಿಕಾರಿಗಳೇ ಹೊಣೆ
ಫೆ. 18 ಕ್ರಿಕೆಟ್, ಇತರೆ ಆನ್‌ಲೈನ್ ಬೆಟ್ಟಿಂಗ್ ಆಡಿ... ಆಡಿ... ಆತ್ಮಹತ್ಯೆಗೆ ಶರಣಾದ ಅವಳಿ ಸಹೋದರರು, ಓರ್ವನ ಪತ್ನಿ
ಫೆ. 19 ಮುಡಾ ಹಗರಣದಲ್ಲಿ ಸಿದ್ದರಾಮಯ್ಯರಿಗೆ ಲೋಕಾಯುಕ್ತ ಕ್ಲೀನ್‌ಚಿಟ್
ಫೆ. 19 ರೇಖಾ ಗುಪ್ತ ದೆಹಲಿಯ ನೂತನ ಮುಖ್ಯಮಂತ್ರಿ
ಫೆ. 20 ಮುಡಾ ನಿವೇಶನ ಹಂಚಿಕೆ ಹಗರಣ ಸಿಎಂ ಸಿದ್ದರಾಮಯ್ಯ ಈಗ ಗೆದ್ದರಾಮಯ್ಯ
ಫೆ. 21 ಚಾಮುಂಡಿಬೆಟ್ಟದಲ್ಲಿ ಬೆಂಕಿ; ನೂರಾರು ಎಕರೆ ವನ್ಯಸಂಪತ್ತು ನಾಶ
ಫೆ. 22 ಚಾಮುಂಡಿಬೆಟ್ಟದಲ್ಲಿ ಬೆಂಕಿ: 35 ಎಕರೆ ವನ್ಯ ಸಂಪತ್ತು ನಾಶ
ಫೆ. 23 ಹೈ ವೋಲ್ಟೇಜ್ ಕದನದಲ್ಲಿ ಗೆದ್ದು ಬೀಗಿದ ಭಾರತ




ಫೆ. 24 ಸಾಲಬಾಧೆ, ಕೌಟುಂಬಿಕ ಕಲಹ, ವಿಶ್ವೇಶ್ವರಯ್ಯ ನಾಲೆಗೆ ಹಾರಿ ಮಗಳೊಂದಿಗೆ ದಂಪತಿ ಆತ್ಮಹತ್ಯೆ
ಫೆ. 27 ಮಹಾಕುಂಭ ಮೇಳಕ್ಕೆ ತೆರೆ; 66 ಕೋಟಿ ಮಂದಿ ಪುಣ್ಯಸ್ನಾನ
ಫೆ. 28 ಟ್ಯಾಟೂನಿಂದ ಹೆಚ್‌ಐವಿ, ಚರ್ಮದ ಕ್ಯಾನ್ಸರ್ ಬರುತ್ತೆ.
ಫೆ. 28 ರಾಜ್ಯದ ಹಲವೆಡೆ ಹಕ್ಕಿ ಜ್ವರ ಭೀತಿ; ಕಟ್ಟೆಚ್ಚರಕ್ಕೆ ಸರ್ಕಾರ ಆದೇಶ

ಮಾರ್ಚ್

ಮಾ. 1 ಕೊಳ್ಳೇಗಾಲ ಬಳಿ ಭೀಕರ ಅಪಘಾತ: ಐವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು
ಮಾ. 1 ಮೈಸೂರಲ್ಲಿ ವಿಶ್ವ ದರ್ಜೆ ಫಿಲ್ಮ್‌ಸಿಟಿ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
ಮಾ. 2 ಮೈಸೂರಿನ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭ
ಮಾ. 3 ಬಜೆಟ್ ಅಧಿವೇಶನ ಆರಂಭ
ಮಾ. 4 ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಕಡ್ಡಾಯ
ಮಾ. 6 ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ 16ನೇ ಬಜೆಟ್ ಮಂಡನೆ



ಮಾ. 7 ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ 4,09,549 ಕೋಟಿ ದಾಖಲೆ ಬಜೆಟ್, ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೂ ಆದ್ಯತೆ
ಮಾ. 8 ಚಿನ್ನ ಕಳ್ಳ ಸಾಗಣೆ ಪ್ರಕರಣ, ಸಿಬಿಐ ವಶಕ್ಕೆ ನಟಿ ರನ್ಯಾರಾವ್



ಮಾ. 9 ಐಸಿಸಿ ಚಾಂಪಿಯನ್ ಟ್ರೋಫಿ–2025, ಭಾರತಕ್ಕೆ ಚಾಂಪಿಯನ್ ಕಿರೀಟ
ಮಾ.11 ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕತ್ರಿನಾ ಕೈಫ್ !
ಮಾ.12 ಕಷ್ಟದಲ್ಲಿ ನೆರವಾಗುತ್ತಾ ಬಂದ ಸ್ನೇಹಿತೆಯನ್ನ ಚಿನ್ನದ ಸರಕ್ಕಾಗಿ ಕೊಂದ ಮಹಿಳೆ!
ಮಾ.15 ಟಿ. ನರಸೀಪುರ: ಮೊಮ್ಮಕ್ಕಳೊಂದಿಗೆ ತಾತ ಜಲಸಮಾಧಿ.
ಮಾ.18 ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಮೈಸೂರಿನ ಯುವತಿ ದೃಷ್ಟಿ
ಮಾ.19 ಭೂಮಿಗೆ ಬಂದ ಸುನೀತಾ ವಿಲಿಯಮ್ಸ್



ಮಾ.21 ವಿಧಾನಸಭೆಯಲ್ಲಿ ಬಿಜೆಪಿ ಧರಣಿ ವೇಳೆ ಸ್ಪೀಕರ್ ಪೀಠಕ್ಕೆ ಅಗೌರವ; ಬಿಜೆಪಿ 18 ಶಾಸಕರು 6 ತಿಂಗಳು ಸಸ್ಪೆಂಡ್
ಮಾ.22 ಛತ್ತೀಸ್‌ಘಡದ ವಿನೋದ್ ಕುಮಾರ್ ಶುಕ್ಲಾಗೆ ಜ್ಞಾನಪೀಠ ಪ್ರಶಸ್ತಿ
ಮಾ.26 ಬಿಜೆಪಿಯಿಂದ ಬಸವನಗೌಡ ಯತ್ನಾಳ್ 6 ವರ್ಷ ಉಚ್ಚಾಟನೆ
ಮಾ.28 ಥೈಲ್ಯಾಂಡ್, ಮ್ಯಾನ್ಮಾರ್‌ನಲ್ಲಿ ಪ್ರಬಲ ಭೂಕಂಪ; 152 ಸಾವು, 732 ಮಂದಿಗೆ ಗಾಯ



ಮಾ.28 ಪೊನ್ನಂಪೇಟೆ ಬಳಿ ನಾಲ್ವರ ಕಗ್ಗೊಲೆ
ಮಾ.31 ಬ್ಯಾಂಕಾಕ್, ಮ್ಯಾನ್ಮಾರ್ ಭೂಕಂಪಕ್ಕೆ ಸತ್ತವರ ಸಂಖ್ಯೆ 2074ಕ್ಕೆ ಏರಿಕೆ
ಮಾ.31 ಮೈಸೂರಲ್ಲಿ ಸಂಭ್ರಮದ ರಂಜಾನ್ ಆಚರಣೆ
ಮಾ.31 ಮೈಸೂರು ಕಾಳಿದಾಸ ರಸ್ತೆಯಲ್ಲಿ ಕಲ್ಯಾಣ್ ಜ್ಯುವೆಲರ್ಸ್ ಮಳಿಗೆ ಉದ್ಘಾಟಿಸಿದ ಬಾಲಿವುಡ್ ಖ್ಯಾತ ನಟಿ ಶಿಲ್ಪಾಶೆಟ್ಟಿ

ಏಪ್ರಿಲ್

ಏ. 2 ವಕ್ಫ್ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ
ಏ. 3 ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ತೂಬಿನಕೆರೆ ಬಳಿ ಭೀಕರ ಅಪಘಾತ; ಒಂದೇ ಕುಟುಂಬದ ನಾಲ್ವರ ದುರ್ಮರಣ
ಏ. 4 ಕೊಡಗು ಮೂಲದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ
ಏ. 5 ಮುಖ್ಯಮಂತ್ರಿ ಗಾದಿ ಗಿಟ್ಟಿಸಿಕೊಳ್ಳಲು ಸೋನಿಯಾ ಮೊರೆ ಹೋದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್
ಏ. 6 ಪ್ರಧಾನಿ ಮೋದಿ ಅವರಿಂದ ದೇಶದ ಮೊದಲ ವರ್ಟಿಕಲ್ ರೈಲ್ವೆ ಸೇತುವೆ ಲೋಕಾರ್ಪಣೆ



ಏ. 6 ಬಹುಕೋಟಿ ಹಗರಣ : ಇಡಿಯಿಂದ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಎಂಡಿ ಬಂಧನ
ಏ. 7 ಶ್ರೀರಂಗಪಟ್ಟಣದ ಬಳಿ ಒಂದೇ ಕುಟುಂಬದ ಮೂವರು ಮಕ್ಕಳು ಜಲಸಮಾಧಿ
ಏ. 8 ದ್ವಿತೀಯ ಪಿಯು ಫಲಿತಾಂಶ : ಬಾಲಕೀಯರೇ ಮೇಲುಗೈ




ಏ. 9 ಅದ್ದೂರಿ ಶ್ರೀಕಂಠೇಶ್ವರ ಗೌತಮ ಪಂಚ ಮಹಾರಥೋತ್ಸವ
ಏ. 9 ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ 500 ಕೋಟಿ ರೂ. ಕಿಕ್‌ಬ್ಯಾಕ್ ಆರೋಪ
ಏ. 10 ಅಮೇರಿಕಾದಿಂದ ಗಡಿಪಾರಾದ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ತಹವೂರ್ ರಾಣಾ ಬಂಧಿಸಿದ ಎನ್‌ಐಎ
ಏ. 10 ಮಡಿಕೇರಿ : ಅಕ್ರಮವಾಗಿ ಸಾಗಿಸುತ್ತಿದ್ದ 10 ಕೋಟಿ ಮೌಲ್ಯದ ತಿಮಿಂಗಲ ವಾಂತಿ ಜಪ್ತಿ; 10 ಮಂದಿ ಬಂಧನ
ಏ. 12 ಈ ಸರ್ಕಾರದ್ದು ಬರೀ ಲೂಟಿ... ಲೂಟಿ...: ಕೇಂದ್ರ ಸಚಿವ ಹೆಚ್‌ಡಿಕೆ ವಾಗ್ದಾಳಿ




ಏ. 13 ಮೈಸೂರಲ್ಲಿ ರಸ್ತೆ ಅಗಲೀಕರಣಕ್ಕಾಗಿ ಮರಗಳ ಮಾರಣಹೋಮ
ಏ. 15 ಚಲನಚಿತ್ರ ನಟ ಬ್ಯಾಂಕ್ ಜನಾರ್ಧನ್ ನಿಧನ
ಏ. 17 ಬದುಕಿರುವ ಪತ್ನಿಯ ಕೊಲೆ ಆರೋಪದಡಿ ಪತಿಗೆ ಜೈಲು ಶಿಕ್ಷೆ ಪ್ರಕರಣ; ಪೊಲೀಸರ ಪ್ರಮಾದಕ್ಕೆ ನ್ಯಾಯಾಧೀಶರ ತೀವ್ರ ಬೇಸರ;ಏ. 23ಕ್ಕೆ ತೀರ್ಪು
ಏ. 18 ಮರಗಳ ಹನನ ಅನ್ಯಾಯ : ಕ್ಯಾಂಡಲ್ ಬೆಳಗಿ ಸಾವಿರಾರು ಪರಿಸರ ಸ್ನೇಹಿಗಳ ಮೌನ ಪ್ರತಿಭಟನೆ
ಏ. 19 ಮುತ್ತಪ್ಪ ರೈ ಕಿರಿಯ ಮಗ ರಿಕ್ಕಿ ರೈ ಕೊಲೆ ಯತ್ನ
ಏ. 19 ಪತ್ನಿಯಿಂದಲೇ ನಿವೃತ್ತ ಡಿಜಿ, ಐಜಿಪಿ ಓಂ ಪ್ರಕಾಶ್ ಬರ್ಬರ ಹತ್ಯೆ


ಓಂ ಪ್ರಕಾಶ್

ಏ. 21 ವ್ಯಾಟಿಕನ್: ಕ್ರಿಶ್ಚಿಯನ್ ಪರಮೋಚ್ಚ ಧರ್ಮಗುರು ಪೋಪ್ ಫ್ರಾನ್ಸಿಸ್ ವಿಧಿವಶ
ಏ. 21 ನಿವೃತ್ತ ಡಿಜಿ, ಐಜಿಪಿ ಓಂ ಪ್ರಕಾಶ್ ಹತ್ಯೆ ಪ್ರಕರಣ: ಪುತ್ರ ಕಾರ್ತಿಕೇಶ್ ದೂರು ಆಧರಿಸಿ ತಾಯಿ ಬಂಧನ; ತಂಗಿ ಪೊಲೀಸ್ ವಶಕ್ಕೆ
ಏ. 22 ಜಮ್ಮು–ಕಾಶ್ಮೀರದಲ್ಲಿ ಉಗ್ರರ ಅಟ್ಟಹಾಸ; ನಿಮ್ಮದು ಯಾವ ಧರ್ಮ ಅಂತಾ ಪ್ರತಿಯೊಬ್ಬರನ್ನೂ ಕೇಳಿ ಕೇಳಿ ಹಿಂದೂ ಪ್ರವಾಸಿಗರ ಮೇಲೆ ಮಾತ್ರ ಗುಂಡಿನ ದಾಳಿ; ಕರ್ನಾಟಕದ ಇಬ್ಬರು ಸೇರಿ 30ಕ್ಕೂ ಅಧಿಕ ಪ್ರವಾಸಿಗರು ಬಲಿ
ಏ. 23 ಪತ್ನಿ ಜೀವಂತವಿದ್ದರೂ ಹತ್ಯೆಗೈದ ಆರೋಪದಡಿ ಜೈಲು ಶಿಕ್ಷ: ಸುರೇಶ್‌ಗೆ ಮುಕ್ತಿ
ಏ. 23 ಪಹಲ್ಗಾಮ್ ಉಗ್ರರ ಪೈಶಾಚಿಕ ದಾಳಿಗೆ ತಕ್ಷಣದ ಪ್ರತೀಕಾರ : ಪಾಕ್‌ಗೆ ಭಾರತದ ಬಾಗಿಲು ಬಂದ್
ಏ. 24 ಒಬ್ಬೊಬ್ಬ ಉಗ್ರರನ್ನು ಹುಡುಕಿ ಹೊಡೆದುರುಳಿಸುತ್ತೇವೆ... ಪ್ರಧಾನಿ ಮೋದಿ ಶಪಥ
ಏ. 24 ಕೊಡಗಿನ ಹಿರಿಯ ಕಾಂಗ್ರೆಸ್ ಮುಖಂಡ ಮಿಟ್ಟು ಚಂಗಪ್ಪ ನಿಧನ
ಏ. 25 ಇಸ್ರೋ ಮಾಜಿ ಅಧ್ಯಕ್ಷ ಕೆ. ಕಸ್ತೂರಿರಂಗನ್ ಇನ್ನಿಲ್ಲ


ಕಸ್ತೂರಿ ರಂಗನ್

ಏ. 26 ಪೋಪ್ ಫ್ರಾನ್ಸಿಸ್‌ಗೆ ವಿದಾಯ
ಏ. 26 ಪಾಕ್‌ನೊಂದಿಗೆ ಯುದ್ಧದ ಅನಿವಾರ್ಯತೆ ಇಲ್ಲ
ಏ. 29 ಉಗ್ರರ ಸಂಹರಿಸಲು ಸೇನೆ ಪೂರ್ಣ ಸ್ವತಂತ್ರ


ಪೋಪ್ ಫ್ರಾನ್ಸಿಸ್

ಏ. 29 ಮಂಡ್ಯ: 13 ದಿನದ ಹಿಂದೆ ನಾಪತ್ತೆಯಾಗಿದ್ದ ತಂದೆ, ಇಬ್ಬರು ಮಕ್ಕಳು ವಿಶ್ವೇಶ್ವರಯ್ಯ ನಾಲೆಯಲ್ಲಿ ಶವವಾಗಿ ಪತ್ತೆ
ಏ. 30 ಪಹಲ್ಗಾಮ್ ಉಗ್ರರ ಜೀವಂತ ಹಿಡಿಯಿರಿ: ಪ್ರಧಾನಿ ನರೇಂದ್ರ ಮೋದಿ ಸೈನಿಕರಿಗೆ ಖಡಕ್ ಎಚ್ಚರಿಕೆ



ಅಂಬೇಡ್ಕರ್‌ಗೆ ಸಂವಿಧಾನ ಬರೆಯಲು ಅವಕಾಶ ನೀಡಿದ್ದೇ ಕಾಂಗ್ರೆಸ್

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಡಿ.28– ಇಡೀ ಪ್ರಪಂಚಕ್ಕೆ ಮಾದರಿಯಾಗಿರುವ ಸಂವಿಧಾನ ಬರೆಯಲು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅವಕಾಶ ನೀಡಿದ್ದೇ ಕಾಂಗ್ರೆಸ್ ಸರ್ಕಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಕಲಾಮಂದಿರದಲ್ಲಿ ಭಾನುವಾರ ದಲಿತ ಸಮುದಾಯ ಸಂಘಟನೆಗಳು ಆಯೋಜಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಾತನಾಡುವವರು ಒಂದು ವರ್ಗವಾದರೆ, ಕೆಲಸ ಮಾಡುವವರು ಒಂದು ವರ್ಗ. ನಾವು ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇವೆ. ಬಿಜೆಪಿ–ಜೆಡಿಎಸ್ ಸುಳ್ಳು ಹೇಳುತ್ತಾರೆ ಎಂದರು.

ಅಂಬೇಡ್ಕರ್ ಅವರ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಆ ಸಂವಿಧಾನದಿಂದಲೇ ಕಾಂಗ್ರೆಸ್ ಪಕ್ಷ ಜನರ ಆರ್ಥಿಕ, ಶಿಕ್ಷಣ, ಬದುಕು ಬಗ್ಗೆ ಸಮತೋಲನ ಕಾಪಾಡಿಕೊಂಡು ಬರುತ್ತಿದೆ. ಎಸ್ಸಿ, ಎಸ್ಟಿ ಸಮುದಾಯಗಳ ಅಭಿವೃದ್ಧಿಗೆ ಶೇ.18ರಷ್ಟು ಅನುದಾನ ಇಟ್ಟಿದ್ದೇ ಕಾಂಗ್ರೆಸ್ ಸರ್ಕಾರ. ಆದರೆ ಮೋದಿಯಾಗಲೀ, ಬಿಜೆಪಿಯವರಾಗಲೀ ಇಟ್ಟಿಲ್ಲ. ಇದರ ಬಗ್ಗೆ ನೀವು ಪ್ರಶ್ನೆ ಮಾಡಬೇಕು ಎಂದರು.

ನಮ್ಮ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಜಿಲ್ಲೆಯ ಪ್ರತಿಯೊಬ್ಬರೂ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ತಿಳಿಸಬೇಕು. ನಮ್ಮ ಸರ್ಕಾರದ ಮೇಲೆ ನಂಬಿಕೆ, ಪ್ರೀತಿ, ವಿಶ್ವಾಸವಿಟ್ಟರೆ ಅಭಿವೃದ್ಧಿ, ಸಮುದಾಯದ ಸಬಲೀಕರಣವಾಗಲಿದೆ. ಇದರ ಬಗ್ಗೆ ಎಲ್ಲರೂ ಚಿಂತಿಸಬೇಕಿದೆ. ಕಾಂಗ್ರೆಸ್ ಸರ್ಕಾರದಿಂದ ಕಡುಬಡವರಿಗೆ ಅನುಕೂಲವಾಗಿದೆ. ನೀವು ನಮ್ಮ ಜೊತೆ ಗಟ್ಟಿಯಾಗಿ ನಿಂತರೆ ನಿಮ್ಮ ಭವಿಷ್ಯ ಬದಲಾಗಲಿದೆ. ಮಂಡ್ಯ ಎಂದರೆ ಬರೀ ಒಕ್ಕಲಿಗರಲ್ಲ. ಎಲ್ಲ ಸಮುದಾಯದವರೂ ಒಗ್ಗಟ್ಟಿನೊಂದಿಗೆ ಸಾಗಬೇಕಿದೆ ಎಂದರು.

ಜಿಲ್ಲೆಯಲ್ಲಿ ಮಹಾನ್ ನಾಯಕರು ಆಡಳಿತ ನಡೆಸುತ್ತಿದ್ದ ವೇಳೆ ಇಷ್ಟೊಂದು ಅಧಿಕಾರ ದಲಿತ ಮುಖಂಡರಿಗೆ ಕಲ್ಪಿಸಿರಲಿಲ್ಲ. ಆದರೆ ಈ ಬಾರಿ 4 ಪ್ರಮುಖ ಸ್ಥಾನಗಳಿಗೆ ಅಧಿಕಾರ ನೀಡಲಾಗಿದೆ. ಇದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಇದೆ. ಬೇರೆ ಪಕ್ಷಗಳಲ್ಲಿ ಆ ರೀತಿ ಇಚ್ಛಾಸಕ್ತಿ ಇಲ್ಲ ಎಂದ ಅವರು ಮುಂಬರುವ ಗ್ರಾಪಂ, ತಾಪಂ, ಜಿಪಂ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಮಾತನಾಡಿ, ಜಿಲ್ಲೆಯ 50 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ದಲಿತ ಸಮುದಾಯದವರಿಗೆ ಇಷ್ಟೊಂದು ಅಧಿಕಾರ ಸಿಕ್ಕಿದೆ. ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿ ಜವಾಬ್ದಾರಿ ವಹಿಸುವುದು ಕಾಂಗ್ರೆಸ್ ಪಕ್ಷ ಮಾಡಿಕೊಂಡು ಬಂದಿದೆ ಎಂದರು.

ಒಬ್ಬ ಸಾಮಾನ್ಯ ವ್ಯಕ್ತಿಗೂ ಅಧಿಕಾರ ಸಿಗಲು ಕಾಂಗ್ರೆಸ್ ಪಕ್ಷ ಕಾರಣವಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಲ್ಲಿ ಇಂತಹ ಅವಕಾಶ ಸಿಗುವುದಿಲ್ಲ ಎಂದ ಅವರು ಎಲ್ಲಾ ಮುಖಂಡರಿಗೂ ಅರ್ಹತೆ ಇದೆ. ಆದರೆ ಅವಕಾಶಕ್ಕಾಗಿ ತಾಳ್ಮೆಯಿಂದ ಕಾಯಬೇಕು ಎಂದರು.

ಬಿಜೆಪಿ, ಜೆಡಿಎಸ್ ಪಕ್ಷಗಳನ್ನು ಅಧಿಕಾರದಿಂದ ಹೊರಗಿಟ್ಟರೆ ಮಾತ್ರ ದಲಿತರಿಗೆ ಅಧಿಕಾರ ಸಿಗಲಿದೆ. ಜೆಡಿಎಸ್ ನಂಬಿದರೆ ಚಿಪ್ಪು ಗ್ಯಾರಂಟಿ. ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ನಂಬಿದರೆ ಅಧಿಕಾರ ಗ್ಯಾರಂಟಿ ಸಿಗಲಿದೆ. ಈಗಾಗಲೇ ಜಿಲ್ಲೆಗೆ 10 ಸಾವಿರ ಕೋಟಿ ರೂ. ಅನುದಾನ ನೀಡಲಾಗಿದೆ. ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ 2 ಸಾವಿರ ಕೋಟಿ ರೂ. ಅನುದಾನ ನೀಡಲಾಗಿದೆ. ಆದ್ದರಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಅಲ್ಲದೇ ದಲಿತರ ಕಾಲೋನಿಗಳಿಗೆ ರಸ್ತೆ ಹಾಗೂ ಮೂಲ ಸೌಲಭ್ಯ ನೀಡಲಾಗುತ್ತಿದೆ. ಆದ್ದರಿಂದ ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದರು.

ಸಮಾರಂಭದಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಅನುಸೂಚಿತ ಜಾತಿ/ಪಂಗಡಗಳ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಉಪಾಧ್ಯಕ್ಷೆ ವಿಜಯಲಕ್ಷ್ಮಿ ಅವರನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಹಿರಿಯ ಪತ್ರಕರ್ತ ಸೋಮಶೇಖರ್ ಕೆರಗೋಡು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶೈಲೇಂದ್ರ, ದಸಂಸ ಮುಖಂಡರಾದ ಗಂಗರಾಜು, ನರಸಿಂಹಮೂರ್ತಿ, ಎಂ.ವಿ.ಕೃಷ್ಣ ಉದ್ಯಮಿ ಮಧು, ಮುಡಾ ನಿರ್ದೇಶಕರಾದ ಇದ್ರೀಶ್ ಖಾನ್, ಕಮಲಮ್ಮ, ನಗರಸಭೆ ಮಾಜಿ ಸದಸ್ಯ ಮಹೇಶ್‌ಕೃಷ್ಣ, ಗ್ರಾಪಂ ಮಾಜಿ ಸದಸ್ಯ ಕೃಷ್ಣಮೂರ್ತಿ, ಮುಖಂಡರಾದ ಶ್ರೀಕಾಂತ್, ಮೋಹನ್ ಇತರರಿದ್ದರು.

> ನನ್ನ ಮೇಲೆ ವಿಶ್ವಾಸವಿಟ್ಟು ಕಾಂಗ್ರೆಸ್ ಪಕ್ಷ ಅತಿದೊಡ್ಡ ಜವಾಬ್ದಾರಿ ಹೊರಿಸಿದೆ. ಮುಡಾ ಅಧ್ಯಕ್ಷ ಸ್ಥಾನಕ್ಕೆ ಈವರೆಗೂ ದಲಿತ ಸಮುದಾಯದವರೊಬ್ಬರು ಆಯ್ಕೆಯಾಗಿರಲಿಲ್ಲ. ಎಲ್ಲರಿಗೂ ಸರಿ ಸಮಾನ ಅವಕಾಶ ನೀಡಬೇಕೆಂಬ ಕಾಂಗ್ರೆಸ್ ಪಕ್ಷದ ಧ್ಯೇಯದಿಂದಾಗಿ ನಾನು ಇಂದು ಈ ಹುದ್ದೆ ಅಲಂಕರಿಸಿದ್ದೇನೆ. ಪಕ್ಷ ಸಂಘಟನೆ ಹಾಗೂ ಮಂಡ್ಯದಲ್ಲಿ ಕಾಂಗ್ರೆಸ್ ಅನ್ನು ಮತ್ತಷ್ಟು ಶಕ್ತಿ ತುಂಬಲು ನಾನು ಪ್ರಾಮಾಣಿಕ ಸೇವೆ ಸಲ್ಲಿಸುತ್ತೇನೆ. **– ಬಿ.ಪಿ.ಪ್ರಕಾಶ್, ಮುಡಾ ಅಧ್ಯಕ್ಷ.**

> ಪಕ್ಷ ನಮ್ಮ ಸೇವೆ ಪರಿಗಣಿಸಿ ಗುರುತರವಾದ ಜವಾಬ್ದಾರಿ ನೀಡಿದೆ. ಇಂತಹ ವ್ಯಕ್ತಿಗೆ ಈ ಹುದ್ದೆ ಕೊಟ್ಟರೆ ಸಮಾಜಕ್ಕೆ ಒಳಿತಾಗುತ್ತದೆ ಎಂಬುದು ಕಾಂಗ್ರೆಸ್ ಸಿದ್ಧಾಂತವಾಗಿದ್ದು, ಆ ಹಿನ್ನೆಲೆಯಲ್ಲಿ ನನಗೆ ಅನುಸೂಚಿತ ಜಾತಿ/ಪಂಗಡಗಳ ಆಯೋಗದ ಅಧ್ಯಕ್ಷ ಸ್ಥಾನ ಲಭಿಸಿದೆ. ಜಿಲ್ಲೆಯ ಅನೇಕ ಮಂದಿಗೆ ನಿಗಮ ಮಂಡಳಿಗಳ ಸ್ಥಾನ ದೊರೆತಿದ್ದು, ಯಾವ ಸಮುದಾಯಕ್ಕೂ ಅನ್ಯಾಯವಾಗದಂತೆ ನಮ್ಮ ನಾಯಕರು ವಿವಿಧ ಹುದ್ದೆಗಳನ್ನು ನೀಡಿದ್ದಾರೆ.
> **– ಡಾ.ಎಲ್.ಮೂರ್ತಿ, ಅನುಸೂಚಿತ ಜಾತಿ/ಪಂಗಡಗಳ ಆಯೋಗದ ಅಧ್ಯಕ್ಷ**

ಕಾಡಾನೆ ದಾಳಿ: ಟಮೋಟೊ, ರಾಗಿ, ಭತ್ತದ ಫಸಲು ನಾಶ

ಹಲಗೂರು, ಡಿ.28– ಕನಕಪುರ ತಾಲೂಕಿನ ಭೀಮನಕಿಂಡಿ ಅರಣ್ಯ ಪ್ರದೇಶದಿಂದ ಬಂದ 8ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಟಮೋಟೊ, ರಾಗಿ ಮತ್ತು ಭತ್ತದ ಫಸಲನ್ನು ತಿಂದು, ತುಳಿದು ನಾಶ ಮಾಡಿರುವ ಘಟನೆ ಸಮೀಪದ ನಿಟ್ಟೂರು ಗ್ರಾಮ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಭೀಮನಕಿಂಡಿ ಅರಣ್ಯ ಪ್ರದೇಶದಿಂದ ನಿಟ್ಟೂರು, ಸರಗೂರು, ಎನ್.ಹಲಸಹಳ್ಳಿ, ಲಿಂಗಪಟ್ಟಣ ಹೊರವಲಯದ ಕೃಷಿ ಪ್ರದೇಶದ ಕಡೆಗೆ ಬಂದ ಆನೆಗಳು ರೈತರ ಫಸಲನ್ನು ತಿಂದು, ತುಳಿದು ಹಾಕಿವೆ. ಆನೆಗಳು ಆಗಮಿಸಿದ ಮಾಹಿತಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಭಾನುವಾರ ಬೆಳಗ್ಗೆಯಿಂದಲೇ ಆನೆಗಳನ್ನು ಕಾಡಿಗಟ್ಟುವ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿದರು. ಆದರೆ ಅಷ್ಟರಲ್ಲಾಗಲೇ ನಿಟ್ಟೂರು ಗ್ರಾಮದ ಗಂಗರಾಜು ಅವರಿಗೆ ಸೇರಿದ ಟಮೋಟೊ, ಲಕ್ಕ್ಯಯ್ಯ ಅವರಿಗೆ ಸೇರಿದ ಬಾಳೆ, ಈರಪ್ಪ ಅವರ ಕುಯ್ಲಿಗೆ ಬಂದಿದ್ದ ಭತ್ತದ ಫಸಲು, ಕಾಳಯ್ಯ ಅವರಿಗೆ ಸೇರಿದ ಕನಕಾಂಬರ ಬೆಳೆ ಫಸಲು ಹಾನಿಗೀಡಾಗಿದ್ದವು.

ರೈತ ಗಂಗರಾಜು ಮಾತನಾಡಿ, ಕಷ್ಟಪಟ್ಟು ಟಮೋಟೊ ಬೆಳೆದಿದ್ದು, ಉತ್ತಮ ಇಳುವರಿ ಬಂದಿತ್ತು. ಪ್ರಸ್ತುತ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಸಹ ಇದ್ದು, ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದೆವು. ಆನೆ ದಾಳಿಯಿಂದ ಕಟಾವಿಗೆ ಬಂದಿದ್ದ ಟಮೋಟೊ ಗಿಡಗಳು ನೆಲಕಚ್ಚಿವೆ. ಪರಿಣಾಮ ಅಪಾರ ನಷ್ಟ ಉಂಟಾಗಿದೆ. ನಷ್ಟಕ್ಕೀಡಾದ ಫಸಲಿಗೆ ಸೂಕ್ತ ಪರಿಹಾರ ನೀಡಬೇಕು. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಕಾಡು ಪ್ರಾಣಿಗಳು ಕಾಡಿನಿಂದ ಜನವಸತಿ ಪ್ರದೇಶದತ್ತ ಬರದಂತೆ ತಡೆಗಟ್ಟಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ರೈತ ಮನು ಮಾತನಾಡಿ, ಕಾಡು ಪ್ರಾಣಿಗಳ ದಾಳಿಯಿಂದ ಫಸಲು ರಕ್ಷಿಸಿಕೊಳ್ಳುವ ಜೊತೆಗೆ ನಮ್ಮ ಜೀವ ರಕ್ಷಣೆ ಮಾಡಿಕೊಳ್ಳಬೇಕಾದ ಆತಂಕ ಎದುರಿಸುವಂತಾಗಿದೆ. ದಿನನಿತ್ಯ ಕಾಡು ಪ್ರಾಣಿಗಳಾದ ಜಿಂಕೆ, ಹಂದಿ ಮತ್ತು ಆನೆ ದಾಳಿಯಿಂದ ಫಸಲನ್ನು ಉಳಿಸಿಕೊಳ್ಳಲು ರಾತ್ರಿ ಇಡೀ ಜಮೀನಿನಲ್ಲಿ ಉಳಿಯಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ನೋವು ತೋಡಿಕೊಂಡರು.

ಸರ್ಕಾರಗಳು ಸರ್ಕಾರಿ ಶಾಲೆಗಳ ಬಲವರ್ಧನೆಗೊಳಿಸಲಿ

ಚಿತ್ರನಟ ಮುಖ್ಯಮಂತ್ರಿ ಚಂದ್ರು ಅಭಿಪ್ರಾಯ



ಕಾರ್ಯಕ್ರಮವನ್ನು ಚಿತ್ರನಟ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

ಪಾಂಡವಪುರ, ಡಿ.28– ಬಡವರು, ದುರ್ಬಲರು, ಶೋಷಿತರಿಗೆ ಅನುಕೂಲವಾಗುವಂತೆ ಶಿಕ್ಷಣ, ವೈದ್ಯಕೀಯ ಹಾಗೂ ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರ್ಕಾರಗಳು ಮುಂದಾಗಬೇಕು ಎಂದು ಚಿತ್ರನಟ ಮುಖ್ಯಮಂತ್ರಿ ಚಂದ್ರು ತಿಳಿಸಿದರು.

ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ನಡೆದ ಸರ್ಕಾರಿ ಶಾಲೆ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಗಳು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಪೋಷಣೆ ಮಾಡುವುದನ್ನು ಬಿಡಬೇಕು. ಬದಲಾಗಿ ಸರ್ಕಾರಿ ಶಾಲೆಗಳನ್ನು ಬಲವರ್ಧನೆಗೊಳಿಸಿ ಬಡವರು, ಶೋಷಿತರು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕರಿಸಬೇಕು. ಜೊತೆಗೆ ವೈದ್ಯಕೀಯ ವ್ಯವಸ್ಥೆ ಹಾಗೂ ಉದ್ಯೋಗ ದೊರಕಿಸಿಕೊಟ್ಟರೆ ಕುಟುಂಬಗಳು ನೆಮ್ಮದಿ ಜೀವನ ನಡೆಸಲು ಸಹಕಾರಿಯಾಗಲಿದೆ ಎಂದರು.

ಪೋಷಕರಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಗಿದ್ದು, ಅದರಿಂದ ಹೊರ ಬರಬೇಕಿದೆ. ಕನ್ನಡದ ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳು ದೊಡ್ಡ ಸಾಧನೆ ಮಾಡಿದ್ದಾರೆ. ನಮ್ಮ ಸರ್ಕಾರಿ ಶಾಲೆಗಳನ್ನು ನಾವೆಲ್ಲರೂ ಸೇರಿ ರಕ್ಷಣೆ ಮಾಡಬೇಕಾಗಿದೆ. ಸರ್ಕಾರಿ ಶಾಲೆಗಳು ಉಳಿದರೆ ಮಾತ್ರ ಗ್ರಾಮೀಣ ಮಕ್ಕಳು ಶೈಕ್ಷಣಿಕ ಪ್ರಗತಿಗೆ ಸಾಧಿಸಲು ಸಾಧ್ಯ. ನಮ್ಮ ಕನ್ನಡ ಭಾಷೆಗೆ 5 ಸಾವಿರ ವರ್ಷಗಳ ಇತಿಹಾಸವಿದೆ. ಪ್ರತಿಯೊಬ್ಬರೂ ದೇಶ, ರಾಜ್ಯ ಪ್ರೀತಿಸುವ ಜೊತೆಗೆ ನಮ್ಮ ಭಾಷೆ ಹಾಗೂ ಸಂಪತ್ತನ್ನು ರಕ್ಷಣೆ ಮಾಡಬೇಕು ಎಂದರು.

ಅದ್ದೂರಿ ಮೆರವಣಿಗೆ: ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಬೆಳ್ಳಿ ಸಾರೋಟ್‌ನಲ್ಲಿ ಶಾರದಾಂಬೆ ಫೋಟೋ ಇಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ವಿವಿಧ ಜಾನಪದ ಕಲಾ ತಂಡಗಳು ಸಾಥ್ ನೀಡಿದವು.

ಇದೇ ವೇಳೆ ರೈತನಾಯಕಿ ಸುನೀತಾ ಪುಟ್ಟಣ್ಣಯ್ಯ, ಉದ್ಯಮಿ ಅರವಿಂದ್ ರಾಘವನ್, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಮಾತನಾಡಿದರು. ಶಾಲೆಗೆ ಭೂಮಿ ನೀಡಿದ ದಾನಿಗಳು, ಶಾಲೆಯಲ್ಲಿ ಕೆಲಸ ಮಾಡಿದ ಹಿರಿಯ ನಿವೃತ್ತ ಶಿಕ್ಷಕರು, ಹಾಲಿ ಕೆಲಸ ಮಾಡುತ್ತಿರುವ ಶಿಕ್ಷಕರು ಹಾಗೂ ಹಿರಿಯ ಮುಖಂಡರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪದ್ಮಚಂದ್ರು, ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ತಾಪಂ ಮಾಜಿ ಸದಸ್ಯ ಬಿ.ಪಿ.ಶ್ರೀನಿವಾಸ್, ನಿವೃತ್ತ ಶಿಕ್ಷಕ ಶಿವೇಗೌಡ, ಜಿಲ್ಲಾ ಕುರುಬ ಸಮಾಜದ ಉಪಾಧ್ಯಕ್ಷ ಬಿ.ಕೆ.ರೇವಣ್ಣ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಿ.ಡಿ.ನಂಜೇಗೌಡ, ವೀರಶೈವ ಮುಖಂಡ ಸಾಹಿತಿ ಸಿದ್ದಲಿಂಗಪ್ಪ, ಸಿಡಿಸಿ ಉಪಾಧ್ಯಕ್ಷ ಬಿ.ಕೆ.ಶ್ರೀನಿವಾಸ್, ಗ್ರಾಪಂ ಅಧ್ಯಕ್ಷ ಮಂಜಯ್ಯ, ಹಳೆಯ ವಿದ್ಯಾರ್ಥಿ ಪದ್ಮ ಪುಟ್ಟೇಗೌಡ, ಧರ್ಮಸ್ಥಳ ಸಂಘದ ಯೋಜನಾಧಿಕಾರಿ ಯಶ್ವಂತ್, ಬಿಜೆಪಿ ತಾಲೂಕು ಅಧ್ಯಕ್ಷ ಧನಂಜಯ್ಯ, ಮುಖಂಡರಾದ ಹೆಚ್.ಎನ್.ಮಂಜುನಾಥ್, ಬಿ.ಜೆ.ಸ್ವಾಮಿ, ರವಿ ಸೇರಿದಂತೆ ಇತರರಿದ್ದರು.

ಮುದುಗೆರೆಯಲ್ಲಿ ಬೋನಿಗೆ ಬಿದ್ದ ಚಿರತೆ

ಕೆ.ಆರ್.ಪೇಟೆ: ತಾಲೂಕಿನ ಮುದುಗೆರೆ ಗ್ರಾಮದಲ್ಲಿ ರೈತರ ಸಾಕು ಪ್ರಾಣಿಗಳನ್ನು ತಿಂದು ಹಾಕುತ್ತಾ ರೈತರಲ್ಲಿ ಆತಂಕ ಸೃಷ್ಟಿಸಿದ್ದ ಚಿರತೆ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಬಿದ್ದಿದೆ.

ರೈತ ರವೀಶ್‌ಗೆ ಸೇರಿದ ಮೂರು ಮೇಕೆಗಳನ್ನು ಒಂದೇ ದಿನ ಹೊತ್ತೊಯ್ದು ತಿಂದು ಹಾಕುವ ಮೂಲಕ ಆತಂಕ ಸೃಷ್ಟಿಸಿದ್ದ ಚಿರತೆ ವಾರದಿಂದ ನಿತ್ಯ ಗ್ರಾಮದ ಕಾಳಶೆಟ್ಟಿ, ತಿಮ್ಮಮ್ಮ, ದೊಡ್ಡಶೆಟ್ಟಿ, ಸಂಪಿಗೆಶೆಟ್ಟಿ, ಕೃಷ್ಣೇಗೌಡರ ಜಮೀನಿನ ಬಳಿ ಕಾಣಿಸಿಕೊಂಡು ಸಾಕು ಪ್ರಾಣಿಗಳನ್ನು ತಿನ್ನಲು ಹೊಂಚು ಹಾಕುತ್ತಿತ್ತು. ಇದನ್ನು ಗಮನಿಸಿದ ರೈತರು ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಈ ವೇಳೆ ಕಾರ್ಯ ಪ್ರವೃತ್ತರಾದ ತಾಲೂಕು ಅರಣ್ಯ ಸಂರಕ್ಷಣಾಧಿಕಾರಿ (ಆರ್‌ಎಫ್‌ಓ) ಅನಿತಾ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ನಂದಕುಮಾರ್ ನೇತೃತ್ವದಲ್ಲಿ ಇಡಲಾಗಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ವಶಕ್ಕೆ ಪಡೆದರು.

ಒಂದನೇ ಪುಟದಿಂದ

ಚಿನ್ನಾಭರಣ ಮಳಿಗೆ ದರೋಡೆ



ದರೋಡೆ ನಡೆದ ಚಿನ್ನಾಭರಣ ಮಳಿಗೆಯನ್ನು ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ ಪರಿಶೀಲಿಸಿದರು.

ಮ್ಯಾನೇಜರ್ ಅಸ್ಗರ್ ಅವರು, ದುಷ್ಕರ್ಮಿಗಳನ್ನು ತಮ್ಮ ಸ್ಕೂಟರ್‌ನಲ್ಲಿ ಬೆನ್ನತ್ತಿದ್ದು, ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಬೈಕ್ ನಿಲ್ಲಿಸದ ದುಷ್ಕರ್ಮಿಗಳು ಅಸ್ಗರ್‌ಗೆ ರಿವಾಲ್ವರ್ ತೋರಿಸಲಾಗಿ, ಹೆದರಿದ ಅವರು, ಮಳಿಗೆಗೆ ವಾಪಸ್ಸಾಗಿದ್ದಾರೆ.

ಘಟನಾ ಸ್ಥಳಕ್ಕೆ ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ, ಜಿಲ್ಲಾ ಎಸ್ಪಿ ವಿಷ್ಣುವರ್ಧನ, ಅಡಿಷನಲ್ ಎಸ್ಪಿಗಳಾದ ನಾಗೇಶ್, ಮಲ್ಲಿಕ್, ಡಿವೈಎಸ್ಪಿ ರವಿ, ಹುಣಸೂರು ಟೌನ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಜಮೀರ್ ಅಹಮದ್, ತಿಮ್ಮನಾಯಕ, ಬೆರಳಚ್ಚು ವಿಭಾಗದ ಇನ್ಸ್‌ಪೆಕ್ಟರ್ ಬಾಲಸುಬ್ರಹ್ಮಣ್ಯ, ಎಎಸ್‌ಐ ಹರೀಶ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಸ್ಥಳಕ್ಕೆ ಶ್ವಾನದಳವನ್ನು ಕರೆಸಿ ಪರಿಶೀಲನೆ ನಡೆಸಲಾಯಿತು.

ಇಂದು ಪಿರಿಯಾಪಟ್ಟಣ ಮತ್ತು ಹರವೆ ಗ್ರಾಮದಲ್ಲಿ ಹನುಮ ಜಯಂತಿ ಕಾರ್ಯಕ್ರಮವಿದ್ದುದರಿಂದ ಇಲ್ಲಿನ ಹೆಚ್ಚಿನ ಸಂಖ್ಯೆ ಪೊಲೀಸರು ಬಂದೋಬಸ್ತ್‌ಗಾಗಿ ಅಲ್ಲಿಗೆ ತೆರಳಿದ್ದರು. ಭಾನುವಾರವಾದ್ದರಿಂದ ಈ ಮಳಿಗೆಯ ಅಕ್ಕಪಕ್ಕದ ಅಂಗಡಿಗಳು ಬಂದ್ ಆಗಿದ್ದವು. ಮಳಿಗೆಯಲ್ಲಿ ಸಾಮಾನ್ಯವಾಗಿ 18 ರಿಂದ 20 ಮಂದಿ ಕೆಲಸ ಮಾಡುತ್ತಾರಾದರೂ, ರಜೆ ದಿನವಾದ ಕಾರಣ ಐವರು ಮಹಿಳೆಯರೂ ಸೇರಿದಂತೆ 7 ಮಂದಿ ಮಾತ್ರ ಕೆಲಸ ಮಾಡುತ್ತಿದ್ದರು.

ದರೋಡೆಕೋರರು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತನಾಡುತ್ತಿದ್ದರು ಎಂದು ಸಿಬ್ಬಂದಿಯು ಪೊಲೀಸರಿಗೆ ತಿಳಿಸಿದ್ದಾರೆ. ದುಷ್ಕರ್ಮಿಗಳ ಪತ್ತೆಗಾಗಿ ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಮಳಿಗೆಯ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪೊಲೀಸರು ಪರಿಶೀಲಿಸಿದ್ದಾರೆ. ಕೇರಳ ಮೂಲದವರ ಮಾಲೀಕತ್ವದ ಈ ಮಳಿಗೆಯನ್ನು ಕಳೆದ ಏಪ್ರಿಲ್ 27ರಂದು ಚಿತ್ರನಟ ಡಾಲಿ ಧನಂಜಯ ಉದ್ಘಾಟಿಸಿದ್ದರು.

ಪೊಲೀಸ್ ಗಸ್ತಿಗೆ ಡ್ರೋನ್ ಬಳಕೆ

ಬಳಸುವಂತೆ ಪೊಲೀಸರಿಗೆ ತಾಕೀತು ಮಾಡಿದೆ. ಇದುವರೆಗೆ ಸಿಸಿ ಕ್ಯಾಮರಾಗಳು, ಎ–ಐ ಕ್ಯಾಮರಾಗಳನ್ನು ಮಾತ್ರ ಬಳಸಲಾಗುತ್ತಿತ್ತು ಇದೀಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಪೊಲೀಸರು, ತಂತ್ರಜ್ಞಾನ ಬಳಸಿ ಅಪರಾಧ ಕೃತ್ಯಗಳನ್ನು ತಡೆಯಲು ಮುಂದಾಗಿದ್ದಾರೆ. ಎತ್ತರದಿಂದ ಫೋಟೋ ತೆಗೆದು, ವಿಡಿಯೋ ರೆಕಾರ್ಡ್ ಮಾಡುವ ಡ್ರೋನ್ ಕ್ಯಾಮರಾ ವ್ಯವಸ್ಥೆಯಿಂದ ವ್ಯಕ್ತಿಗಳ ಅಥವಾ ವಸ್ತುಗಳ ಅಥವಾ ಸ್ಥಳದ ನಿಖರವಾದ ಚಿತ್ರ ಗೋಚರಿಸುತ್ತದೆ ಎಂಬುದು ಪೊಲೀಸರ ವಾದ.

ಈ ವ್ಯವಸ್ಥೆಯಿಂದ ಕಿ.ಮೀ. ಗಟ್ಟಲೆ ಸುತ್ತಳತೆ ಪ್ರದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ವೀಕ್ಷಿಸಲು ಸಾಧ್ಯವಾಗುವುದರಿಂದ ಮುಂದಾಗುವ ಅನಾಹುತಗಳನ್ನು ತಪ್ಪಿಸಬಹುದಾಗಿದೆ. ಬೆಂಕಿ ಅವಘಡ, ಅಪಘಾತ, ಪ್ರಾಣಿಗಳ ಚಲನ–ವಲನ, ಗುಂಪು ಘರ್ಷಣೆ, ಅವಘಡಗಳು, ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಪರಾರಿಯಾಗುವ ಆರೋಪಿಗಳ ಲೊಕೇಷನ್ ಪತ್ತೆಗೂ ಡ್ರೋನ್ ಕ್ಯಾಮರ ಸಹಕಾರಿಯಾಗಲಿದೆ.

ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆಯಂತಹ ಜನಸಂದಣೆ ಸ್ಥಳಗಳಲ್ಲಿ ಗಸ್ತು ತಿರುಗುವುದು ಕಷ್ಟಸಾಧ್ಯ, ಅಂತಹ ಸ್ಥಳಗಳಲ್ಲಿ ನಡೆಯುವ ಚಟುವಟಿಕೆಗಳನ್ನು ದೂರದಲ್ಲಿ ನಿಂತು ವೀಕ್ಷಿಸುವ ವ್ಯವಸ್ಥೆ, ಗಿಡ–ಮರಗಳ ಮಧ್ಯೆ ನಿರ್ಜನ ಪ್ರದೇಶಗಳಲ್ಲಿ ಜೂಜಾಟ ಅಥವಾ ಇನ್ನಿತರ ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗಿಯಾಗುವವರನ್ನು ಡ್ರೋನ್ ಕ್ಯಾಮರಾ ಕಣ್ಣುಗಳಿಂದ ಸೆರೆ ಹಿಡಿಯಬಹುದಾಗಿದೆ.

ಒಟ್ಟಾರೆ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು, ಕಾನೂನು ಸುವ್ಯವಸ್ಥೆ ಕಾಪಾಡುವ ಮೂಲಕ ಪರಿಣಾಮಕಾರಿಯಾಗಿ ಪೊಲೀಸ್ ಕರ್ತವ್ಯ ನಿರ್ವಹಿಸಲು ಡ್ರೋನ್ ಕ್ಯಾಮರಾಗಳಿಗೆ ಮೊರೆ ಹೋಗಿರುವ ಪೊಲೀಸರು ಸಾರ್ವಜನಿಕರ ಮೆಚ್ಚುಗೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಒಂದೇ ಸ್ಥಳದಲ್ಲಿ 48 ಗಂಟೆಯಲ್ಲೇ ಎರಡು ಹುಲಿ ಸೆರೆ



ಮೇಟಿಕುಪ್ಪೆ ವಲಯದಲ್ಲಿ ಶುಕ್ರವಾರ ಸೆರೆ ಹಿಡಿದ ಗಂಡು ಹುಲಿಯೊಂದಿಗೆ ಅಧಿಕಾರಿಗಳ ತಂಡ.

ಪಣತೊಟ್ಟಿದ್ದ ಅರಣ್ಯ ಸಿಬ್ಬಂದಿ ಹಸುವಿನ ಕಳೆಬರದ ಮುಂದೆ ಪಶುವೈದ್ಯ ಡಾ.ರಮೇಶ್ ಇದ್ದ ಜೀಪನ್ನು ನಿಲ್ಲಿಸಿ, ಅದರ ಮೇಲೆ ಹಸಿರುವ ಸೊಪ್ಪು ಹಾಕಿ ಹುಲಿ ಸೆರೆಗಾಗಿ ತಂಡವೊಂದು ಹೊಂಚು ಹಾಕಿ ಕುಳಿತಿತ್ತು. ಈ ವೇಳೆ ಹಸುವಿನ ಕಳೆಬರ ತಿನ್ನಲು ಅಂದು ಸಂಜೆ ಬಂದ ಹುಲಿಗೆ ಇನ್ನೇನು ಅರವಳಿಕೆ ಮದ್ದು ಪ್ರಯೋಗ ಮಾಡಬೇಕೆನ್ನುವಷ್ಟರಲ್ಲಿ ಅಪಾಯದ ಸುಳಿವರಿತ ಹುಲಿ ಸ್ಥಳದಿಂದ ಕಾಲ್ಕಿತ್ತಿತ್ತು. ಹುಲಿ ಹೋಗುತ್ತಿರುವುದನ್ನು ಥರ್ಮಲ್ ಡ್ರೋನ್ ಮೂಲಕ ಪರಿಶೀಲಿಸಿ, ಯಾವ ಸ್ಥಳದಲ್ಲಿ ಹುಲಿ ಅಡಗಿದೆ ಎಂದು ಗಮನಿಸಲಾಗುತ್ತಿತ್ತು.

ಕೂಡಲೇ ಸ್ಥಳಕ್ಕೆ ಸಾಕಾನೆಗಳಾದ ಮಹೇಂದ್ರ, ಭೀಮ ಹಾಗೂ ಶ್ರೀಕಂಠ ಆನೆಯನ್ನು ಕರೆಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಯಿತು. ಥರ್ಮಲ್ ಡ್ರೋನ್‌ನಲ್ಲಿ ಹುಲಿ ಇರುವ ಖಚಿತ ಸ್ಥಳವನ್ನು ಮೂರು ಆನೆಗಳಿಂದ ಸುತ್ತುವರೆಯಲಾಯಿತು. ಮಹೇಂದ್ರ ಆನೆ ಮೇಲಿದ್ದ ಪಶುವೈದ್ಯ ಡಾ.ಹೆಚ್.ರಮೇಶ್ ಪೊದೆಯಲ್ಲಿ ಅಡಗಿದ್ದ ಹುಲಿಗೆ ಅರವಳಿಗೆ ಚುಚ್ಚು ಮದ್ದು ನೀಡಿದರು. ಕೆಲ ಸಮಯದ ನಂತರ ಪ್ರಜ್ಞೆ ತಪ್ಪಿದ ಹುಲಿಯನ್ನು ಬೋನ್‌ನೊಳಗೆ ಇಟ್ಟು ಪರಿಶೀಲಿಸಲಾಯಿತು. ಸೆರೆ ಸಿಕ್ಕ ಹುಲಿ 6 ವರ್ಷದ ಗಂಡು ಹುಲಿಯಾಗಿದ್ದು, ಆರೋಗ್ಯದಿಂದ ಕೂಡಿದೆ ಎಂದು ಖಚಿತ ಪಡಿಸಿಕೊಂಡು ಸುರಕ್ಷಿತ ಸ್ಥಳಕ್ಕೆ ರವಾನಿಸಲಾಯಿತು.

ಇಂದು ಬೆಳಗ್ಗೆ ಮತ್ತೊಂದು ಹುಲಿ ರಕ್ಷಣೆ: ಎರಡು ದಿನದ ಹಿಂದಷ್ಟೇ ಹುಲಿ ಸೆರೆ ಹಿಡಿದಿದ್ದ ಸ್ಥಳದಲ್ಲಿ ಮತ್ತೊಂದು ಹುಲಿ ಇರುವಿಕೆ ಬಗ್ಗೆ ಮೊದಲೇ ಅರಿತಿದ್ದ ಅರಣ್ಯ ಸಿಬ್ಬಂದಿ, ಅಗಸನಹುಂಡಿ ಅರಣ್ಯದಂಚಿನ ಪ್ರದೇಶದಲ್ಲಿ ವಾಕ್ ಥ್ರೋ ಕೇಜ್‌ನಲ್ಲಿದ್ದ ಹಸುವಿನ ಕಳೆ ಬರ ತಿನ್ನಲು ಬಂದಿದ್ದ 11 ವರ್ಷದ ಹೆಣ್ಣು ಹುಲಿ ಸೆರೆ ಸಿಕ್ಕಿದೆ. ಬೋನ್‌ನಲ್ಲಿ ಹುಲಿ ಸೆರೆ ಸಿಕ್ಕಿರುವ ಮಾಹಿತಿ ಪಡೆದು ಸ್ಥಳಕ್ಕೆ ಬಂದ ಪಶುವೈದ್ಯ ಡಾ.ಪರಮೇಶ್ ಹಾಗು ತಂಡ ಅರವಳಿಕೆ ಮದ್ದು ನೀಡಿ ಅದನ್ನು ಪರಿಶೀಲಿಸಿದಾಗ ಹುಲಿಯ ನಾಲ್ಕು ಹಲ್ಲುಗಳು ಸವೆದಿದ್ದು, ಆ ಕಾರಣದಿಂದ ಬೇಟೆಯಾಡುವ ಸಾಮರ್ಥ್ಯ ಕಳೆದುಕೊಂಡಿರುವುದರಿಂದ ಕಾಡಂಚಿನ ಗ್ರಾಮಗಳತ್ತ ಬಂದು ಜಾನುವಾರುಗಳ ಮೇಲೆರಗುತ್ತಿತ್ತು ಎಂದು ಖಚಿತವಾಗಿದೆ.

ಶುಕ್ರವಾರ ಸೆರೆ ಹಿಡಿದ ಹುಲಿ ಈ ಹಿಂದೆ ಆನೆಚೌಕೂರು, ಅಂತರಸಂತೆ ವಲಯದಲ್ಲಿ ಕಾಣಿಸಿಕೊಂಡು ಎರಡು ವರ್ಷದಿಂದ ಮೇಟಿಕುಪ್ಪೆ ವಲಯದಲ್ಲಿ ಸರಹದ್ದು ಸ್ಥಾಪಿಸಿಕೊಂಡಿತ್ತು. ಇಂದು ಬೋನಿಗೆ ಬಿದ್ದ ಹೆಣ್ಣು ಹುಲಿ ಮೇಟಿಕುಪ್ಪೆ ವಲಯದಲ್ಲೇ ಇದ್ದ ಹುಲಿಯಾಗಿದ್ದು, ಶಕ್ತಿ ಕಳೆದುಕೊಂಡಿದ್ದರಿಂದ ಜಾನುವಾರುಗಳ ಬೇಟೆಗಾಗಿ ಗ್ರಾಮಗಳತ್ತ ಬರುತ್ತಿತ್ತು ಎಂದು ತಿಳಿದು ಬಂದಿದೆ.

ರಾತ್ರಿಯಿಡೀ ಕಾವಲು: ಹಾಡಹಗಲೇ ಕೊಟ್ಟಿಗೆ ಬಳಿಯೆ ಜಾನುವಾರು ಬೇಟೆಗಾಗಿ ಹುಲಿ ಬಂದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಆತಂಕಗೊಂಡು ಪ್ರತಿಭಟಿಸಿದ್ದರು. ಈ ಹಿನ್ನೆಲೆಯಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿದೇಶಕರಾದ ಪಿ.ಎ.ಸೀಮಾ ಹುಲಿ ಸೆರೆ ಕಾರ್ಯಾಚರಣೆಯ ನೇತೃತ್ವವಹಿಸಿ ರಾತ್ರಿಯಿಡಿ ಹುಲಿಯ ಚಲನವಲ ಗಮನಿಸುವ ತಂಡದೊಂದಿಗೆ ಇದ್ದರು. ಬೆಳಗ್ಗೆ ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿಯುವವರೆಗೂ ಇದ್ದರು. ಮೇಟಿಕುಪ್ಪೆ ವಿಭಾಗದ ಎಸಿಎಫ್ ಮಧು ದೇವಯ್ಯ, ಮೇಟಿಕುಪ್ಪೆ ಆರ್‌ಎಫ್‌ಈ ರಶ್ಮಿ, ಪಶುವೈದ್ಯ ಡಾ.ರಮೇಶ್, ಗುರಿಕಾರ, ಡಿಆರ್‌ಎಫ್‌ಓ ರಂಜನ್ ಹಾಗೂ ಇನ್ನಿತರರ ತಂಡ ರಾತ್ರಿಯಿಡಿ ಕಾರ್ಯಾಚರಣೆ ನಡೆಸಿ, ಬೆಳಗ್ಗೆ ಹುಲಿ ಸೆರೆ ಹಿಡಿದ್ದಿದ್ದಾರೆ.

ಈ ನೆಲದ ಸ್ವಾಭಿಮಾನ ಬಲಿಕೊಟ್ಟರೆ ಕನ್ನಡಿಗರ ಪ್ರತಿಭಟನೆ

ಹೇಳಿಕೆಗೆ ಮಣಿದಂತಿರುವ ಡಿ.ಕೆ.ಶಿವಕುಮಾರ್ ಅವರ ಊಸರವಳ್ಳಿ ಬಣ್ಣದ ಮಾತುಗಳು ಕರ್ನಾಟಕದ ಸ್ವಾಭಿಮಾನದ ಘನತೆಯನ್ನು ಕುಗ್ಗಿಸಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಕೋಗಿಲು ಬಡಾವಣೆ ಪ್ರಕರಣವನ್ನು ಎಐಸಿಸಿ ಗಂಭೀರವಾಗಿ ಪರಿಗಣಿಸಿದೆ, ರಾಜ್ಯದ ಕಾಂಗ್ರೆಸ್ ಸರ್ಕಾರ ಮಾನವೀಯ ದೃಷ್ಟಿಕೋನ ಹರಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಸಂತ್ರಸ್ತರಿಗೆ ಸೂಕ್ತ ಪುನರ್ವಸತಿ ಕಲ್ಪಿಸಿಕೊಡುವ ಭರವಸೆ ನೀಡಿರುವುದನ್ನು ಗಮನಿಸಿದರೆ ಕೇರಳ ವಿಧಾನ ಸಭೆ ಚುನಾವಣಾ ರಾಜಕೀಯಕ್ಕೆ ಕರ್ನಾಟಕದ ಹಿತಾಸಕ್ತಿ ಬಲಿಕೊಡಲು ಕಾಂಗ್ರೆಸ್ ಹೈ ಕಮಾಂಡ್ ಸಿದ್ಧವಾದಂತೆ ಕಾಣುತ್ತಿದೆ.

ಈ ಹಿಂದೆ ಅಂದಿನ ವಯನಾಡ್ ಸಂಸದ ರಾಹುಲ್ ಗಾಂಧಿಯವರನ್ನು ಖುಷಿ ಪಡಿಸಲು ಕೇರಳದಲ್ಲಿ ಆನೆ ದಾಳಿಗೊಳಗಾದವರು ಹಾಗೂ ನೆರೆ ಹಾವಳಿಯಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ ಮನೆ ಕಟ್ಟಿಕೊಡುವ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿದ ಕರ್ನಾಟಕದ ಕಾಂಗ್ರೆಸ್ ಸರ್ಕಾರ, ಪ್ರತೀ ಹಂತದಲ್ಲೂ ಕರ್ನಾಟಕದಲ್ಲಿ ಕೇರಳ ದರ್ಬಾರ್ ನಡೆಸಲು ಅವಕಾಶ ಮಾಡಿಕೊಡುತ್ತಿರುವುದು ಕನ್ನಡಿಗರ ಸ್ವಾಭಿಮಾನವನ್ನು ಅಡವಿಟ್ಟಂತಾಗಿದೆ. ಕನ್ನಡ ನಾಡು ಪುಣ್ಯಕೋಟಿಯ ಪುಣ್ಯಭೂಮಿ. ಮಾನವೀಯತೆಯಲ್ಲಿ ನಾವು ಜಗತ್ತಿಗೆ ಮಾದರಿ. ಆದರೆ ವಲಸಿಗರ ಅಕ್ರಮ ಕಾನೂನು ಉಲ್ಲಂಘನೆಗಳನ್ನು ಸಹಿಸಿಕೊಳ್ಳಬೇಕೆಂದು ನಿರೀಕ್ಷಿಸುವುದು ಮಾನವೀಯತೆ ಎನಿಸಿಕೊಳ್ಳದು.

ಇಂತಹಾ ಚಟುವಟಿಕೆಗಳನ್ನು ಪುನರ್ವಸತಿ ಹೆಸರಿನಲ್ಲಿ ಉತ್ತೇಜಿಸಿದರೆ ಸರ್ಕಾರದ ಖಾಲಿ ಭೂಮಿ, ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಇನ್ನು ಮುಂದೆ ಯಾವುದೇ ರಕ್ಷಣೆ ಸಿಗಲಾರದು. ಕಾಂಗ್ರೆಸ್ ಸರ್ಕಾರ ಕಾಂಗ್ರೆಸ್ ಹೈ ಕಮಾಂಡ್‌ನ ಒತ್ತಡಗಳಿಗೆ ಮಣಿದು ಕರ್ನಾಟಕದ ಹಿತಾಸಕ್ತಿಯನ್ನು ಬಲಿಕೊಟ್ಟರೆ, ಅಲ್ಪಸಂಖ್ಯಾತರ ಹೆಸರಿನಲ್ಲಿ ರಾಜಕೀಯ ಓಲೈಕೆ ಚಟುವಟಿಕೆ ಮುಂದುವರೆಸಿದರೆ ಕರ್ನಾಟಕದ ಸ್ವಾಭಿಮಾನ ಹಾಗೂ ಈ ನೆಲದ ಕಾನೂನನ್ನು ಬಲಿಕೊಟ್ಟಂತೆ ಆಗುತ್ತದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ವ್ಯತಿರಿಕ್ತವಾಗಿ ನಡೆದುಕೊಂಡರೆ ಕನ್ನಡಿಗರ ಪ್ರತಿಭಟನೆ ಎದುರಿಸಲು ಸಿದ್ಧವಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಮೂರು ಡ್ರಗ್ಸ್ ಫ್ಯಾಕ್ಟರಿ ಪತ್ತೆ

> **ಐದು ತಿಂಗಳ ಹಿಂದೆ ಮೈಸೂರಿನಲ್ಲೂ ಡ್ರಗ್ಸ್ ಫ್ಯಾಕ್ಟರಿ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ, ನೂರಾರು ಕೋಟಿ ಮೌಲ್ಯದ ಮಾದಕವಸ್ತು ವಶಪಡಿಸಿಕೊಂಡು, ಆರೋಪಿಗಳನ್ನು ಬಂಧಿಸಿದ್ದರು. ಉನ್ನತಿನಗರದ ಬಳಿ ರಿಂಗ್‌ರಸ್ತೆಗೆ ಹೊಂದಿಕೊಂಡಂತಿರುವ ಕಾರ್ ಗ್ಯಾರೇಜ್‌ವೊಂದರಲ್ಲಿ ಎಂಡಿಎಂಎ ತಯಾರಿಕಾ ಘಟಕ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಮುಂಬೈ ಪೊಲೀಸರು ಸ್ಥಳೀಯ ಪೊಲೀಸರ ನೆರವಿನೊಂದಿಗೆ ಜುಲೈ 26ರಂದು ದಾಳಿ ನಡೆಸಿದ್ದರು. ಆ ವೇಳೆ 390 ಕೋಟಿ ಮೌಲ್ಯದ 192 ಕೆ.ಜಿ. ಮೆಫೆಡ್ರೋನ್ ಡ್ರಗ್ಸ್ ಹಾಗೂ ಕಚ್ಚಾ ವಸ್ತುಗಳನ್ನು ವಶಪಡಿಸಿಕೊಂಡು, ಪ್ರಕರಣದ ಸಂಬಂಧ 8 ಜನರನ್ನು ಬಂಧಿಸಲಾಗಿತ್ತು.**
> **ಏಪ್ರಿಲ್‌ನಲ್ಲಿ ಪಶ್ಚಿಮ ಮುಂಬೈನ ಸಾಕಿನಾಕಾದಲ್ಲಿ ಸಲೀಂ ಇಮ್ತಿಯಾಜ್ ಶೇಖ್ ಅಲಿಯಾಸ್ ಸಲೀಂ ಲ್ಯಾಂಡ್ಗಾ(45) ಎಂಬಾತನನ್ನು ಬಂಧಿಸಿ, ಆತನ ಬಳಿಯಿದ್ದ 52 ಗ್ರಾಂ ಮೆಫೆಡ್ರೋನ್ ವಶಪಡಿಸಿಕೊಳ್ಳಲಾಗಿತ್ತು. ಆತನನ್ನು ತೀವ್ರ ವಿಚಾರಣೆಗೆ ಒಳಪಡಿಸಿ, ಅವನ ಸಹಚರರಾದ ಮೂವರು ವ್ಯಕ್ತಿಗಳನ್ನು ಬಂಧಿಸಿದಾಗ 8 ಕೋಟಿ ಮೌಲ್ಯದ ಮಾದಕ ವಸ್ತು ಸಿಕ್ಕಿತ್ತು. ಬಂಧಿತರ ಮಾಹಿತಿ ಆಧಾರದಲ್ಲಿ ಮೈಸೂರಿಗೆ ಬಂದ ಮುಂಬೈ ಪೊಲೀಸರು, ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿ, ಅಪಾರ ಪ್ರಮಾಣದ ಡ್ರಗ್ಸ್ ಜಪ್ತಿ ಮಾಡಿದ್ದನ್ನು ಸ್ಮರಿಸಬಹುದು.**

ಮಲ್ಖಾನ್ ರಾಮಲಾಲ್ ಬಿಷ್ಣೋಯ್ ಸೇರಿದಂತೆ ನಾಲ್ವರನ್ನು ಬಂಧಿಸಿ, 4.1 ಕೆ.ಜಿ ಘನ ರೂಪದ ಎಂಡಿಎಂಎ ಹಾಗೂ 17 ಕೆ.ಜಿ. ದ್ರವ ರೂಪದ ಎಂಡಿಎಂಎ ಸೇರಿದಂತೆ 55.88 ಕೋಟಿ ರೂ. ಮೌಲ್ಯದ ಮಾದಕ ವಸ್ತು ವಶಪಡಿಸಿಕೊಂಡಿರುವುದಾಗಿ ಮಹಾರಾಷ್ಟ್ರ ಎಎನ್‌ಟಿಎಫ್ ಅಧಿಕಾರಿಗಳು ಹೇಳಿದ್ದಾರೆ. ರಾಜಸ್ತಾನ ಮೂಲದ ಕಿಂಗ್ ಪಿನ್‌ಗಳು ಬೆಂಗಳೂರಿನಲ್ಲಿ ಮಾದಕ ವಸ್ತು ತಯಾರಿಕಾ ಕಾರ್ಖಾನೆಗಳನ್ನು ನಡೆಸುತ್ತಿದ್ದರು. ಯೋಗಿ ರಾಜ್‌ಕುಮಾರ್ ಮತ್ತು ನಯನ್ ಪವರ್ ಎಂಬುವರು ಈ ಜಾಲದ ರೂವಾರಿಗಳು. ಇವರು ಕರ್ನಾಟಕ ಮಾತ್ರವಲ್ಲದೆ ದೇಶದ ಹಲವೆಡೆ ಡ್ರಗ್ಸ್ ಕಾರ್ಖಾನೆ ನಡೆಸುತ್ತಿದ್ದಾರೆ. ಆರೋಪಿಗಳು ಬೆಂಗಳೂರಿನ ಮಾದಕ ವಸ್ತು ತಯಾರಿಕಾ ಘಟಕಗಳಿಂದ ದೇಶದ ಹಲವು ರಾಜ್ಯಗಳಿಗೆ ಮಾದಕ ವಸ್ತು ಪೂರೈಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂರು ಕಡೆ ಮಾದಕ ವಸ್ತು ತಯಾರಿಕಾ ಕಾರ್ಖಾನೆಗಳಿದ್ದವು ಎಂಬುದು ಸುಳ್ಳು: ಮೂರು ಕಡೆ ಮಾದಕ ವಸ್ತು ತಯಾರಿಕಾ ಕಾರ್ಖಾನೆಗಳಿದ್ದವು ಎಂಬುದು ಸುಳ್ಳು. ಜಪ್ತಿಯಾಗಿರುವ ಮಾದಕ ವಸ್ತುವಿನ ರಾಸಾಯನಿಕ ಕೆ.ಜಿ.ಗೆ 1.30 ಲಕ್ಷ ರೂ. ಬೆಲೆ ಬಾಳುತ್ತದೆ. ಒಟ್ಟಾರೆ 4 ಕೆಜಿಗೆ 1.20 ಕೋಟಿ ರೂ. ಮೌಲ್ಯವಾಗುತ್ತದೆ. ಪ್ರಕರಣದ ಬಗ್ಗೆ ಸಮರ್ಥಿಸಿಕೊಳ್ಳಲು ಹೋಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ನಮ್ಮ ಪೊಲೀಸರು, ಇಲ್ಲಿ ಸಿಕ್ಕ ಆರೋಪಿಗಳು ನೀಡುವ ಮಾಹಿತಿ ಆಧರಿಸಿ ಬೇರೆ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸುತ್ತಾರೆ. ಆಗ ಅಲ್ಲಿನ ಪೊಲೀಸರ ವೈಫಲ್ಯ ಎಂದು ಹೇಳಲಾಗುತ್ತದೆಯೇ? ಡ್ರಗ್ಸ್ ದಂಧೆ ವಿರುದ್ಧ ರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತ ಹೋರಾಟ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ಸುದ್ದಿಗಾರರಿಗೆ ತಿಳಿಸಿದರು.

ಮಹಾರಾಷ್ಟ್ರ ಪೊಲೀಸರು ಮುಂಬಯಿನಲ್ಲಿ ಸಿಕ್ಕ ಆರೋಪಿಯ ಮಾಹಿತಿ ಆಧರಿಸಿ ಬೆಂಗಳೂರಿನಲ್ಲಿ ದಾಳಿ ಮಾಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಬೆಂಗಳೂರು ನಗರ ಪೊಲೀಸರು ಏನು ಕ್ರಮ ಕೈಗೊಂಡಿಲ್ಲ ಎಂಬ ಮಾತು ಸರಿಯಲ್ಲ. ದಾಳಿ ವೇಳೆ ನಮ್ಮ ಡಿಸಿಪಿ ಸಹ ಮುಂಬಯಿ ಪೊಲೀಸರೊಂದಿಗೆ ಇದ್ದರು. ಮುಂಬಯಿ ಮತ್ತು ಬೆಂಗಳೂರು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ. ಈ ಆರೋಪಿ ಡ್ರಗ್ಸ್ ತಯಾರಿಸಲು ಬೇಕಾದ ಮೆಫೆಡ್ರಿನ್ ಎಂಬ ರಾಸಾಯನಿಕ ಸಂಗ್ರಹಿಸಿ ಇಟ್ಟುಕೊಂಡಿದ್ದ ಎಂದು ವಿವರಿಸಿದರು.


ಮೈಸೂರು ಪ್ರಕರಣದ ಬಳಿಕ ಎಚ್ಚರಿಕೆಯಿಂದ ಕೆಲಸ ಮಾಡುವಂತೆ ಪೊಲೀಸರಿಗೆ ಸೂಚಿಸಲಾಗಿದೆ. ಬೆಂಗಳೂರಿನಲ್ಲಿ ಮುಂದೆ ಇಂತಹ ಘಟನೆ ಆಗಬಾರದು. ಡಿಸಿಪಿ ಆಗಲಿ, ಎಸಿಪಿ ಅಥವಾ ಸ್ಥಳೀಯ ಅಧಿಕಾರಿಗಳು ಯಾರೇ ಇರಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಅಮಾನತಿನ ಜತೆಗೆ ಬೇರೆ ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಹಸ್ತಕ್ಷೇಪ ಮಾಡಿಲ್ಲ, ಸಲಹೆ ನೀಡಿದ್ದಾರೆ

ಪರಿಹಾರ ನೀಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ರಾಜೀವ್ ಗಾಂಧಿ ಹೌಸಿಂಗ್ ಸ್ಕೀಮ್‌ನಲ್ಲಿ ಪರಿಹಾರ ನೀಡುತ್ತೇವೆ. ವೇಣುಗೋಪಾಲ್ ಅವರು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಸಲಹೆ ನೀಡಿದ್ದಾರೆ. ಸಲಹೆ ನೀಡಲು ಅವರಿಗೆ ಹಕ್ಕಿದೆ. ಬಿಜೆಪಿ ನಾಯಕರು ಸಲಹೆ ನೀಡಿಲ್ಲವೇ? ಅನೇಕ ವಿಷಯದಲ್ಲಿ ಸಲಹೆ ನೀಡಿದ್ದಾರೆ ಅವರಿಗೆ ಹಕ್ಕಿದೆ ಎಂದು ಹೇಳಿದ್ದಾರೆ. ಕೋಗಿಲು ಬಡಾವಣೆಯಲ್ಲಿ ಎಷ್ಟು ಜನರಿದ್ದಾರೆ ಎಂದು ನಾನು ಪಟ್ಟಿ ತರಿಸಿದ್ದೇನೆ. ನಾಳೆ ಮುಖ್ಯಮಂತ್ರಿಗಳು ಇದರ ಬಗ್ಗೆ ಸಭೆ ಕರೆದಿದ್ದಾರೆ. ಆ ಸಭೆಯಲ್ಲಿ ಪರಿಹಾರದ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಕ್ರಾಸ್ ಕಂಟ್ರಿ ಚಾಂಪಿಯನ್ ಶಿಪ್ ಓಟದ ಸ್ಪರ್ಧೆಯಲ್ಲಿ ಸಾವಿರಾರು ಮಂದಿ ಭಾಗಿ





ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿ ನಡೆದ 60ನೇ ಕರ್ನಾಟಕ ರಾಜ್ಯ ಕಂಟ್ರಿ ಚಾಂಪಿಯನ್ ಶಿಪ್–2025 ಓಟದ ಸ್ಪರ್ಧೆಯ ವಿಜೇತರಿಗೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ ಬಹುಮಾನ ವಿತರಿಸಿದರು. ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಡಾ.ಸಿ.ಕೃಷ್ಣ, ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಸೋಮಶೇಖರ್, ಪದಾಧಿಕಾರಿಗಳಾದ ಬಿ.ಎಲ್.ಜಗದೀಶ್, ಬಿ.ಶ್ರೀಕಾಂತ್, ಉಮೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಡಿ.28(ಎಂಟಿವೈ)–ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಭಾನುವಾರ ಬೆಳಗ್ಗೆ ಮೈಸೂರಲ್ಲಿ ಆಯೋಜಿಸಿದ್ದ '60ನೇ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್ ಶಿಪ್–2025' ಓಟದ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಕ್ಕೂ ಹೆಚ್ಚು ಓಟಗಾರರು ವಿವಿಧ ವಿಭಾಗದ ಓಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು.

ವಿವಿಧ ವಯೋಮಾನದವರಿಗಾಗಿ ಪ್ರತ್ಯೇಕ ವಿಭಾಗದಲ್ಲಿ 10 ಕಿ.ಮೀ., 8 ಕಿ.ಮೀ., 6 ಕಿ.ಮೀ. ಹಾಗೂ 4 ಕಿ.ಮೀ. ದೂರದ ಓಟದ ಸ್ಪರ್ಧೆ ಜರುಗಿತು. ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್ ಬಳಿ ಭಾನುವಾರ ಬೆಳಗ್ಗೆ ಹಿರಿಯ ಅಥ್ಲೀಟ್‌ಗಳಾದ ಅರ್ಚನಾ, ತಿಪ್ಪವ್ವ ಸಣ್ಣಕ್ಕಿ, ಪ್ರಭಾಕರ್, ಪರಶಿವಮೂರ್ತಿ, ಆಲ್ಬರ್ಟ್ ಸೇರಿದಂತೆ ಇನ್ನಿತರರು '60ನೇ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್ ಶಿಪ್–2025' ಓಟದ ಸ್ಪರ್ಧೆಗೆ ಚಾಲನೆ ನೀಡಿದರು.

ಮೈಸೂರು, ಬೆಂಗಳೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಅಥ್ಲೀಟ್‌ಗಳು ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು. ಲಲಿತಮಹಲ್ ಹೆಲಿಪ್ಯಾಡ್‌ನಿಂದ ಆರಂಭವಾದ ಪುರುಷ ಮತ್ತು ಮಹಿಳೆಯರ ವಿಭಾಗದ 10 ಕಿ.ಮಿ ಓಟದ ಸ್ಪರ್ಧೆಯಲ್ಲಿ ಸ್ಪರ್ಧಿಗಳು ಲಲಿತಮಹಲ್ ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತ, ಮಹಾರಾಣ ಪ್ರತಾಪ ಸಿಂಹ ವೃತ್ತ, ರೇಸ್‌ಕೋರ್ಸ್ ವೃತ್ತ, ರೇಸ್‌ಕೋರ್ಸ್ ಹಿಂಭಾಗದ ರಸ್ತೆ, ಸಿಎಆರ್ ಮೈದಾನ, ಪ್ಲಾನೆಟ್ ಎಕ್ಸ್ ರಸ್ತೆ, ತಾವರೆಕಟ್ಟೆ, ಲಲಿತಮಹಲ್ ರಸ್ತೆ ಮೂಲಕ ಹೆಲಿಪ್ಯಾಡ್ ಮೈದಾನ ತಲುಪಿ 10 ಕಿ.ಮೀ. ಓಟದ ಸ್ಪರ್ಧೆ ಕೊನೆಗೊಂಡಿತು.

ಇದೇ ಮಾರ್ಗದಲ್ಲಿ ಕೆಲವು ಮಾರ್ಪಾಡಿನೊಂದಿಗೆ 20 ವರ್ಷದೊಳಗಿನ ಯುವಕರಿಗೆ 8 ಕಿ.ಮಿ, 20 ವರ್ಷದೊಳಗಿನ ಯುವತಿಯರು ಹಾಗೂ 18 ವರ್ಷದೊಳಗಿನ ಯುವಕರಿಗೆ 6 ಕಿ.ಮಿ, 18 ವರ್ಷದೊಳಗಿನ ಯುವತಿಯರು ಹಾಗೂ ಯುವಕರಿಗೆ 4 ಕಿ.ಮಿ ಹಾಗೂ 16 ವರ್ಷದೊಳಗಿನ ಬಾಲಕ, ಬಾಲಕಿಯರಿಗೆ 2 ಕಿ.ಮಿ ದೂರದ ಓಟದ ಸ್ಪರ್ಧೆ ನಡೆಸಲಾಯಿತು.

ಪ್ರತಿ ವಿಭಾಗದಲ್ಲಿ ಪ್ರಥಮ ಬಹುಮಾನ 6 ಸಾವಿರ ರೂ., ದ್ವಿತೀಯ ಬಹುಮಾನ 5 ಸಾವಿರ ರೂ., ತೃತೀಯ ಬಹುಮಾನ 3 ಸಾವಿರ ರೂ., ನಾಲ್ಕನೆ ಬಹುಮಾನ 2 ಸಾವಿರ ರೂ., 5ಮತ್ತು 6 ಸ್ಥಾನ ಪಡೆದವರಿಗೆ ತಲಾ ಒಂದು ಸಾವಿರ ರೂ. ನಗದು ಬಹುಮಾನ, ಟ್ರೋಫಿ ಹಾಗೂ ಪ್ರಮಾಣ ಪತ್ರ ನೀಡಲಾಯಿತು. ಈ ಸ್ಪರ್ಧೆಯಲ್ಲಿ ವಿಜೇತರಾಗಿ ಮೊದಲ ಆರು ಸ್ಥಾನ ಪಡೆದ ಅಥ್ಲೀಟ್‌ಗಳನ್ನು 2026ರ ಜ.24ರಂದು ಜಾರ್ಖಂಡ್‌ನ ರಾಂಚಿಯಲ್ಲಿ ನಡೆಯುವ 60ನೇ ರಾಷ್ಟ್ರೀಯ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಅವಕಾಶ ತನ್ನದಾಗಿಸಿಕೊಂಡರು.

ವಿಜೇತರು: ಕ್ರಾಸ್‌ಕಂಟ್ರಿ ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ಕ್ರಮವಾಗಿ ಮೊದಲ ಆರು ಸ್ಥಾನ ಪಡೆದ ಅಥ್ಲೀಟ್‌ಗಳ ವಿವರ.

ಪುರುಷರ 10 ಕಿ.ಮೀ ಸ್ಪರ್ಧೆ: ಓಂಕಾರ್ ರಾಜೇಂದ್ರ ಪನ್ನಾಳ್ಕರ್ (ಬೆಂಗಳೂರು), ಕರಣ್ ಗೆಹಂದುಲೆ (ಬೆಂಗಳೂರು), ಗುರುಪ್ರಸಾದ್ (ತುಮಕೂರು), ಎ.ಆರ್. ರೋಹಿತ್ (ಬೆಂಗಳೂರು), ರೇವಣಸಿದ್ದು ಸರವ್ (ಬಾಗಲಕೋಟೆ), ಪಿ.ಮಹೇಶ್ ಕುಮಾರ್(ಚಿತ್ರದುರ್ಗ).

ಮಹಿಳೆಯರ 10 ಕಿ.ಮಿ ಸ್ಪರ್ಧೆ: ತೇಜಸ್ವಿ ಎನ್.ಐ. (ಬೆಂಗಳೂರು), ಆರಾಧನಾ (ಬೆಂಗಳೂರು), ಪ್ರಿಯಾಂಕಾ ಸಿ.(ಬೆಂಗಳೂರು), ಹೆಚ್.ವಿ.ದೀಕ್ಷಾ (ಶಿವಮೊಗ್ಗ), ರಕ್ಷಿತಾ (ಕೊಡಗು),ಶ್ರೇಯಾ ಎಂ. (ದಕ್ಷಿಣ ಕನ್ನಡ).

20 ವರ್ಷದೊಳಗಿನ ಯುವಕರ 8 ಕಿ.ಮೀ ಸ್ಪರ್ಧೆ: ಕಲ್ಯಾಣ್ ಜೆ.ಆರ್.(ಬೆಂಗಳೂರು), ಅಖಿಲ್ ಕುಮಾರ್ (ರಾಮನಗರ), ಶೈಲೇಶ್ ಕುಶ್ವಾಹ (ಬೆಂಗಳೂರು), ಮಹೇಶ ಮಲ್ಲಪ್ಪ ಜೆ. (ಬಾಗಲಕೋಟೆ), ಭೂಷಣ್ ಗರವ್ (ಬೆಳಗಾವಿ), ದಕ್ಷ್ ಪಟೇಲ್ (ಬೆಳಗಾವಿ).

20 ವರ್ಷದೊಳಗಿನ ಯುವತಿಯರ 6 ಕಿ.ಮೀ ಸ್ಪರ್ಧೆ: ವೈಷ್ಣವಿ ರಾವಲ್ (ಬೆಳಗಾವಿ), ಶಿಲ್ಪಾ ಆರ್. ಹೊಸಮನಿ (ಧಾರವಾಡ), ತಮನ್ನಾ (ಬೆಂಗಳೂರು), ಸೀಮಾ ಮಹಾಂತುಬನ್(ಬೆಳಗಾವಿ), ನಂದಿನಿ ಜಿ.(ಉಡುಪಿ), ನೂರ್ಜಹಾನ್ ಮುಜ್ವಾರ್ (ಬೆಳಗಾವಿ).

18 ವರ್ಷದೊಳಗಿನ ಬಾಲಕರ 6 ಕಿ.ಮಿ ಸ್ಪರ್ಧೆ: ಪ್ರವೀಣ್ ಅರ್ಜುನ್ ಅರಗೆ (ಕೊಡಗು), ಚಂದ್ರಶೇಖರ ಬಸವರಾಜ (ಕೊಪ್ಪಳ), ಲಕ್ಷ್ಮಣ್ ಸಿದ್ದಪ್ಪ ಹಿರಾಳಿ(ಬೆಂಗಳೂರು), ಪವನ್ ವಾಲಿಕರ್(ಹಾವೇರಿ), ಭೀಮಪ್ಪ ಮಾಳಗೊಂಡ (ಬಾಗಲಕೋಟೆ), ಪ್ರಕಾಶ ಬ್ಯಾಡಗಿ (ಬಾಗಲಕೋಟೆ).

18 ವರ್ಷದೊಳಗಿನ ಬಾಲಕಿಯರ 4 ಕಿ.ಮೀ ಸ್ಪರ್ಧೆ: ನಾಗಿನಿ(ದಕ್ಷಿಣ ಕನ್ನಡ), ಚರಿಷ್ಮಾ (ದಕ್ಷಿಣ ಕನ್ನಡ), ಅಕ್ಷರ ಮಜುಕರ್(ಬೆಳಗಾವಿ),ಬಿಂದು ಹಿರೇಮಠ (ಉತ್ತರ ಕನ್ನಡ), ಗಾನವಿ ಯೋಗಾನಂದ (ದಕ್ಷಿಣ ಕನ್ನಡ), ಸಂತೋಷಿ ಸುರೇಶ್ ರೆಡೇಕರ್(ಕೊಡಗು).

16 ವರ್ಷದೊಳಗಿನ ಬಾಲಕರ ಎರಡು ಕಿ.ಮೀ ಸ್ಪರ್ಧೆ: ಪ್ರೇಮ್ ಬುರುಡ್ (ಬೆಳಗಾವಿ), ಆದಿತ್ಯ ಹೆಗ್ಗಿ (ಕಲಬುರ್ಗಿ), ಸೋಫಿಯಾನ್ ಸುಧಾನಿ ಜಮಾದಾರ್ (ಬೆಳಗಾವಿ), ಸಂತೋಷ್ ಜಿ.ಶಹಾಪುರ (ರಾಯಚೂರು), ವಿಶ್ವಜಿತ್ ಅನಿಲ್ ಮಾಲಿ (ಬೆಳಗಾವಿ), ನವೀನ್ ಕುಮಾರ್ (ಕೊಪ್ಪಳ).

16 ವರ್ಷದೊಳಗಿನ ಬಾಲಕಿಯರ 2 ಕಿ.ಮಿ ಓಟದ ಸ್ಪರ್ಧೆ: ಲಕ್ಷ್ಮಿ ಬಿ. ಒಬ್ಬಮ್ಮನವರ್ (ಧಾರವಾಡ), ಮೇಘಾ ಅಶೋಕ್ ಡಿ. (ದಕ್ಷಿಣ ಕನ್ನಡ), ಶ್ರೇಯಾ ಎಸ್. ಘಂಟಿ (ಧಾರವಾಡ), ಅಂಕಿತಾ ಯಾದವ್ (ಬಾಗಲಕೋಟೆ), ರಾಜಶ್ರೀ ಮಾರೆಡ್ (ಧಾರವಾಡ), ಸಾಹಿತಿ ಎಂ. (ಕೋಲಾರ) ಬಹುಮಾನ ಪಡೆದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದ ಆವರಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಸೋಮಶೇಖರ್, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಡಾ.ಸಿ.ಕೃಷ್ಣ, ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಪದಾಧಿಕಾರಿಗಳಾದ ಬಿ.ಎಲ್.ಜಗದೀಶ್, ಬಿ.ಶ್ರೀಕಾಂತ್, ಉಮೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತ ಪ್ರಾಧ್ಯಾಪಕಿ ಡಾ.ಭಾನುಮತಿ ಅವರಿಗೆ ಶ್ರೀ ಬಿ.ಎಸ್.ಸಣ್ಣಯ್ಯ ಸಾಹಿತ್ಯ ಪ್ರಶಸ್ತಿ ಪ್ರದಾನ



ನಿವೃತ್ತ ಪ್ರಾಧ್ಯಾಪಕಿ ಡಾ.ವೈ.ಸಿ.ಭಾನುಮತಿ ಅವರಿಗೆ ಶ್ರೀ ಬಿ.ಎಸ್.ಸಣ್ಣಯ್ಯ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ.28(ಬಿಎಲ್‌ಯು)– ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ರಾಷ್ಟ್ರಕ್ಕೆ ಸಲ್ಲಿಸುವ ಗೌರವ ಎಂದು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕಿ ಡಾ.ವೈ.ಸಿ. ಭಾನುಮತಿ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್. ಸಣ್ಣಯ್ಯ ಟ್ರಸ್ಟ್ ಕೊಡ ಮಾಡಿದ ಶ್ರೀ ಬಿ.ಎಸ್.ಸಣ್ಣಯ್ಯ ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ದಕ್ಷ, ಪ್ರಾಮಾಣಿಕತೆಯಿಂದ ಕೆಲಸ ಮಾಡಲು ನನ್ನ ತಂದೆಯೇ ನನಗೆ ಸ್ಫೂರ್ತಿ. ಯಾವುದೇ ಒಂದು ಸಾಧನೆ ಮಾಡಲು ಒಳ್ಳೆಯ ಸಹೋದ್ಯೋಗಿಗಳು ಹಾಗೂ ಒಳ್ಳೆಯ ವಾತಾವರಣ ಮುಖ್ಯ. ನನ್ನ ವೃತ್ತಿಯಲ್ಲಿ ನಾನು ಯಶಸ್ವಿಗೊಳಿಸಲು ಇದೆರಡು ಪ್ರಮುಖವಾಗಿ ದೊರೆಯಿತು ಎಂದರು. ಸಂಶೋಧನಾ ಕ್ಷೇತ್ರದ ಕೆಲವರು ನನಗೆ ಸ್ಫೂರ್ತಿಯಾಗಿದ್ದರು, ನಾನೆಂದೂ ಪ್ರಶಸ್ತಿ ಬೆನ್ನಟ್ಟಿ ಹೋಗಲಿಲ್ಲ. ನನ್ನ ಪ್ರಾಮಾಣಿಕ ಕಾರ್ಯ ಗುರುತಿಸಿ ಹಲವರು ನನಗೆ ಪ್ರಶಸ್ತಿ ನೀಡುತ್ತಿದ್ದಾರೆ ಎಂದು ಡಾ.ಭಾನುಮತಿ ತಿಳಿಸಿದರು. ಇದೇ ವೇಳೆ ಮಾತನಾಡಿದ ನಿವೃತ್ತ ಕುಲಪತಿ ಡಾ.ಪದ್ಮಾಶೇಖರ್ ಅವರು, ನಾವು ನಮ್ಮ ಕೆಲಸವನ್ನು ಪ್ರಾಮಾಣಿಕತೆ ಯಿಂದ ಮಾಡಿದರೆ ಒಂದಲ್ಲಾ ಒಂದು ದಿನ ನಮಗೆ ಫಲ ಸಿಗುತ್ತದೆ. ಆದರೆ ಇದಕ್ಕಾಗಿ ನಮ್ಮಲ್ಲಿ ಬದ್ಧತೆ ಹಾಗೂ ತಾಳ್ಮೆ ಇರಬೇಕು ಎಂದು ಅಭಿಪ್ರಾಯಪಟ್ಟರು.

ನಿವೃತ್ತ ಪಾಧ್ಯಾಪಕರಾದ ಡಾ.ಸಿ.ನಾಗಣ್ಣ, ಡಾ.ರೌಗೌ, ಟ್ರಸ್ಟ್ ಅಧ್ಯಕ್ಷೆ ಬಿ.ಎಸ್.ಸುಶೀಲ ಲಕ್ಷ್ಮೀಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜ.1ರಿಂದ ಮೈಸೂರಿನ ಬೀದಿನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ, ಶಾಶ್ವತ ಆಶ್ರಯ ನೀಡಲು ಶೆಡ್ ನಿರ್ಮಾಣ

ಮೈಸೂರು,ಡಿ.28(ಬಿಎಲ್‌ಯು)–ಸುಪ್ರೀಂಕೋರ್ಟ್ ನಿರ್ದೇಶನದಂತೆ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನೀಡಿ, ಅವುಗಳಿಗೆ ಆಶ್ರಯ ನೀಡುವ ಕಾರ್ಯ ಜನವರಿ 1, 2026ರಿಂದ ಆರಂಭವಾಗಲಿದೆ.

ದೇಶದೆಲ್ಲೆಡೆ ಬೀದಿನಾಯಿಗಳ ಉಪಟಳ ಹೆಚ್ಚಾಗಿದ್ದು, ಮಕ್ಕಳು ಸೇರಿದಂತೆ ಹಲವರ ಮೇಲೆ ದಾಳಿ ಮಾಡಿದ ಬೀದಿನಾಯಿಗಳು ಕೆಲವರನ್ನು ಬಲಿ ತೆಗೆದುಕೊಂಡಿವೆ. ಈ ಸಂಬಂಧ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿತ್ತು. ಬೀದಿ ನಾಯಿಗಳ ಸಂತಾನೋತ್ಪತ್ತಿಗೆ ಕಡಿವಾಣ ಹಾಕಲು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುವಂತೆ ದೇಶದ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕೋರ್ಟ್ ಕಟ್ಟುನಿಟ್ಟಿನ ಆದೇಶ ನೀಡಿತ್ತು.

ಅದರಂತೆ ಮೈಸೂರು ನಗರಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಗಳು ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ನೀಡಲು ಎಲ್ಲಾ ಸಿದ್ಧತೆ ಮಾಡಿಕೊಂಡಿವೆ. ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ 1.20 ಲಕ್ಷ ಬೀದಿ ನಾಯಿಗಳಿದ್ದು, ಅವುಗಳಿಗೆ ಸಂತಾನ ಹರಣ ಚಿಕಿತ್ಸೆ ಮಾಡುವ ಕಾರ್ಯ 2026ರ ಜನವರಿ 1ರಿಂದ ಆರಂಭವಾಗಲಿದೆ. ಬೀದಿ ನಾಯಿಗಳನ್ನು ಹಿಡಿದು ತಂದು ಸಂತಾನಹರಣ ಶಸ್ತ್ರ ಚಿಕಿತ್ಸೆ



ಮಾಡುವುದರ ಜೊತೆಗೆ ರೇಬಿಸ್ ಲಸಿಕೆ ಹಾಕಲಾಗುತ್ತದೆ.

ಈ ಸಂಬಂಧ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಬೀದಿನಾಯಿಗಳನ್ನು ಹಿಡಿದು ತಂದು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿ, ಅದೇ ಜಾಗಕ್ಕೆ ಬಿಡಲು ಟೆಂಡರ್ ಕರೆದಿದೆ. ಈ ಎಲ್ಲಾ ಪ್ರಕ್ರಿಯೆಯನ್ನು ಡಿ.31ರೊಳಗೆ ಪೂರ್ಣಗೊಳಿಸಿ, ಜನವರಿ 1ರಿಂದ ಕಾರ್ಯಾಚರಣೆ ಆರಂಭಿಸಲಿದೆ. ಆಸ್ಪತ್ರೆ ಸೇರಿದಂತೆ ಇತರೆ ಸೂಕ್ಷ್ಮ ಸ್ಥಳಗಳನ್ನು ವಾಸಸ್ಥಾನ ಮಾಡಿಕೊಂಡಿರುವ ನಾಯಿಗಳಿಗೆ ಶಾಶ್ವತವಾಗಿ ಆಶ್ರಯ ನೀಡಬೇಕೆಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಈ ಹಿನ್ನೆಲೆ ಸ್ಥಳಿಯ ಸಂಸ್ಥೆಗಳು ಶೆಡ್ ನಿರ್ಮಾಣ ಮಾಡಿ, ಆರೈಕೆ ನೀಡಲು ಟೆಂಡರ್ ಕೂಡ ಕರೆಯಲಾಗಿದೆ.

ಬೀದಿನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ನೀಡುವ ಕಾರ್ಯವನ್ನು ಮೈಸೂರು ಪಾಲಿಕೆ ಈಗಾಗಲೇ ಆರಂಭಿಸಿದೆ. ಕೆಲವು ನಾಯಿಗಳಿಗೆ ಆಶ್ರಯ ನೀಡಲು ಮೈಸೂರಿನ ರಾಯನಕೆರೆಯಲ್ಲಿ ಶೆಡ್ ನಿರ್ಮಾಣ ಮಾಡಲಾಗುತ್ತಿದೆ. ಸಂತಾನಹರಣ ಶಸ್ತ್ರ ಚಿಕಿತ್ಸೆ, ರೇಬಿಸ್ ಲಸಿಕೆ ನೀಡಲು ಪಶುಸಂಗೋಪನಾ ಇಲಾಖೆ ಈಗಾಗಲೇ ವೈದ್ಯ ಸಿಬ್ಬಂದಿಗೆ ತರಬೇತಿ ನೀಡಿ, ಕಾರ್ಯಾಚರಣೆಗೆ ಸ್ಥಳ ಗುರುತಿಸಿದೆ.

ವೈದ್ಯ, ಸಿಬ್ಬಂದಿಗೆ ತರಬೇತಿ ನೀಡಲಾಗಿದೆ

"ಬೀದಿ ನಾಯಿಗಳ ಸಂತಾನೋತ್ಪತ್ತಿಗೆ ಕಡಿವಾಣ ಹಾಕಲು ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನವನ್ನು ಪಶು ಸಂಗೋಪನಾ ಇಲಾಖೆ ಪಾಲಿಸಲಿದೆ. ಈ ಸಂಬಂಧ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುವ ಕಾರ್ಯ ಜನವರಿ 1ರಿಂದ ಆರಂಭಿಸಲಿದೆ. ಬೀದಿ ನಾಯಿಗಳನ್ನು ಹಿಡಿದು ಕರೆತಂದು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿ, ಮತ್ತೆ ಅದೇ ಸ್ಥಳಕ್ಕೆ ಬಿಡುವ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗಿದೆ. ಈ ಕಾರ್ಯಕ್ಕಾಗಿ ಈಗಾಗಲೇ ಸ್ಥಳೀಯ ಸಂಸ್ಥೆಗಳು ಟೆಂಡರ್ ಕರೆದಿದೆ.

–ಡಾ.ನಾಗರಾಜ್, ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಮೈಸೂರು.

ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಎನ್‌ಸಿಸಿ ದಿನಾಚರಣೆ...



ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಎನ್‌ಸಿಸಿ ದಿನ ಆಚರಿಸಲಾಯಿತು. ಕಾಲೇಜು ಪ್ರಾಂಶುಪಾಲ ಡಾ.ಭಕ್ತವತ್ಸಲ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಲೆಫ್ಟಿನೆಂಟ್ ಕರ್ನಲ್ ಅನಂತ ಕೇಶವ, ಸುಬೇದಾರ್ ಮಲ್ಲಪ್ಪ ಜಗ್ಗಲ್, ಹವಾಲ್ದಾರ್‌ರಾದ ಹರೀಶ್, ನಿರಂಜನ್, ಮಹೇಶ್, ಎನ್‌ಸಿಸಿ ಅಧಿಕಾರಿ ಕ್ಯಾಪ್ಟನ್ ಹರ್ಷಕುಮಾರ್ ಹಾಗೂ ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಚಾಮುಂಡಿಬೆಟ್ಟದ ಪ್ರಾಕೃತಿಕ ಸೌಂದರ್ಯ ಸಂರಕ್ಷಿಸಿ; ಅದರ ಪಾರಂಪರಿಕ ಮಹತ್ವ ಉಳಿಸಿ

ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್ ಆಗ್ರಹ

ಮೈಸೂರು,ಡಿ.28(ಪಿಎಂ)–ಚಾಮುಂಡಿಬೆಟ್ಟ ಕೇವಲ ಪ್ರವಾಸಿ ತಾಣವಲ್ಲ, ಅದೊಂದು ಪ್ರಕೃತಿಯ ಮಡಿಲು. ಇಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಕಾಂಕ್ರಿಟ್ ಬೆಟ್ಟ ಮಾಡಲು ಹೊರಟಿರುವುದು ಸರಿಯಲ್ಲ. ಇನ್ನೂ ಹೆಚ್ಚು ಹಸರೀಕರಣಗೊಳಿಸಿ ಬೆಟ್ಟದ ಪ್ರಾಕೃತಿಕ ಸೌಂದರ್ಯ ಸಂರಕ್ಷಿಸುವ ಜೊತೆಗೆ ಅದರ ಸಾಂಪ್ರದಾಯಿಕ ಹಾಗೂ ಪಾರಂಪರಿಕ ಮಹತ್ವ ಉಳಿಸಿಕೊಳ್ಳಲು ಆದ್ಯತೆ ನೀಡಬೇಕೆಂದು ಟೀಂ ಮೈಸೂರು ಸಂಚಾಲಕ ಹಾಗೂ ವಕೀಲ ಗೋಕುಲ್ ಗೋವರ್ಧನ್ ಆಗ್ರಹಿಸಿದ್ದಾರೆ.

ಇತ್ತೀಚಿನ ಬೆಳವಣಿಗೆ ಗಮನಿಸಿದರೆ, ಮೈಸೂರಿನ ಪಾರಂಪರಿಕತೆಗೆ ಧಕ್ಕೆ ಉಂಟಾಗುತ್ತಿರುವುದು ಎದ್ದು ಕಾಣುತ್ತಿದೆ. 'ಪ್ರಸಾದ್' ಯೋಜನೆ ಅಡಿಯಲ್ಲಿ 45 ಕೋಟಿ ರೂ. ಕಾಮಗಾರಿಗಳನ್ನು ಚಾಮುಂಡಿಬೆಟ್ಟದಲ್ಲಿ ಕೈಗೊಳ್ಳಲು ಹೊರಟಿದ್ದು, ಆ ಮೂಲಕ ದಕ್ಷಿಣ ಭಾರತದ ಪ್ರಖ್ಯಾತ ಪಾರಂಪರಿಕ ಸ್ಥಳವಾದ ಚಾಮುಂಡಿಬೆಟ್ಟವನ್ನು ಅಭಿವೃದ್ಧಿ ಹೆಸರಿನಲ್ಲಿ ಕಾಂಕ್ರಿಟ್ ಬೆಟ್ಟ ಮಾಡುವುದು ಸರಿಯಲ್ಲ. ಸರ್ಕಾರಗಳು ಹಾಗೂ ಅಧಿಕಾರಿಗಳು ಯಾವುದೇ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಬೇಕೆಂದು ತೀರ್ಮಾನಿಸುವ ಮುನ್ನ ಸ್ಥಳದ ಪಾರಂಪರಿಕತೆ, ಪರಿಸರದ ಸಂರಕ್ಷಣೆ, ಸ್ಥಳೀಯರ ಭಾವನೆ, ಸಾಂಸ್ಕೃತಿಕ ವ್ಯವಸ್ಥೆ ಎಲ್ಲವನ್ನು ಗಮನಿಸಬೇಕು. ಕೇವಲ ಅಭಿವೃದ್ಧಿ ಎಂದರೆ ಕಾಂಕ್ರೀಟೀಕರಣ ಮಾಡುವುದಲ್ಲ. ಚಾಮುಂಡಿ ಬೆಟ್ಟ ಪ್ರಾಣಿ–ಪಕ್ಷಿಗಳ ವಾಸಸ್ಥಾನವೂ ಆಗಿದೆ. ಮೈಸೂರು ಸುತ್ತಮುತ್ತ ಬೀಳುವ ಮಳೆ ಹಾಗೂ ಇತರೆ ಪ್ರಾಕೃತಿಕ ವಾತಾವರಣಕ್ಕೆ ಬೆಟ್ಟದ ಕೊಡುಗೆ ಇದೆ. ಇಂತಹ ಬೆಟ್ಟದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಕೇವಲ ಕಟ್ಟಡ ನಿರ್ಮಾಣ ಮಾಡುವುದು ಅಭಿವೃದ್ಧಿಯೇ?



ಗೋಕುಲ್ ಗೋವರ್ಧನ್

ಹಿಂದೆ ಕಾರಂಜಿ ಕೆರೆಗೆ ಕಾಲುವೆಗಳ ಮೂಲಕ ಬೆಟ್ಟದಿಂದ ಮಳೆಗಾಲದಲ್ಲಿ ನೀರು ಹರಿದು ಬರುತ್ತಿತ್ತು. ಹಾಗೆ ಇತರ ಚಿಕ್ಕ ಚಿಕ್ಕ ಕೆರೆಗಳಿಗೂ ನೀರು ಹೋಗಿ ಆ ಕೆರೆಗಳಲ್ಲಿ ನೀರು ಸಂಗ್ರಹವಾಗುತ್ತಿತ್ತು. ಆದರೆ ಇಂದು ಅಂತಹ ಕಾಲುವೆಗಳನ್ನು ಸಂರಕ್ಷಿಸುವಲ್ಲಿ ಅಧಿಕಾರಿ ವರ್ಗ ವಿಫಲವಾಗಿದೆ. ಅದೇ ರೀತಿ ಚಾಮುಂಡಿ ಬೆಟ್ಟದ ತುಂಬಾ ಮನೆಗಳು ನಿರ್ಮಾಣಗೊಳ್ಳುತ್ತಿವೆ. ಇದರ ಬಗ್ಗೆ ಯಾವ ಅಧಿಕಾರಿಗಳಿಗೂ ಗಮನವಿಲ್ಲ. ಇನ್ನು ಎಲ್ಲೆಂದರಲ್ಲಿ ವ್ಯಾಪಾರಿಗಳು ಜಾಗವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಮೈಸೂರು ಸಂಸ್ಥಾನದ ರಾಜವಂಶಸ್ಥರೂ ಆದ ಸಂಸದ ಯದುವೀರ್ ಒಡೆಯರ್ ಮೈಸೂರು ನಗರದಲ್ಲಿ ಪಾರಂಪರಿಕತೆ ಹಾಗೂ ಸಾಂಸ್ಕೃತಿಕತೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಮಾಡಿ ಎಂದು ಪದೇ ಪದೆ ತಿಳಿಸಿದ್ದರಲ್ಲದೆ, ಮಹಾರಾಜರು ಚಾಮುಂಡಿ ಬೆಟ್ಟವನ್ನು ಪರಿಸರಕ್ಕೆ ಪೂರಕವಾಗಿ ಅಭಿವೃದ್ಧಿಪಡಿಸಿದ್ದರು. ಆದರೆ ಇಂದಿನ ನಮ್ಮ ವ್ಯವಸ್ಥೆ ಅಭಿವೃದ್ಧಿಯ ಹೆಸರಿನಲ್ಲಿ ಚಾಮುಂಡಿ ಬೆಟ್ಟವನ್ನು ಕಾಂಕ್ರೀಟ್ ಬೆಟ್ಟವನ್ನಾಗಿಸಲು ಹೊರಟಿದೆ ಎಂದು ಪ್ರಕಟಣೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ದೇಶ - ವಿದೇಶ

ಝೆಲೆನ್ಸ್ಕಿ–ಟ್ರಂಪ್ ಶಾಂತಿ ಮಾತುಕತೆಗೂ ಮುನ್ನ ಉಕ್ರೇನ್ ಮೇಲೆ ರಷ್ಯಾ ದಾಳಿ


ಕೈವ್: ಉಕ್ರೇನ್‌ನ ರಾಜಧಾನಿಯಲ್ಲಿ ರಷ್ಯಾ ಶನಿವಾರ ತೀವ್ರ ದಾಳಿ ನಡೆಸಿದ್ದು, ಓರ್ವ ಸಾವನ್ನಪ್ಪಿದ್ದು, 27 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.



ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ಶಾಂತಿ ಮಾತುಕತೆ ನಡೆಯುವ ಒಂದು ದಿನದ ಮೊದಲು ಇದು ಸಂಭವಿಸಿದೆ. ಮುಂಜಾನೆ ದಾಳಿ ಪ್ರಾರಂಭವಾಗಿ ಗಂಟೆಗಳ ಕಾಲ ಮುಂದುವರೆದಿತ್ತು. ಕೈವ್‌ನಾದ್ಯಂತ ಪ್ರಬಲ ಸ್ಫೋಟಗಳು ಸಂಭವಿಸಿವೆ. ರಷ್ಯಾ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ದಾಳಿ ನಡೆಸಿವೆ. ವೊಲೊಡಿಮಿರ್ ಝೆಲೆನ್ಸ್ಕಿ ಅವರು ಇಂದು ಫ್ಲೋರಿಡಾದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಯುದ್ಧವು ಈಗ ನಾಲ್ಕನೇ ವರ್ಷವನ್ನು ಸಮೀಪಿಸುತ್ತಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಝೆಲೆನ್ಸ್ಕಿ, ಈ ದಾಳಿಯು ನಮ್ಮ ಶಾಂತಿ ಪ್ರಯತ್ನಗಳಿಗೆ ರಷ್ಯಾದ ಉತ್ತರವಾಗಿದೆ, ಪುಟಿನ್ ಅವರಿಗೆ ಶಾಂತಿ ಬೇಕಾಗಿಲ್ಲ ಎಂದು ಇದು ನಿಜವಾಗಿಯೂ ತೋರಿಸುತ್ತದೆ ಎಂದು ಹೇಳಿದ್ದಾರೆ.

ಹಿಮಾಚಲ ಪ್ರವಾಸಿ ತಾಣದಲ್ಲಿ ಪ್ಯಾರಾಗ್ಲೈಡಿಂಗ್ ಪತನ, ಓರ್ವ ಸಾವು

ಹಿಮಾಚಲ ಪ್ರದೇಶ: ಹಿಮಾಚಲ ಪ್ರದೇಶದ ಜನಪ್ರಿಯ ಬಿರ್ ಬಿಲ್ಲಿಂಗ್ ಪ್ಯಾರಾಗ್ಲೈಡಿಂಗ್ ಕೇಂದ್ರದಲ್ಲಿ ಪ್ರವಾಸಿಗನೊಬ್ಬನ ಕರೆದುಕೊಂಡು ಪ್ಯಾರಾಗ್ಲೈಡಿಂಗ್ ಟೇಕ್ ಆಫ್ ಆದ ಬೆನ್ನಲ್ಲೇ ಪತನಗೊಂಡಿದೆ ಇದರ



ಪರಿಣಾಮ ಪ್ಯಾರಾಗ್ಲೈಡರ್ ಮೃತಪಟ್ಟರೆ, ಪ್ರವಾಸಿ ಗಾಯಗೊಂಡ ಘಟನೆ ನಡೆದಿದೆ. ಹಿಮಾಚಲ ಪ್ರದೇಶ ಮಂಡಿ ಜಿಲ್ಲೆಯ ಬಾರೋಟ್ ಗ್ರಾಮದ ಮೋಹನ್ ಸಿಂಗ್ ಈ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಮೋಹನ್ ಸಿಂಗ್ ಬಿರ್ ಬಿಲ್ಲಿಂಗ್ ಪ್ಯಾರಾ ಸೈಟ್‌ನಲ್ಲಿ ಪ್ಯಾರಾಗ್ಲೈಡರ್ ಆಗಿ ಕೆಲಸ ಮಾಡುತ್ತಿದ್ದ. ಪ್ಯಾರಾಗ್ಲೈಡಿಂಗ್ ಪತನಗೊಳ್ಳುತ್ತಿದ್ದಂತೆ ಸ್ಥಳೀಯರು ನೆರವಿಗೆ ಧಾವಿಸಿದ್ದಾರೆ. ಗಾಯಗೊಂಡಿದ್ದ ಇಬ್ಬರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಮೋಹನ್ ಸಿಂಗ್ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಇತ್ತ ಗಾಯಗೊಂಡಿರುವ ಪ್ರವಾಸಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪತನ ಕುರಿತು ಪ್ರಕರಣ ದಾಖಲಾಗಿದೆ. ಈ ಪತನಕ್ಕೆ ಪ್ಯಾರಾಗ್ಲೈಡಿಂಗ್‌ನಲ್ಲಿನ ತಾಂತ್ರಿಕ ಸಮಸ್ಯೆ ಕಾರಣವಾಗಿದೆಯಾ ಅನ್ನೋ ಕುರಿತು ತನಿಖೆ ನಡೆಸಲಾಗುತ್ತಿದೆ.

ವಾಷಿಂಗ್ಟನ್: ಗುಟೆಮಾಲಾದಲ್ಲಿ ಕಂದಕಕ್ಕೆ ಬಿದ್ದ ಬಸ್; 15 ಮಂದಿ ಸಾವು

ವಾಷಿಂಗ್‌ಟನ್: ಗುಟೆಮಾಲಾದಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದೆ. ಟೊಟೊನಿಕಾಪನ್ ಬಳಿಯ ಅಲಾಸ್ಕಾ ಪೀಕ್ ಎಂಬಲ್ಲಿ ಪ್ರಯಾಣಿಕರ



ಬಸ್ ಕಂದಕಕ್ಕೆ ಬಿದ್ದು ಕನಿಷ್ಠ 15 ಮಂದಿ ಸಾವನ್ನಪ್ಪಿದ್ದಾರೆ. 19 ಮಂದಿ ಗಾಯಗೊಂಡಿದ್ದಾರೆ. ಸ್ಥಳೀಯ ಅಗ್ನಿಶಾಮಕ ದಳದ ವಕ್ತಾರ ಲಿಯಾಂಡ್ರೊ ಅವರ ಪ್ರಕಾರ ಮೃತರಲ್ಲಿ 11 ಪುರುಷರು, ಮೂವರು ಮಹಿಳೆಯರು ಮತ್ತು ಒಬ್ಬ ಬಾಲಕ ಸೇರಿದ್ದಾರೆ. ಗಾಯಗೊಂಡ 19 ಮಂದಿಯನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಈ ಅಪಘಾತವು ಪಶ್ಚಿಮ ಗುಟೆಮಾಲಾದ ಟೊಟೊನಿಕಾಪನ್‌ನ ಸೊಲೊಲಾ ವಿಭಾಗದಲ್ಲಿ, ಕಿಲೋಮೀಟರ್ 172 ಮತ್ತು 174ರ ನಡುವೆ ಸಂಭವಿಸಿದೆ. ಈ ಪ್ರದೇಶವು ಅದರ ಕಡಿದಾದ ಭೂಪ್ರದೇಶದಿಂದಾಗಿ 'ಅಲಾಸ್ಕಾ ಪೀಕ್' ಎಂದು ಕರೆಯಲ್ಪಡುತ್ತದೆ. ಇಲ್ಲಿ ದಟ್ಟವಾದ ಮಂಜು ಚಾಲಕರಿಗೆ ದೃಷ್ಟಿ ಮಿತಿಯನ್ನು ಕಡಿಮೆ ಮಾಡುತ್ತದೆ. ಗುಟೆಮಾಲಾ ಸಿಟಿ ಮತ್ತು ಮೆಕ್ಸಿಕೊ ಗಡಿಯಲ್ಲಿರುವ ಸ್ಯಾನ್ ಮಾರ್ಕೋಸ್ ವಿಭಾಗದ ನಡುವೆ ಸಂಚರಿಸುತ್ತಿದ್ದ ಬಸ್, ಸುಮಾರು 75 ಮೀಟರ್ (250 ಅಡಿ) ಆಳದ ಕಂದಕಕ್ಕೆ ಬಿದ್ದಿದೆ. ಅಪಘಾತಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ.

ಎಸ್‌ಐಆರ್ ಕೆಲಸದ ಒತ್ತಡ: ಪಶ್ಚಿಮ ಬಂಗಾಳದಲ್ಲಿ ಬಿಎಲ್‌ಒ ಶವವಾಗಿ ಪತ್ತೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯಲ್ಲಿ ಭಾನುವಾರ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಶವವಾಗಿ ಪತ್ತೆಯಾಗಿದ್ದು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ಸಂಬಂಧಿಸಿದ ಒತ್ತಡವು ಇದರಲ್ಲಿ ಪಾತ್ರ ವಹಿಸಿರಬಹುದು ಎಂಬ ಆರೋಪ



ಕೇಳಿಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಣಿಬಂಧ್ ಬ್ಲಾಕ್‌ನಲ್ಲಿ ಈ ಘಟನೆ ನಡೆದಿದ್ದು, ಭಾನುವಾರ ಬೆಳಿಗ್ಗೆ ಶಾಲಾ ಆವರಣದಲ್ಲಿ ಹರಧನ್ ಮಂಡಲ್ ಎಂಬುವವರ ಶವ ಪತ್ತೆಯಾಗಿದೆ. ಮಂಡಲ್ ವೃತ್ತಿಯಲ್ಲಿ ಶಾಲಾ ಶಿಕ್ಷಕರಾಗಿದ್ದರು ಮತ್ತು ರಾಣಿಬಂಧ್ ಬ್ಲಾಕ್‌ನ ರಾಜಕಟಾ ಪ್ರದೇಶದ ಬೂತ್ ಸಂಖ್ಯೆ 206ರ ಬಿಎಲ್‌ಒ ಆಗಿ ಸೇವೆ ಸಲ್ಲಿಸುತ್ತಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಧಿಕಾರಿಯ ಪ್ರಕಾರ ಮೃತರ ಸಹಿಯನ್ನು ಹೊಂದಿರುವ ಒಂದು ಟಿಪ್ಪಣಿ ಸ್ಥಳದಲ್ಲಿ ಪತ್ತೆಯಾಗಿದ್ದು, ಅದರಲ್ಲಿ ಅವರು ಕೆಲಸದ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಉಲ್ಲೇಖಿಸಿದ್ದಾರೆ ಎಂದು ವರದಿಯಾಗಿದೆ. ನಾವು ಟಿಪ್ಪಣಿಯನ್ನು ವಶಪಡಿಸಿಕೊಂಡಿದ್ದೇವೆ ಮತ್ತು ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದೇವೆ ಎಂದು ಅವರು ಹೇಳಿದರು.

ಆಪರೇಷನ್ ಸಿಂಧೂರ್ ವೇಳೆ ನೂರ್‌ಖಾನ್ ವಾಯುನೆಲೆಗೆ ಹಾನಿ; ಒಪ್ಪಿಕೊಂಡ ಪಾಕಿಸ್ತಾನ

ಇಸ್ಲಾಮಾಬಾದ್: ಆಪರೇಷನ್ ಸಿಂಧೂರ್ ಸಮಯದಲ್ಲಿ ಭಾರತ ನಡೆಸಿದ ಕಾರ್ಯತಂತ್ರದ ಮತ್ತು ನಿಖರವಾದ ದಾಳಿಗಳ ಪರಿಣಾಮವನ್ನು ಪಾಕಿಸ್ತಾನ ಸರ್ಕಾರ ಸಾರ್ವಜನಿಕವಾಗಿ



ಒಪ್ಪಿಕೊಂಡಿದೆ. ನೂರ್ ಖಾನ್ ವಾಯುನೆಲೆಗೆ ಹಾನಿಯನ್ನು ಪಾಕಿಸ್ತಾನ ಒಪ್ಪಿಕೊಂಡಿದೆ. ರಾವಲ್ಪಿಂಡಿಯ ಚಕ್ಲಾಲಾ ಪ್ರದೇಶದ ನೂರ್ ಖಾನ್ ವಾಯುನೆಲೆಯ ಮೇಲೆ ಭಾರತೀಯ ಡ್ರೋನ್‌ಗಳು ದಾಳಿ ನಡೆಸಿವೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ದೃಢಪಡಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ದಾಳಿಯು ಪಾಕಿಸ್ತಾನದ ಮಿಲಿಟರಿ ನೆಲೆಗೆ ಮತ್ತು ಅಲ್ಲಿ ನೆಲೆಸಿದ್ದ ಗಾಯಗೊಂಡ ಸಿಬ್ಬಂದಿಗೆ ಹಾನಿಯನ್ನುಂಟುಮಾಡಿದೆ ಎಂದು ಹೇಳಿದ್ದಾರೆ. ಇಶಾಕ್ ದಾರ್ ಅವರ ಪ್ರಕಾರ ಭಾರತವು ಅಲ್ಪಾವಧಿಯಲ್ಲಿ ಪಾಕಿಸ್ತಾನದ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯ ಡ್ರೋನ್‌ಗಳ ದಾಳಿ ಮಾಡಿತ್ತು. 36 ಗಂಟೆಗಳ ಒಳಗೆ 80ಕ್ಕೂ ಹೆಚ್ಚು ಭಾರತದ ಡ್ರೋನ್‌ಗಳು ಗಡಿಯನ್ನು ದಾಟಿತ್ತು ಎಂದು ಹೇಳಿದ್ದಾರೆ.

ಶ್ರದ್ಧಾಭಕ್ತಿಯಿಂದ ಅಯ್ಯಪ್ಪ ದೀಪಾರಾಧನಾ ಉತ್ಸವ



ಶ್ರೀ ಅಯ್ಯಪ್ಪ ದೀಪಾರಾಧನಾ ಉತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು.

ಮಡಿಕೇರಿ, ಡಿ.28–ಮಡಿಕೇರಿಯ ಶ್ರೀ ಮುತ್ತಪ್ಪ ದೇವಾಲಯದ ಆವರಣದಲ್ಲಿ ಶ್ರೀ ಅಯ್ಯಪ್ಪ ದೀಪಾರಾಧನಾ ಉತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು. ನಗರದ ಶ್ರೀ ಮುತ್ತಪ್ಪ ದೇವಾಲಯದ ಆವರಣದಲ್ಲಿರುವ ಶ್ರೀಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು.

ನಡೆ ತೆಗೆಯುವುದು, ನಿರ್ಮಲ್ಯ ಪೂಜೆ, ಗಣಪತಿ ಹೋಮ, ಅಷ್ಟಾಭಿಷೇಕ ಸೇವೆ, ತುಳಸಿ ಸಹಸ್ರನಾಮಾರ್ಚನೆ, ಮಹಾ ಪೂಜೆ, ಪಾಲಕೊಂಬು ಪ್ರತಿಷ್ಠಾಪನೆ ಹಾಗೂ ತಾಯಂಬಕಂ (ಚಂಡೆಸೇವೆ) ನಡೆಯಿತು. ಅಲಂಕೃತ ಮಂಟಪದಲ್ಲಿ ಚಂಡೆಮೇಳದೊಂದಿಗೆ ನಗರದ ಅಶ್ವಿನಿ ಗಣಪತಿ ದೇವಾಲಯದಿಂದ ಮುಖ್ಯಬೀದಿಗಳಲ್ಲಿ ಶ್ರೀ ಅಯ್ಯಪ್ಪ ಸ್ವಾಮಿಯ ಉತ್ಸವ ಮೂರ್ತಿ ಮತ್ತು ಪಾಲಕೊಂಬು ಮೆರವಣಿಗೆ ಸಾಗಿತು. ನಂತರ ದೀಪಾರಾಧನೆ, ಅಲಂಕಾರ ಪೂಜೆ, ಪಡಿ ರಂಗಪೂಜೆ, ದುರ್ಗಾಪೂಜೆ ಹಾಗೂ ಸುಬ್ರಹ್ಮಣ್ಯ ಪೂಜೆ ಜರುಗಿತು. ಮಹಾಪೂಜೆಯ ನಂತರ ತೀರ್ಥಪ್ರಸಾದ ವಿತರಣೆಯೊಂದಿಗೆ ಭಕ್ತರಿಗೆ ಅನ್ನ ಸಂತರ್ಪಣೆಯಾಯಿತು.

ರಾತ್ರಿ ಅಗ್ನಿಪೂಜೆ, ಪೊಲಿಪಾಟ್, ಪಾಲ್ಕೊಂಡಿ ತಿರಿ ಉಳಿಚಲ್, ವೆಟ್ಟುಂತಡವುಂ ನಡೆಯಿತು. ಭಾನುವಾರ ಬೆಳಿಗ್ಗೆ ಅಗ್ನಿ ಕೊಂಡ ಹಾಯುವ ವಿಧಿ ವಿಧಾನಗಳು ಜರುಗಿತು. ಶ್ರೀ ಅಯ್ಯಪ್ಪ ದೀಪಾರಾಧನಾ ಸಮಿತಿ ಅಧ್ಯಕ್ಷ ಈ. ಹೇಮಂತ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ಅಯ್ಯಪ್ಪ ದೀಪಾರಾಧನಾ ಉತ್ಸವದಲ್ಲಿ ಅಧಿಕ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

ಸೆಮಿಫೈನಲ್‌ಗೆ ಚೆಪ್ಪುಡಿರ, ಕುಪ್ಪಂಡ, ಮಂಡೆಪಂಡ, ಕುಲ್ಲೇಟಿರ ತಂಡ



ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ರೋಚಕ ಕ್ಷಣಗಳು.

ನಾಪೋಕ್ಲು, ಡಿ.28(ದುಗ್ಗಳ)–ಕೊಡವ ಹಾಕಿ ಅಕಾಡೆಮಿ ವತಿಯಿಂದ ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಚೆಪ್ಪುಡಿರ, ಮಂಡೆಪಂಡ, ಕುಲ್ಲೇಟಿರ ಮತ್ತು ಕುಪ್ಪಂಡ (ಕೈಕೇರಿ) ತಂಡಗಳು ಸೆಮಿಫೈನಲ್ ಹಂತಕ್ಕೆ ಪ್ರವೇಶಿಸಿದೆ.

ಮಂಡೆಪಂಡ ಮತ್ತು ಕೋಣೇರಿರ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮಂಡೆ ಪಂಡ 5–0 ಅಂತರ ದಿಂದ ಗೆಲುವು ಸಾಧಿಸಿತು. ತಂಡದ ಪರವಾಗಿ ಆಟಗಾರರಾದ ಚಂಗಪ್ಪ ಎರಡು ಗೋಲು ಗಳಿಸಿದರೆ. ಮುತ್ತಪ್ಪ, ಕಾಳಪ್ಪ ಮತ್ತು ಕರುಂಬಯ್ಯ ತಲಾ ಒಂದು ಗೋಲು ಗಳಿಸಿ ತಂಡದ ಗೆಲುವಿಗೆ ಕಾರಣರಾದರು.

ಮುಕ್ಕಾಟಿರ ಮತ್ತು ಪಳಗಂಡ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಪಳಗಂಡ ತಂಡವು ಮುಕಾಟಿರ ತಂಡದ ವಿರುದ್ಧ 6–0 ಗೆಲುವು ಸಾಧಿಸಿತು. ಪಳಂಗಂಡ ತಂಡದ ಪರವಾಗಿ ಆಟಗಾರ ಪೊನ್ನಪ್ಪ ನಾಲ್ಕು ಗೋಲು ಗಳಿಸಿದರು. ಅಮರ್ ಅಯ್ಯಪ್ಪ ಎರಡು ಗೋಲು ಗಳಿಸಿದರು.

ಕುಲ್ಲೇಟಿರ ಮತ್ತು ನೆಲಮಕ್ಕಡ ನಡುವೆ ನಡೆದ ಪಂದ್ಯದಲ್ಲಿ ಕುಲ್ಲೇಟಿರ ತಂಡ 1–0 ಅಂತರದಿಂದ ಜಯ ಸಾಧಿಸಿತು. ಕುಲ್ಲೇಟಿರ ತಂಡದ ಮುತ್ತಣ್ಣ ಒಂದು ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಕುಶಾಲನಗರದಲ್ಲಿ ಡಾ.ಶ್ರೀ ಶಿವಕುಮಾರ ಮಹಾ ಸ್ವಾಮೀಜಿ ಮಂಟಪ ಉದ್ಘಾಟನೆ



ಡಾ.ಶಿವಕುಮಾರ ಮಹಾಸ್ವಾಮೀಜಿ ಅವರ ಭಾವಚಿತ್ರದ ಮೆರವಣಿಗೆಯಲ್ಲಿ ಮಠಾಧಿಪತಿಗಳು ಗಣ್ಯರು ಪಾಲ್ಗೊಂಡಿರುವುದು.

ಮಡಿಕೇರಿ/ಕುಶಾಲನಗರ, ಡಿ.28–ತ್ರಿವಿಧ ದಾಸೋಹಿ ಸಿದ್ದಗಂಗಾ ಮಠದ ಸ್ವಾಮೀಜಿ ಡಾ.ಶಿವಕುಮಾರ ಮಹಾ ಸ್ವಾಮೀಜಿ ಅವರ ಪ್ರತಿಮೆ ಇರುವ ಮಂಟಪವನ್ನು ಕುಶಾಲನಗರದ ಬಲಮುರಿ ಗಣಪತಿ ದೇವಾಲಯ ಬಳಿ ಅನಾವರಣಗೊಳಿಸಲಾಯಿತು.

ವೀರಶೈವ ಲಿಂಗಾಯತ ಸಮಾಜದ ವತಿಯಿಂದ ನೂತನವಾಗಿ ನಿರ್ಮಿಸಿರುವ ಡಾ.ಶಿವಕುಮಾರ ಮಹಾಸ್ವಾಮೀಜಿ ಮಂಟಪವನ್ನು ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿ, ನಡೆದಾಡುವ ದೇವರಾಗಿದ್ದ ಶ್ರೀ ಶಿವಕುಮಾರ ಸ್ವಾಮೀಜಿ ತಮ್ಮ ಸತ್ಕಾರ್ಯಗಳ ಮೂಲಕ ಇಂದಿಗೂ ಚಿರಸ್ಥಾಯಿಯಾಗಿ ಜನಮನದಲ್ಲಿ ನೆಲೆಸಿದ್ದಾರೆ. ಜಾತಿ ಬೇಧವಿಲ್ಲದೆ ಎಲ್ಲಾ ಜಾತಿ ಧರ್ಮಗಳ ಆರಾಧ್ಯ ದೇವರಾಗಿರುವ ಶ್ರೀಗಳ ಮಂಟಪ ಇಲ್ಲಿ ದೇವಾಲಯ ಸ್ವರೂಪವಾಗಿದೆ ಎಂದರು. ಇದೇ ಸಂದರ್ಭ ಬಸವೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡುವುದಾಗಿ ಘೋಷಿಸಿದರು.

ವೃತ್ತದ ನಾಮಫಲಕ ಉದ್ಘಾಟಿಸಿದ ಮಾಜಿ ಶಾಸಕ ಅಪ್ಪಚ್ಚುರಂಜನ್ ಮಾತನಾಡಿ, ಸಿದ್ದಗಂಗಾ ಸ್ವಾಮೀಜಿಗಳ ಅನುಗ್ರಹದಿಂದ ಇಡೀ ನಾಡು ಸಮೃದ್ಧವಾಗಿದೆ. ತ್ರಿವಿಧ ದಾಸೋಹದ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಖ್ಯಾತಿ ಗಳಿಸಿದ್ದ ಶ್ರೀಗಳ ಸೇವೆ ಅಜರಾಮರ ಎಂದು ಹೇಳಿದರು.

ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶ ಸದಾಶಿವ ಸ್ವಾಮೀಜಿ ಮಾತನಾಡಿ, ಸಿದ್ದಗಂಗಾ ಸ್ವಾಮೀಜಿ ತಪೋಕ್ಷೇತ್ರ ಸರ್ವಜನರ ಶಾಂತಿಯ ತೋಟವಾಗಿದ್ದು ನೂರಾರು ವಿದ್ಯಾರ್ಥಿಗಳಿಗೆ ತ್ರಿವಿಧ ದಾಸೋಹ ಸೇವೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಶತಮಾನಗಳ ಕಾಲ ಲೋಕ ಕಲ್ಯಾಣಕ್ಕಾಗಿ ಅವಿರತ ದುಡಿದ ಮಹಾ ಚೇತನ ಡಾ.ಶಿವಕುಮಾರ ಸ್ವಾಮೀಜಿ ಸ್ಮರಣೆ ಇಡೀ ದೇಶಾದ್ಯಂತ ನಡೆಯುತ್ತಿದೆ ಎಂದರು.

ಕುಶಾಲನಗರ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ವಿ.ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಕುಶಾಲನಗರದ ಬಸವೇಶ್ವರ ಸೌಹಾರ್ದ ಸಹಕಾರ ಸಂಘದ ವತಿಯಿಂದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಕುಶಾಲನಗರ ಪುರಸಭೆ ಮಾಜಿ ಅಧ್ಯಕ್ಷ ಜಯವರ್ಧನ, ಉಪಾಧ್ಯಕ್ಷೆ ಸುರಯ್ಯಾ ಭಾನು ಹಾಗೂ ಪುರಸಭೆಯ ಪೌರ ಕಾರ್ಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿವಿಧ ಮಠಾಧೀಶರು, ಜಿಲ್ಲಾ ಹೋಟೆಲ್ ಅಸೋಷಿಯೇಷನ್ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್, ಹಿರಿಯ ಸಹಕಾರಿ ಟಿ.ಆರ್.ಶರವಣಕುಮಾರ್, ಜಿಲ್ಲಾ ಸರ್ಕಾರಿ ನೌಕರರ ವೀರಶೈವ ಸಮುದಾಯದ ಅಧ್ಯಕ್ಷ ಎಸ್.ನಂದೀಶ್, ಅಕ್ಕನ ಬಳಗದ ಅಧ್ಯಕ್ಷೆ ಕಮಲಾ ಉದಯ ಕುಮಾರ್, ಲೇಖನಾ ಧರ್ಮೇಂದ್ರ, ಗುಡ್ಡೆಹೊಸೂರು ವೀರಶೈವ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ, ಕುಶಾಲನಗರ ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಹೆಚ್.ಎಂ.ಮಧುಸೂದನ್, ಲಿಂಗಾಯಿತ ಜಿಲ್ಲಾ ಯುವ ವೇದಿಕೆ ಅಧ್ಯಕ್ಷ ಕಿರಣ್, ಬಸವೇಶ್ವರ ದೇವಾಲಯ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಧನರಾಜು ಮತ್ತಿತರರು ಪಾಲ್ಗೊಂಡಿದ್ದರು.

ವಾರ್ಷಿಕ ಮಹಾಸಭೆ

ನಾಪೋಕ್ಲು, ಡಿ.28(ದುಗ್ಗಳ)–ವಿರಾಜಪೇಟೆ ಗೌಡ ಸಮಾಜದ ವಾರ್ಷಿಕ ಮಹಾಸಭೆ ಸಮಾಜದ ಅಧ್ಯಕ್ಷ ಮುಕ್ಕಾಟಿ ವಾಸು ಗಣಪತಿ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸಮಾಜದ ಅಭಿವೃದ್ಧಿಯ ಬಗ್ಗೆ ದೀರ್ಘವಾಗಿ ಚರ್ಚೆ ನಡೆಸಲಾಗಿ ಪ್ರಸಕ್ತ ಆಡಳಿತ ಮಂಡಳಿಯನ್ನು ಪುನರ್ ರಚನೆ ಮಾಡಲು ತೀರ್ಮಾನಿಸಿ, ಹೊಸ ಆಡಳಿತ ಮಂಡಳಿಯಲ್ಲಿ ಸಮಾಜದ ವ್ಯಾಪ್ತಿಯ ಎಲ್ಲಾ ವಲಯಗಳಿಗೆ ಅವಕಾಶ ಕಲ್ಪಿಸಲು ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿಗೆ ಹಿರಿಯರ ಮತ್ತು ಯುವಕರ ಸಮತೂಕದ, ಸದೃಢ ಮಂಡಳಿ ರಚಿಸಲು ತೀರ್ಮಾನಿಸಿ ಪ್ರಸಕ್ತ ಆಡಳಿತ ಮಂಡಳಿಯನ್ನು ವಿಸರ್ಜಿಸಲಾಯಿತು. ಹೊಸ ಮಂಡಳಿ ರಚನೆಯ ಜವಾಬ್ದಾರಿ ಅಧ್ಯಕ್ಷ ವಾಸು ಗಣಪತಿಯವರ ನೇತೃತ್ವದಲ್ಲಿ 7 ಮಂದಿ ಆಡಳಿತ ಸಮಿತಿಯನ್ನು ರಚಿಸಲಾಯಿತು. ಮುಂದಿನ 15 ದಿನದ ಒಳಗಾಗಿ ಮತ್ತೊಮ್ಮೆ ಸಭೆ ಸೇರಲು ತೀರ್ಮಾನಿಸಲಾಯಿತು. ಅಧ್ಯಕ್ಷ, ಉಪಾಧ್ಯಕ್ಷ ಪದಾಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಪಟ್ಟಣದ ರಸ್ತೆಗಳ ಅಭಿವೃದ್ಧಿಗೆ ಕ್ರಮ: ಪೊನ್ನಣ್ಣ



ನೂತನ ಕಾಂಕ್ರೀಟ್ ರಸ್ತೆಯನ್ನು ಶಾಸಕ ಎ.ಎಸ್.ಪೊನ್ನಣ್ಣ ರಿಬ್ಬನ್ ಕತ್ತರಿಸಿ ಉದ್ಘಾಟಿಸಿದರು.


ವಿರಾಜಪೇಟೆ, ಡಿ.28–ಪುರಸಭೆ ವ್ಯಾಪ್ತಿಯ ಕೆಲ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈಗ ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಮುಗಿದ ಕೂಡಲೆ ಪಟ್ಟಣದ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಗೌರಿಕೆರೆ ಬಳಿಯ ರಸ್ತೆ ಕಾಮಗಾರಿ 8 ಲಕ್ಷ ರೂ. ಅನುದಾನದಲ್ಲಿ ನಡೆದ ನೂತನ ಕಾಂಕ್ರೀಟ್ ರಸ್ತೆಯನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿದ ಶಾಸಕ ಪೊನ್ನಣ್ಣ ಮಾತನಾಡಿ, ಮಳೆಯಿಂದಾಗಿ ಕಾಮಗಾರಿ ತಡವಾಗಿದ್ದು ಕೆಲ ವರ್ಷಗಳಿಂದ ಈ ರಸ್ತೆ ದುಸ್ಥಿತಿಯಲ್ಲಿದ್ದು, ಪಟ್ಟಣದಲ್ಲಿ ಕಿರಿದಾದ ರಸ್ತೆಯಲ್ಲಿ ದಿನದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಮುಖ್ಯ ರಸ್ತೆ ಸೇರಿದಂತೆ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗುವುದು. ರಸ್ತೆಬದಿಯಲ್ಲಿರುವವರು ಜಾಗಬಿಟ್ಟು ಕೊಡುವ ಮೂಲಕ ಸಹಕಾರ ನೀಡುವಂತಾಗಬೇಕು ಎಂದರು.

ಪುರಸಭೆ ಸ್ಥಳಿಂಯ ವಾರ್ಡ್ ಮಾಜಿ ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ಖಾಸಗಿ ಬಸ್ ನಿಲ್ದಾಣದಿಂದ ಸಾರ್ವಜನಿಕ ಆಸ್ಪತ್ರೆಗೆ ಹಾಗೂ ಕೋರ್ಟ್ ಮತ್ತು ತಾಲೂಕು ಕಛೇರಿಗೆ ತೆರಳಲು ಹತ್ತಿರವಾಗಿರುವ ಈ ರಸ್ತೆಯ ಕಾಮಗಾರಿಯನ್ನು ಉತ್ತಮವಾಗಿ ಮಾಡಿರುವುದಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಕೊಡವ ಸಮಾಜದ ಉಪಾಧ್ಯಕ್ಷ ಕಣತಂಡ ಜಗದೀಶ್, ಹಿರಿಯರಾದ ಎಂ.ಎಸ್.ಪೂವಯ್ಯ, ಪುರಸಭೆ ಮಾಜಿ ಸದಸ್ಯ ರಜನಿಕಾಂತ್, ಜಲೀಲ್, ಡಿ.ಪಿ.ರಾಜೇಶ್, ಎಸ್.ಎಚ್.ಮತೀನ್, ಮಹ್ಮದ್ ರಾಫಿ, ಶೀಬಾ ಪೃಥ್ವಿನಾಥ್ ಉಪಸ್ಥಿತರಿದ್ದರು.

ನಾಳೆ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಸಮಾರೋಪ



ಕೊಡವ ಹಾಕಿ ಅಕಾಡೆಮಿ ಚಿಹ್ನೆ.

ನಾಪೋಕ್ಲು, ಡಿ.28–ಕೌಟುಂಬಿಕ ಹಾಕಿ ಉತ್ಸವ ಬೆಳ್ಳಿ ಮಹೋತ್ಸವದ ಹಿನ್ನೆಲೆಯಲ್ಲಿ ಕೊಡವ ಹಾಕಿ ಅಕಾಡೆಮಿ ಆಯೋಜಿಸಿರುವ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಸಮಾರೋಪ ಸಮಾರಂಭ ಡಿ.30 ರಂದು ನಡೆಯಲಿದೆ.

ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಎಸ್ಎಲ್ಎನ್ ಗ್ರೂಪಿನ ಅಧ್ಯಕ್ಷ ಎನ್.ಸಾತಪ್ಪನ್, ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥನ್ ಪಾಲ್ಗೊಳ್ಳಲಿದ್ದಾರೆ. ಅತಿಥಿಗಳಾಗಿ ಶಾಸಕರಾದ ಎಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಹಾಕಿ ಒಲಂಪಿಯನ್, ಅರ್ಜುನ ಪ್ರಶಸ್ತಿ ವಿಜೇತ ವಿ.ಆರ್. ರಘುನಾಥ್, ಹಾಕಿ ಕೂರ್ಗ್ ಕಾರ್ಯದರ್ಶಿ ಅಮ್ಮಂಡಿರ ಚೇತನ್ ಕಾವೇರಿಯಪ್ಪ ಉಪಸ್ಥಿತರಿರುವರು.

ಜಾನಕಿ ನಿಧನ



ನಾಪೋಕ್ಲು, ಡಿ.28– ಮೂಲತಃ ಮೇಕೇರಿ ಗ್ರಾಮದವರಾಗಿದ್ದು ಮಡಿಕೇರಿ ಸಂಪಿಗೆ ಕಟ್ಟೆಯಲ್ಲಿ ವಾಸವಾಗಿದ್ದ ಕುದುಕುಳಿ ದಿವಂಗತ ಬಸಪ್ಪ ಅವರ ಪತ್ನಿ ಜಾನಕಿ (85) ಭಾನುವಾರ ನಿಧನರಾದರು.

ಮೃತರು ಪುತ್ರ ಹಾಗೂ ಐವರು ಪುತ್ರಿಯರು ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮೇಕೇರಿ ಗ್ರಾಮದಲ್ಲಿ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಜಾತ್ರಾವರಣಕ್ಕೆ ಬಂದ 16 ಗ್ರಾಮಗಳ ಬಂಡಿಗಳು; ಕಣ್ತುಂಬಿಕೊಂಡ ಸಹಸ್ರಾರು ಭಕ್ತರು

ಚಾಮರಾಜನಗರ, ಡಿ.28–ತಾಲೂಕಿನ ಕಸ್ತೂರು ಗ್ರಾಮದ ದೊಡ್ಡಮ್ಮತಾಯಿ ಜಾತ್ರಾಮಹೋತ್ಸವ ಭಾನುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕೆಸ್ತೂರು ಗ್ರಾಮದ ದೊಡ್ಡಮ್ಮತಾಯಿ ದೇವಾಲಯದ ಮುಂಭಾಗ ಕೆಸ್ತೂರು ಗ್ರಾಮಸ್ಥರು ಮೊದಲ ಬಂಡಿಕಟ್ಟಿ ವಿಶೇಷ ಪೂಜೆ ನೆರವೇರಿಸಿದರು. ನಂತರ ಭಕ್ತಾದಿಗಳು ಬಂಡಿಗೆ ತೆಂಗಿನಕಾಯಿ ಒಡೆದು, ಹರಕೆ ತೀರಿಸಿದರು. ಕೆಸ್ತೂರು ಗ್ರಾಮದ ದೊಡ್ಡಮ್ಮತಾಯಿ ಜಾತ್ರಾಮಹೋತ್ಸವದ ಹಿನ್ನೆಲೆ ಕೆಲ ಗ್ರಾಮಗಳ ಭಕ್ತಾದಿಗಳು ಲಕ್ಷಾಂತರ ರೂ. ಕೊಟ್ಟು, ಎತ್ತುಗಳನ್ನು ಬಂಡಿಗೆ ಕಟ್ಟಲು ತರುವುದು ವಿಶೇಷ, ಮಧ್ಯಾಹ್ನದ ವೇಳೆಗೆ ತಮ್ಮ ತಮ್ಮ ಗ್ರಾಮಗಳಲ್ಲಿ ಬಂಡಿಗಳಿಗೆ ಬಾಳೆಗೊನೆ, ಎಳನೀರುಗೊನೆ, ನಾನಾ ಬಗೆಯ ಹೂಹೊಂಬಾಳೆ, ಭಾರಿ ಗಾತ್ರದ ಹಾರಗಳಿಂದ ಸಿಂಗಾರಗೊಂಡ ಬಂಡಿಗಳಿಗೆ ಎತ್ತುಗಳನ್ನು ಕಟ್ಟಿ, ಪೂಜೆಸಲ್ಲಿಸಿ, ನಂತರ ನಂದಿಧ್ವಜ, ಮಂಗಳವಾದ್ಯ, ಬ್ಯಾಂಡ್ ಸೆಟ್ ಜೊತೆಗೆ ಕೆಸ್ತೂರು ಗ್ರಾಮದ ದೊಡ್ಡಮ್ಮತಾಯಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ, ತೀರ್ಥಪ್ರೋಕ್ಷಣೆ ಮಾಡಿಸಿ, ತಮ್ಮ ತಮ್ಮ ಗ್ರಾಮಗಳಿಗೆ ಹಿಂದಿರುಗುತ್ತವೆ. ಬಂಡಿಗಳಲ್ಲಿ ಕೊನೆಯ ಬಂಡಿಯಾಗಿ ಸಪ್ಪಯ್ಯನಪುರದ ಸೊಪ್ಪಿನ ಬಂಡಿ, ವಿವಿಧ ಬಗೆಯ ಸೊಪ್ಪನ್ನು ಅಲಂಕಾರ ಮಾಡಿ, ಜಾತ್ರಾ ಮಾಳಕ್ಕೆ ಬರುವುದು ವಿಶೇಷ. ಇದಂತೂ ಜನಾಕರ್ಷಣೆಯ ಬಂಡಿಯಾಗಿದೆ.



ದೊಡ್ಡಮ್ಮತಾಯಿ ಜಾತ್ರಾ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು

ಚಿತ್ರ : ಬದನಗುಪ್ಪೆ ಮಲ್ಲಣ್ಣ.

ಮುಂಜಾನೆಯೇ ಭಕ್ತಾದಿಗಳು ಜಾತ್ರೆ ಮಾಳಕ್ಕೆ ಆಗಮಿಸಿ, ದೀವಟಿಗೆ ಸೇವೆ ಸಲ್ಲಿಸಿದರು. ನಂತರ ಸರದಿಸಾಲಿನಲ್ಲಿ ನಿಂತು, ದೇವರಿಗೆ ಪೂಜೆ ಸಲ್ಲಿಸಿದರು. ದೇವರದರ್ಶನ ಪಡೆಯುವವರಿಗೆ ನೆರಳಿನ ವ್ಯವಸ್ಥೆ ಮಾಡಲಾಗಿತ್ತು. ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು, ಚಾಮರಾಜನಗರದಿಂದ ನೇರವಾಗಿ ಕೆಸ್ತೂರಿಗೆ ಖಾಸಗಿ ಬಸ್ ಜೊತೆಗೆ ಕೆಎಸ್ಆರ್‌ಟಿಸಿ ಬಸ್ ವ್ಯವಸ್ಥೆ ಇತ್ತು.

ಕೆಸ್ತೂರು ಗ್ರಾಮದ ದೊಡ್ಡಮ್ಮತಾಯಿ ಜಾತ್ರಾಮಹೋತ್ಸವ ಹಿನ್ನೆಲೆ ಈ ಬಾರಿ ದೇವಾಲಯದ ಒಳಾಂಗಣವನ್ನು ಹೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು.

ದೇವಾಲಯದ ಮುಂಭಾಗ ಕಪ್ಪುಕಬ್ಬಿನ ಜಲ್ಲೆಯಿಂದ ಅಲಂಕಾರಮಾಡಿದ್ದು, ಭಕ್ತಾದಿಗಳ ಗಮನ ಸೆಳೆಯಿತು. ಮುಂಜಾಗ್ರತಾ ಕ್ರಮವಾಗಿ ಕುದೇರು ಪೊಲೀಸ್ ಠಾಣೆಯಿಂದ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಸಂಚಾರದಟ್ಟಣೆ–ನಿಯಂತ್ರಣಕ್ಕೆ ಪೊಲೀಸರ ಹರಸಾಹಸ

ತಾಲೂಕಿನ ಕಸ್ತೂರು ಗ್ರಾಮದಲ್ಲಿ ಭಾನುವಾರ ನಡೆದ ದೊಡ್ಡಮ್ಮತಾಯಿ ಜಾತ್ರೆಯಲ್ಲಿ ಎಲ್ಲಿ ನೋಡಿದರಲ್ಲಿ ಜನವೋ ಜನ, ಭಾನುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಆದರೂ ವಾಹನಗಳಿಂದ ಉಂಟಾದ ಸಂಚಾರ ದಟ್ಟಣೆ ಭಕ್ತರನ್ನು ಹೈರಾಣಾಗಿಸಿತು.



ಜಾತ್ರೆಯಲ್ಲಿ ಖಾಸಗಿ ಬಸ್‌ಗಳಿಗೆ ಗ್ರಾಮದ ಹೊರವಲಯದಲ್ಲಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು, ದ್ವಿಚಕ್ರ ವಾಹನ ಹಾಗೂ ಆಟೋಗಳಿಗೆ ಜಾತ್ರಾ ಆವರಣ ಸಮೀಪವೇ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ದೇವರದರ್ಶನ ಪಡೆದವರು ತಮ್ಮ ಗ್ರಾಮಗಳಿಗೆ ತೆರಳಲು ದ್ವಿಚಕ್ರವಾಹನ ಹೊರಗೆ ತರಲು ಸಂಚಾರ ದಟ್ಟಣೆಯಿಂದ ಕಿರಿಕಿರಿ ಅನುಭವಿಸುವಂತಾಯಿತು. ಜಾತ್ರೆಗೆ ಬರುವವರು, ಜಾತ್ರೆಮುಗಿಸಿಕೊಂಡು ಹೋಗುವವರನ್ನು ನಿಯಂತ್ರಿಸಲು ಪೋಲಿಸರು ಹರಸಾಹಸಪಟ್ಟರು.

ಕದಿಯಲಾಗದ ಶಿಕ್ಷಣ ಸಂಪತ್ತನ್ನು ಮಕ್ಕಳಿಗೆ ನೀಡಿದರೆ ಉತ್ತಮ ಸಮಾಜ ನಿರ್ಮಾಣ



ಪಟ್ಟಣದ ಶ್ರೀ ವಿನಾಯಕ ಕಾನ್ವೆಂಟ್‌ನ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಜನಾರ್ಧನ್(ಜನ್ನಿ), ಕೆ.ಎಚ್.ನಂಜಪ್ಪ, ಚಂದ್ರಶೇಖರ್ ಪಾಲ್ಗೊಂಡಿದ್ದರು.

ಗುಂಡ್ಲುಪೇಟೆ,ಡಿ.28 (ಸೋಮ್.ಜಿ)– ವಿದ್ಯೆ ಕದಿಯಲಾರದ ಸಂಪತ್ತಾಗಿದ್ದು ಇದನ್ನು ಮಕ್ಕಳಿಗೆ ನೀಡಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಮೈಸೂರಿನ ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ) ಪೋಷಕರಿಗೆ ಕಿವಿಮಾತು ಹೇಳಿದರು.

ಪಟ್ಟಣದ ಶ್ರೀ ವಿನಾಯಕ ಕಾನ್ವೆಂಟ್‌ನಲ್ಲಿ ಏರ್ಪಡಿಸಲಾಗಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ಉತ್ತಮ ವಾತಾವರಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶ್ರೀ ವಿನಾಯಕ ಕಾನ್ವೆಂಟ್ 25 ವರ್ಷದಿಂದ ಸತತವಾಗಿ ಶ್ರಮಿಸುತ್ತಿದೆ. ಪೋಷಕರು ಮಕ್ಕಳಿಗೆ ವಿದ್ಯೆಯೊಂದಿಗೆ ಭಾರತದ ಸಂಸ್ಕೃತಿಯನ್ನು ತಿಳಿಸುವುದರೊಂದಿಗೆ ಅವರನ್ನು ಸಂಸ್ಕಾರವಂತರಾಗಿ ಮಾಡಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಕೆ.ಎಚ್. ನಂಜಪ್ಪ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿದಾಗ ಮಾತ್ರ ಅವರ ಕನಸನ್ನು ನನಸಾಗಿಸಿಕೊಳ್ಳಬಹುದು ಎಂದರು.

ಸಂಸ್ಥೆ ಮುಖ್ಯಸ್ಥರಾದ ಚಂದ್ರಶೇಖರ್, ಲಕ್ಷ್ಮಿ ಚಂದ್ರಶೇಖರ್, ಶಿಕ್ಷಕ ಮಧುಕೇಶ್ವರ್ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು. ಶಾಲಾ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವು ಸಭಿಕರ ಮೆಚ್ಚುಗೆಗಳಿಸಿತು.

ಟ್ರ್ಯಾಕ್ಟರ್ ಉರುಳಿ ಚಾಲಕನಿಗೆ ಗಾಯ



ಬೇಗೂರು ಸಮೀಪದ ಕುಲಗಾಣ ಮಲೆಯೂರು ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ಉರುಳಿ ಚಾಲಕ ಮಹೇಶ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ.


ಯುವಕ ಕಾಣೆ ಪ್ರಕರಣ ದಾಖಲು

ಯಳಂದೂರು: ಮಾರ್ಕ್ ಸಿನಿಮಾ ನೋಡಲು ಹೋದ ಯುವಕನೊಬ್ಬ ಕಾಣೆಯಾಗಿರುವ ಪ್ರಕರಣವೊಂದು ನಡೆದಿದೆ. ಠಾಣೆಗೆ ಹಾಜರಾಗಿ ನನ್ನ ಮಗ ಶಿವನಾಯಕ (23 ವರ್ಷ) ಡಿ.25 ರಂದು ಬೆಳಿಗ್ಗೆ ಮಾರ್ಕ್ ಸಿನಿಮಾ ನೋಡಲೆಂದು ಮನೆಯಿಂದ ಚಾಮರಾಜನಗರಕ್ಕೆ ಹೋದವನು ವಾಪಸ್ ಮನೆಗೆ ಬಂದಿರುವುದಿಲ್ಲ ಎಂದು ಆತನ ತಂದೆ ಚಂಗಚಳ್ಳಿ ಗ್ರಾಮದ ವಾಸಿ ಪುಟ್ಟಮಾದನಾಯಕ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.



ಇವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಯಳಂದೂರು ಠಾಣೆ ಪಿಎಸ್ಐ 9480804649, 08224260028, ಚಾಮರಾಜನಗರ ಜಿಲ್ಲಾ ನಿಸ್ತಂತು ಕೊಠಡಿ 08226222383 ಗೆ ಕರೆ ಮಾಡಿ ತಿಳಿಸಬೇಕೆಂದು ಪೊಲೀಸರ ಪ್ರಕಟಣೆ ತಿಳಿಸಿದೆ.

ಚೆನ್ನಮ್ಮ ನಿಧನ



ಗುಂಡ್ಲುಪೇಟೆ, ಡಿ.28– ಪಟ್ಟಣದ ದುಂದಾಸನಪುರ ಬಡಾವಣೆಯ ನಿವಾಸಿ ಚೆನ್ನಮ್ಮ(88) ಭಾನುವಾರ ನಿಧನರಾದರು.

ಮೃತರಿಗೆ ಇಬ್ಬರು ಪುತ್ರಿಯರು, ಲಯನ್ಸ್‌ಕ್ಲಬ್ ಮಾಜಿ ಅಧ್ಯಕ್ಷ ಎಂ.ಸಿ.ಶಿವಪ್ರಸಾದ್ ಸೇರಿದಂತೆ ನಾಲ್ವರು ಪುತ್ರರು ಮತ್ತು ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ಮಧ್ಯಾಹ್ನ ಹೊಸೂರಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ದೇಶದ ಪ್ರಗತಿಗಾಗಿ ಹಲವಾರು ಜನಪರ ಯೋಜನೆಗಳು ಜಾರಿ

ಚಾಮರಾಜನಗರ, ಡಿ.28–ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಭಾನುವಾರ 141ನೇ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಸ್ವಾತಂತ್ರ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ದ ದೇಶಕ್ಕಾಗಿ ಹೋರಾಡಿ ಪ್ರಾಣತೆತ್ತ ಅನೇಕ ಹಿರಿಯರಿದ್ದಾರೆ. ಇವರು ದಶಕಗಳ ಕಾಲ ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ತಮ್ಮ ಜೀವ ಸವೆಸಿದ್ದಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕಾಗಿ ತ್ಯಾಗ ಮಾಡಿ ಸಂಘಟನೆಯನ್ನು ಬಲಪಡಿಸಿದ ಪಕ್ಷದ ಹಿರಿಯ ಮುಖಂಡರ ಇಂಥ ಮಹನೀಯರನ್ನು ಸನ್ಮಾನಿಸುವ ಮೂಲಕ ಪಕ್ಷದ ವತಿಯಿಂದ ಗೌರವಿಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಪಿ.ಮರಿಸ್ವಾಮಿ ಮಾತನಾಡಿ, ಕಾಂಗ್ರೆಸ್ ಪಕ್ಷ ಇತಿಹಾಸವನ್ನು ಹೊಂದಿರುವ ಪಕ್ಷವಾಗಿದ್ದು, ಕಾಂಗ್ರೆಸ್ ಪಕ್ಷದಿಂದ ಪ್ರಧಾನಿಗಳಾಗಿರುವ ಅನೇಕರು ದೇಶದ ಪ್ರಗತಿಗಾಗಿ ಹಲವಾರು ಯೋಜನೆಗಳನ್ನು ಕಾರ್ಯಗತ ಮಾಡಿದ್ದಾರೆ. ಹಸಿರು ಕ್ರಾಂತಿ, ಪಂಚ ವಾರ್ಷಿಕ ಯೋಜನೆ, ಆಹಾರ ಭದ್ರತೆ, ಉದ್ಯೋಗ ಖಾತರಿ ಯೋಜನೆ, ಅನ್ನದಾಸೋಹ ಸೇರಿದಂತೆ ಹಲವಾರು ಕಾರ್ಯಕ್ರಮ ರೂಪಿಸಿದ್ದಾರೆ. ಶೋಷಿತರ ಪರವಾಗಿ ಪಕ್ಷ ಹೋರಾಟ ನಡೆಸಿಕೊಂಡು ಬಂದಿದೆ ಎಂದರು. ಪಕ್ಷದ ಹಿರಿಯ ಮುಖಂಡರಾದ ಶತಾಯುಷಿ ಬಿಸಲ ವಾಡಿ ಚನ್ನಬಸಪ್ಪ, ಕೆ.ಕೆ.ಹುಂಡಿ ದೊಡ್ಡೇಗೌಡ, ರಾಚಯ್ಯ ಚಿಕ್ಕಕೆಂಪಿಹುಂಡಿ, ರಂಗಸ್ವಾಮಿ ವೆಂಕಟಯ್ಯನಛತ್ರ, ಅನ್ವರ್ ಪಾಷ ಹೆಬ್ಬಸೂರು, ಹೊನ್ನಯ್ಯ ಸನ್ಮಾನಿಸಲಾಯಿತು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಬಿ.ಕೆ.ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಆರ್.ನಾಗರತ್ನ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಎ.ಎಸ್.ಗುರುಸ್ವಾಮಿ, ಶ್ರೀನಿವಾಸ್, ಚೆನ್ನಮ್ಮ, ಸದಸ್ಯೆ ಕಲಾವತಿ, ಶಕುಂತಲಾ, ಮಧುಸೂಧನ್, ಬಿಸಲವಾಡಿ ರವಿ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಶಿವಣ್ಣ, ನಾಗಯ್ಯ ನಾಗವಳ್ಳಿ, ನಸ್ರುಲಾಖಾನ್, ಎಎಚ್ಎನ್. ಸಿ, ಸಿದ್ದರಾಜು, ಅಕ್ಷಯ್, ಜಿ.ಡಿ.ಪ್ರಕಾಶ್, ರಾಮಸಮುದ್ರ ಶಿವಕುಮರ್, ಶಿವಮೂರ್ತಿ, ಸಿಚನ್ನಬಸವಯ್ಯ, ಆಯುಬ್ ಖಾನ್, ಇಬ್ರಾನ್ ಅಹಮದ್, ಸುಹೇಲ್ ಅಲಿ ಖಾನ್, ಮಹದೇವಸ್ವಾಮಿ, ಹೆಗ್ಗವಾಡಿ ಕೆಂಪರಾಜು, ಶೇಷಣ್ಣ, ಪಕ್ಷದ ಮುಖಂಡರು ಹಾಜರಿದ್ದರು.



ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪಕ್ಷಕ್ಕಾಗಿ ದುಡಿದ ಹಿರಿಯರನ್ನು ಸನ್ಮಾನಿಸಲಾಯಿತು.

ಆರಾಧನ ಸಮಿತಿಯ ನೂತನ ಸದಸ್ಯರಿಗೆ ಗೌರವ ಸನ್ಮಾನ



ಆರಾಧನಾ ಸಮಿತಿಗೆ ನೂತನವಾಗಿ ನೇಮಕಗೊಂಡ ನಾಲ್ವರು ಮುಖಂಡರನ್ನು ಎ.ಆರ್.ಕೃಷ್ಣಮೂರ್ತಿ ಅಭಿಮಾನಿ ಬಳಗ ಗೌರವಿಸಿತು.

ಕೊಳ್ಳೇಗಾಲ, ಡಿ.28–ಕ್ಷೇತ್ರದ ಆರಾಧನಾ ಸಮಿತಿಗೆ ನೂತನವಾಗಿ ನೇಮಕಗೊಂಡ ನಾಲ್ವರು ಮುಖಂಡರನ್ನು ಎ.ಆರ್.ಕೃಷ್ಣಮೂರ್ತಿ ಅಭಿಮಾನಿ ಬಳಗದ ಅಧ್ಯಕ್ಷ ಕಂದಹಳ್ಳಿ ನಂಜುಂಡಸ್ವಾಮಿ ಅಭಿನಂದಿಸಿದರು.

ಕುಂತೂರು ರೂಪ, ಮಸಣಾಪುರ ಶಿವನಂಜಯ್ಯ, ಕೃಷ್ಣನಾಯಕ ಕಣ್ಣೇಗಾಲ, ಶಿವಶಂಕರ್ ಕೊಮ್ಮನಪುರ ಅವರುಗಳು ನೂತನವಾಗಿ ನೇಮಕಗೊಂಡ ಹಿನ್ನೆಲೆ ಕಂದಳ್ಳಿ ನಂಜುಂಡಸ್ವಾಮಿ ಅವರು ನಾಲ್ಕು ಮಂದಿಗೂ ಶಾಲು ಹಾರ ಹಾಕಿ ಗೌರವಿಸಿ ಕ್ಷೇತ್ರದ ಅರಾಧನಾ ಸಮಿತಿ ಸದಸ್ಯರಾಗಿ ನೇಮಕವಾದ ಎಲ್ಲರೂ ಶಾಸಕರ ಜೊತೆಗೂಡಿ ಶಿಥಿಲಗೊಂಡಿರುವ ದೇವಸ್ಥಾನಗಳನ್ನು ಜೀರ್ಣೋದ್ಧಾರದತ್ತ ಗಮನಹರಿಸಿ ಸಮಗ್ರ ಅಭಿವೃದ್ದಿಗೆ ಮುಂದಾಗಿ ಎಂದರು

ಯಳಂದೂರು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಭುಪ್ರಸಾದ್, ಬಿಳಿಗಿರಿರಂಗನ ಬೆಟ್ಟದ ಧರ್ಮದರ್ಶಿ ಶ್ರೀನಿವಾಸ್.ಜೆ, ರಾಘವೇಂದ್ರ, ಜಿ.ಮಹೇಶ್, ಗೌತಮ್ ಬಡಾವಣೆ ನಂಜುಂಡಸ್ವಾಮಿ, ಪ್ರದೀಪ್ ಇದ್ದರು.

ಕ್ಯಾಲೆಂಡರ್ ಬಿಡುಗಡೆ



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ನೂತನ ಕ್ಯಾಲೆಂಡರ್ ಅನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಬಿಡುಗಡೆ ಮಾಡಿದರು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಸದಸ್ಯರಾದ ಮಹೇಶ್, ನಾಗರಾಜು, ಸುಬ್ರಮಣ್ಯ, ಚಂದ್ರಶೇಖರ, ಹರೀಶ್, ಶ್ರೀನಿವಾಸ್, ಪ್ರತಾಪ್ ಮತ್ತಿತರರು ಉಪಸ್ಥಿತರಿದ್ದರು.

ಬಟ್ಟೆ ತೊಳೆಯಲು ನಾಲೆಗೆ ಹೋದ ಗೃಹಿಣಿ ಹತ್ಯೆ



ಶ್ರೀರಂಗಪಟ್ಟಣ, ಡಿ.28– ಬಟ್ಟೆ ತೊಳೆಯಲು ನಾಲೆಯ ಬಳಿ ತೆರಳಿದ್ದ ಗೃಹಿಣಿಯೊಬ್ಬರನ್ನು ದುಷ್ಕರ್ಮಿಗಳು ಕೊಲೆ ಮಾಡಿ, ಚಿನ್ನಾಭರಣ ದೋಚಿರುವ ಘಟನೆ ತಾಲೂಕಿನ ಪಾಲಹಳ್ಳಿ ಗ್ರಾಮದ ಬಳಿ ಭಾನುವಾರ ನಡೆದಿದೆ.

ಪಾಲಹಳ್ಳಿ ಗ್ರಾಮದ ನಿವಾಸಿ ಜಗದೀಶ್ ಎಂಬುವವರ ಪತ್ನಿ ಮಮತಾ (35) ಕೊಲೆಯಾದ ದುರ್ದೈವಿ. ಇವರು ಶ್ರೀರಂಗಪಟ್ಟಣದ ಗಾರ್ಮೆಂಟ್ಸ್ ಒಂದರಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ಮಧ್ಯಾಹ್ನ ಸುಮಾರು 2 ಗಂಟೆಯ ವೇಳೆಗೆ ಮಮತಾ ಅವರು ಬಟ್ಟೆ ತೊಳೆಯಲೆಂದು ಗ್ರಾಮದ ಸಮೀಪವಿರುವ ಕ್ಯೂಟ್ ರೆಸಾರ್ಟ್ ಬಳಿಯ ವರುಣಾ ನಾಲೆಗೆ ತೆರಳಿದ್ದು, ಸಂಜೆಯಾದರೂ ಅವರು ಮನೆಗೆ ಮರಳದಿದ್ದಾಗ ಆತಂಕಗೊಂಡ ಪತಿ ಜಗದೀಶ್ ಅವರು ಹುಡುಕಾಟ ನಡೆಸಿದ್ದಾರೆ. ಈ ವೇಳೆ ನಾಲೆಯ ಬಳಿ ಹೋದಾಗ ಮಮತಾ ಅವರ ಶವ ನೀರಿನಲ್ಲಿ ಮುಳುಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮೃತದೇಹವನ್ನು ಪರಿಶೀಲಿಸಿದಾಗ ಮಮತಾ ಅವರ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರ ಹಾಗೂ ಕಿವಿಯಲ್ಲಿದ್ದ ಓಲೆಯನ್ನು ಬಲವಂತವಾಗಿ ಕಿತ್ತುಕೊಂಡಿರುವುದು ಕಂಡುಬಂದಿದೆ. ಚಿನ್ನಾಭರಣಕ್ಕಾಗಿ ದುಷ್ಕರ್ಮಿಗಳು ಮಹಿಳೆಯನ್ನು ಉಸಿರುಗಟ್ಟಿಸಿ ಅಥವಾ ಹಲ್ಲೆ ನಡೆಸಿ ಕೊಲೆ ಮಾಡಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಶ್ರೀರಂಗಪಟ್ಟಣ ಟೌನ್ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ದುಷ್ಕರ್ಮಿಗಳ ಪತ್ತೆಗಾಗಿ ಜಾಲ ಬೀಸಿದ್ದಾರೆ.

ಜ್ವಾಲಾಮುಖಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ ಕ್ಯಾಲೆಂಡರ್ ಬಿಡುಗಡೆ...



ಜ್ವಾಲಾಮುಖಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ ಇಟ್ಟಿಗೆಗೂಡು ಮೈಸೂರು ವತಿಯಿಂದ ಹೊರತಂದಿರುವ 2026ರ ಕ್ಯಾಲೆಂಡರ್ ಅನ್ನು ಜ್ವಾಲಾಮುಖಿ, ಶ್ರೀನಿವಾಸ ಕಲ್ಯಾಣ ಚಿತ್ರಗಳ ನಿರ್ಮಾಪಕರು ಆದ ಡಾ.ರಾಜ್ ಅವರ ಭಾಮೈದ ಎಸ್.ಎ.ಶ್ರೀನಿವಾಸ್ ಇಂದು ಬಿಡುಗಡೆ ಮಾಡಿ ಶುಭ ಕೋರಿದರು. ಚಿತ್ರದಲ್ಲಿ ಮುಖಂಡರಾದ ಜಗದೀಶ್, ರವಿ, ನಾಗಣ್ಣ, ಲೋಹಿತ್, ನಾಗೇಶ್ ಮಿತ್ರ, ಶಂಕರ್, ನರಸಿಂಹ, ದೊರೆ, ನಾಗಭೂಷಣ್, ಸಂದೇಶ್ ಮಂಜು ಇದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಅಂಡರ್ ಗ್ರೌಂಡ್ ಗ್ಯಾಸ್ ಪೈಪ್‌ಲೈನ್ ಕಾಮಗಾರಿಗೆ ತಡೆ

ಶಾಸಕ ಕೆ.ಹರೀಶ್‌ಗೌಡ ಮಾಹಿತಿ



ಮೈಸೂರು, ಡಿ.28(ಎಸ್‌ಪಿಎನ್)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂಡರ್ ಗ್ರೌಂಡ್ ಗ್ಯಾಸ್ ಪೈಪ್‌ಲೈನ್ ಕಾಮಗಾರಿಗೆ ತಡೆ ಹಿಡಿಯಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಘೋಷಿಸಿದರು.

ಮೈಸೂರು ಜೆ.ಪಿ.ನಗರದ ಡಾ.ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ವಿಶ್ವ ಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪು ಜಯಂತಿ ಅಂಗವಾಗಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ಹಿರಿಯ ಸದಸ್ಯರಿಗೆ, ಪೌರಕಾರ್ಮಿಕರಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಆದಿ ಚುಂಚನ ಗಿರಿ ಮಠದ ಹಿರಿಯ ಶ್ರೀಗಳಾದ ಬಾಲಗಂಗಾಧರನಾಥ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಬಳಿಕ ಮಾತನಾಡಿದರು.

ಜೆ.ಪಿ.ನಗರದ ಕೆಲ ಭಾಗದಲ್ಲಿ ಅಂಡರ್ ಗ್ರೌಂಡ್ ಗ್ಯಾಸ್ ಪೈಪ್‌ಲೈನ್ ಮಾಡುತ್ತಿಲ್ಲ. ಇದರ ಬಗ್ಗೆ ಮೈಸೂರು ನಗರ ಪಾಲಿಕೆ ಆಯುಕ್ತರಿಗೆ, ಕಾಮಗಾರಿ ಪೂರ್ಣಗೊಳಿಸಲು ಸೂಚಿಸುವಂತೆ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್.ಕೃಷ್ಣ, ಶಾಸಕ ಕೆ.ಹರೀಶ್‌ಗೌಡರಿಗೆ ಮನವಿ ಸಲ್ಲಿಸಿದರು. ಇದರೊಂದಿಗೆ ಜೆ.ಪಿ.ನಗರದಲ್ಲಿ ಅಪೂರ್ಣಗೊಂಡಿರುವ ಕನ್ನಡ ಭವನ(ಸಾಂಸ್ಕೃತಿಕ ಭವನ) ಪೂರ್ಣಗೊಳಿಸಲು ಅನುದಾನ ಬಿಡುಗಡೆಗೆ ಸರ್ಕಾರದ ಮೇಲೆ ಒತ್ತಡ ತರುವಂತೆ ಮನವಿ ಮಾಡಿದ್ದ ಹಿನ್ನಲೆಯಲ್ಲಿ ಶಾಸಕರು, ಈ ಪ್ರತಿಕ್ರಿಯೆ ನೀಡಿದರು.

ಅಂಡರ್ ಗ್ರೌಂಡ್ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಪಡೆದಿರುವ ಗುತ್ತಿಗೆದಾರರು, ಪಾಲಿಕೆಗೆ ಮೀಟರ್‌ಗೆ 2,950 ರೂ.ನಂತೆ ಒಟ್ಟು 1450 ಕೋಟಿ ಹಣ ಪಾವತಿಸಬೇಕು. ಆದರೆ, ಗುತ್ತಿಗೆದಾರರು ಹಣ ಪಾವತಿಸದೇ ಕಾಮಗಾರಿ ನಡೆಸುತ್ತಿದ್ದರು. ಇದನ್ನು ವಿಧಾನಸಭೆಯಲ್ಲಿ ಪ್ರಶ್ನಿಸಿ, ಹಣ ಪಾವತಿ ಮಾಡುವವರೆಗೂ ನನ್ನ ಕ್ಷೇತ್ರದಲ್ಲಿ ಗ್ಯಾಸ್‌ಲೈನ್ ಕಾಮಗಾರಿಗೆ ತಡೆ ಹಿಡಿಯುವಂತೆ ಸಂಬಂಧಪಟ್ಟ ಸಚಿವರಲ್ಲಿ ಮನವಿ ಮಾಡಿದ್ದೆ. ಆ ಹಿನ್ನಲೆಯಲ್ಲಿ ನನ್ನ ಕ್ಷೇತ್ರದಲ್ಲಿ ಈ ಕಾಮಗಾರಿ ನಿಂತಿದೆ ಎಂದು ವಿವರಣೆ ನೀಡಿದರು. ಆದರೆ, ನಿಮ್ಮ ಕ್ಷೇತ್ರದಲ್ಲಿ (ಕೆ.ಆರ್.ಕ್ಷೇತ್ರ) ಈ ಕಾಮಗಾರಿಗೆ ನಡೆಯುತ್ತಿದೆ. ಈ ಕ್ಷೇತ್ರದ ಶಾಸಕರಾದ ಟಿ.ಎಸ್.ಶ್ರೀವತ್ಸರಲ್ಲಿ ಮನವಿ ಮಾಡಿ, ಗ್ಯಾಸ್ ಲೈನ್ ಸಂಪರ್ಕ ಪಡೆಯುವಂತೆ ಸಲಹೆ ನೀಡಿದರು.

ವೈದ್ಯರ ದಿನಾಚರಣೆ ಪ್ರಶಸ್ತಿ ಪ್ರದಾನ



ದಿ ಅಸೋಸಿಯೇಷನ್ ಆಫ್ ಫಿಜಿಶಿಯನ್ಸ್ ಆಫ್ ಇಂಡಿಯಾ(ಎಪಿಐ) ಕರ್ನಾಟಕ ಘಟಕದ ವತಿಯಿಂದ ಬೆಂಗಳೂರಿನ ಎಪಿಐ ಭವನದಲ್ಲಿ ನಡೆದ ಸಮಾರಂಭದಲ್ಲಿ ಡಾ.ವಿ.ಲಕ್ಷ್ಮೀನಾರಾಯಣ ಅವರಿಗೆ 'ವೈದ್ಯರ ದಿನಾಚರಣೆ ಪ್ರಶಸ್ತಿ–2025' ನೀಡಿ, ಗೌರವಿಸಲಾಯಿತು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಎಪಿಐ ರಾಜ್ಯ ಘಟಕದ ಅಧ್ಯಕ್ಷ ಡಾ.ಮಹಾಲಿಂಗಯ್ಯ, ಗೌರವ ಕಾರ್ಯದರ್ಶಿ ಡಾ.ಮೋಹನ್ ಕುಮಾರ್ ಮಹದೇವಯ್ಯ, ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿವಿ ನಿವೃತ್ತ ಅಧ್ಯಾಪಕರು, ನೌಕರರಿಗೆ

ನಿಯಮಿತವಾಗಿ ಪಿಂಚಣಿ ಪಾವತಿಗೆ ಆಗ್ರಹ

ಕುಲಪತಿಗಳಿಗೆ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಪತ್ರ



ಚಂದ್ರಶೇಖರ್

ಮೈಸೂರು,ಡಿ.28(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಅಧ್ಯಾಪಕರು ಮತ್ತು ನೌಕರರಿಗೆ ತಿಂಗಳ ಪಿಂಚಣಿ ಪಾವತಿ ನಿರಂತರ ವಿಳಂಬವಾಗುತ್ತಿರುವ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ವರದಿ ಅತ್ಯಂತ ಕಳವಳಕಾರಿ ಎಂದು ಆತಂಕ ವ್ಯಕ್ತಪಡಿಸಿರುವ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಅವರು, ಯಾವುದೇ ಷರತ್ತುಗಳಿಲ್ಲದೆ ತಿಂಗಳಿಗೆ ನಿಯಮಿತ ಮತ್ತು ಸಮಯೋಚಿತ ಪಿಂಚಣಿ ಪಾವತಿಯನ್ನು ತಕ್ಷಣ ಖಚಿತಪಡಿಸಬೇಕೆಂದು ವಿವಿ ಕುಲಪತಿಗಳಲ್ಲಿ ಪತ್ರ ಮುಖೇನ ಮನವಿ ಮಾಡಿದ್ದಾರೆ.

ವಿವಿಯಲ್ಲಿ ನಿವೃತ್ತ ಅಧ್ಯಾಪಕರು ಮತ್ತು ನೌಕರರಿಗೆ ಪಿಂಚಣಿ ಪಾವತಿಯಲ್ಲಿ ಆಗುತ್ತಿರುವ ನಿರಂತರ ವಿಳಂಬವು ಗಂಭೀರ ಆಡಳಿತಾತ್ಮಕ ವೈಫಲ್ಯ. ದಶಕಗಳ ಕಾಲ ವಿವಿಯಲ್ಲಿ ಸೇವೆ ಸಲ್ಲಿಸಿದ ಹಿರಿಯ ನಾಗರಿಕರು ಇಂದು ಜೀವನಾವಶ್ಯಕತೆ ಹಾಗೂ ವೈದ್ಯಕೀಯ ವೆಚ್ಚಗಳಿಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ಅತ್ಯಂತ ದುರಂತ. ಪಿಂಚಣಿಯು ನಿವೃತ್ತ ನೌಕರರ ಕಾನೂನು ಬದ್ಧ ಹಕ್ಕು. ಪಿಂಚಣಿ ಪಾವತಿಯಲ್ಲಿ ವಿಳಂಬ ಅಥವಾ ಅನಿಶ್ಚಿತತೆ ಉಂಟಾಗುವುದು ಭಾರತ ಸಂವಿಧಾನದ ಕಲಂ 21 (ಜೀವನ ಮತ್ತು ಗೌರವದ ಹಕ್ಕು) ಉಲ್ಲಂಘನೆಯಾಗುತ್ತದೆ ಎಂಬುದನ್ನು ಸುಪ್ರೀಂ ಕೋರ್ಟ್ ಪದೇ ಪದೇ ಸ್ಪಷ್ಟಪಡಿಸಿದೆ.

'ಆಂತರಿಕ ನಿಧಿಗಳ ಕೊರತೆ' ಎಂಬ ಕಾರಣ ಮುಂದಿಟ್ಟುಕೊಳ್ಳುವುದು ಸ್ವೀಕಾರಾರ್ಹವಲ್ಲ. ಪಿಂಚಣಿ ಬಾಧ್ಯತೆಗಳಿಗೆ ಪೂರ್ವಯೋಜನೆ ರೂಪಿಸುವುದು, ಸರ್ಕಾರದೊಂದಿಗೆ ಸಮಯೋಚಿತ ಸಂಯೋಜನೆ ನಡೆಸುವುದು ಮತ್ತು ಪಿಂಚಣಿ ಪಾವತಿಗೆ ಮೊದಲ ಆದ್ಯತೆ ನೀಡುವುದು ಕುಲಪತಿಗಳ ಕರ್ತವ್ಯ.

ಈ ಪಿಂಚಣಿ ಸಂಕಷ್ಟವು ವಿವಿಯ ಪ್ರತಿಷ್ಠೆಗೆ ಧಕ್ಕೆ ತಂದಿದೆ. ಈ ನಿರ್ಲಕ್ಷ್ಯ ಮುಂದುವರೆದಿದ್ದಲ್ಲಿ, ನಿವೃತ್ತರು ನ್ಯಾಯಾಂಗದ ಮೊರೆ ಹೋಗುವ ಸಾಧ್ಯತೆ ಇದೆ. ಅದಕ್ಕೆ ಸಂಪೂರ್ಣ ಹೊಣೆಗಾರಿಕೆ ಆಡಳಿತದ ಮೇಲೆಯೇ ಇರುತ್ತದೆ. ಪಿಂಚಣಿ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಸ್ಪಷ್ಟವಾದ ಕಾರ್ಯಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಜೊತೆಗೆ ಕಡ್ಡಾಯವಾಗಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಲಿಖಿತವಾಗಿ ಮಂಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪಿಯು ವಿಜ್ಞಾನ, ಶಿಕ್ಷಣಶಾಸ್ತ್ರ ವಿಷಯಗಳ

ಮೌಲ್ಯಮಾಪನ ಕೇಂದ್ರಗಳ ಕಂದಾಯ ವಿಭಾಗದಲ್ಲಿ ತೆರೆಯಿರಿ

ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಆಗ್ರಹ



ಮೈಸೂರು,ಡಿ.28(ಪಿಎಂ)– ಪಿಯು ವಿಜ್ಞಾನ ಮತ್ತು ಶಿಕ್ಷಣಶಾಸ್ತ್ರ ವಿಷಯಗಳ ಮೌಲ್ಯಮಾಪನ ಕೇಂದ್ರಗಳನ್ನು ಕಂದಾಯ ವಿಭಾಗಗಳಲ್ಲಿ ತೆರೆಯುವಂತೆ ವಿಧಾನ ಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

2025–26ನೇ ಸಾಲಿನಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಯ ವೇಳಾಪಟ್ಟಿ ಪ್ರಕಟವಾಗಿದೆ. ಪ್ರತಿವರ್ಷದಂತೆ ವಿಜ್ಞಾನ ವಿಷಯಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಮಾತ್ರ ನಡೆಸಲಾಗುತ್ತಿದೆ. ಆದರೆ ಕಲಾ ಮತ್ತು ವಾಣಿಜ್ಯ ವಿಷಯಗಳ ಮೌಲ್ಯಮಾಪನವನ್ನು ಜಿಲ್ಲಾ ಅಥವಾ ವಿಭಾಗ ಮಟ್ಟದಲ್ಲಿ ನಿರ್ವಹಿಸಲಾಗುತ್ತಿದೆ.

ಸದರಿ ವಿಷಯಗಳ ಮೌಲ್ಯಮಾಪನ ಕಾರ್ಯ ಸಂಬಂಧ ಬೆಂಗಳೂರಿನಲ್ಲಿ ಮಾತ್ರವೇ ಕೇಂದ್ರಗಳನ್ನು ತೆರೆಯುವುದರಿಂದ ಹಲವು ತೊಂದರೆಗಳು (ಮಾನಸಿಕ, ದೈಹಿಕ ಮತ್ತು ಆರ್ಥಿಕ) ಆಗುತ್ತವೆ. ಎಲ್ಲಾ ಜಿಲ್ಲೆಗಳಿಂದ ಉಪನ್ಯಾಸಕರು ಬೆಂಗಳೂರಿಗೆ ತೆರಳಿ ಮೌಲ್ಯಮಾಪನ ಮಾಡಲು ತುಂಬ ತೊಂದರೆ ಉಂಟಾಗುತ್ತದೆ. ವಿಶೇಷವಾಗಿ ಮಹಿಳಾ ಉಪನ್ಯಾಸಕಿಯರಿಗೆ 10 ದಿನಗಳ ಕಾಲ ಬೆಂಗಳೂರಿನಲ್ಲಿ ವಸತಿ ಮತ್ತು ಇತರೆ ಮೂಲ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಹಾಗಾಗಿ ವಿಜ್ಞಾನ ಮತ್ತು ಶಿಕ್ಷಣಶಾಸ್ತ್ರ ವಿಷಯಗಳನ್ನು ಕಂದಾಯ ವಿಭಾಗಗಳಲ್ಲಿ ಮೌಲ್ಯಮಾಪನ ಮಾಡುವುದು ಸರಿಯಾದ ಕ್ರಮ.

ಕಂದಾಯ ವಿಭಾಗಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ತೆರೆಯುವುದರಿಂದ ಅತಿ ಶೀಘ್ರವಾಗಿ ಮೌಲ್ಯಮಾಪನ ಕಾರ್ಯ ಮುಗಿಯುತ್ತದೆ. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸುವವರ ಸಂಖ್ಯೆ ದ್ವಿಗುಣವಾಗುತ್ತದೆ. ಮಹಿಳಾ ಉಪನ್ಯಾಸಕಿಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಮಂಡಳಿಗೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ಶಿಕ್ಷಣಶಾಸ್ತ್ರ ವಿಷಯಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಕೇಂದ್ರಗಳನ್ನು ಈ ಸಾಲಿನಿಂದ ಕನಿಷ್ಠ ಕಂದಾಯ ವಿಭಾಗಗಳಲ್ಲಿ ತೆರೆಯುವುದು ಸೂಕ್ತವಾಗಿದೆ.

ಅಂತಿಮವಾಗಿ 55 ವರ್ಷ ವಯೋಮಾನದವರು ಮತ್ತು ಅನಾರೋಗ್ಯ ಹೊಂದಿರುವ ಉಪನ್ಯಾಸಕರು ಮತ್ತು ಉಪನ್ಯಾಸಕಿಯರಿಗೆ ಮೌಲ್ಯಮಾಪನ ಕರ್ತವ್ಯದಿಂದ ವಿನಾಯಿತಿ ನೀಡುವುದು ಸೂಕ್ತ. ಈ ಸಂಬಂಧ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ನಿರ್ದೇಶಕರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಕ್ತರು ವಚನ ಸಾಹಿತ್ಯವೆಂಬ ಜೇನಹನಿ ಸವಿದಾಗ ಜಾಗೃತಿ ಸಾಧ್ಯ

ಜಾಗತಿಕ ಲಿಂಗಾಯತ ಮಹಾಸಭಾ ಗೌರವಾಧ್ಯಕ್ಷ ಗೌರಿ ಶಂಕರ ಸ್ವಾಮೀಜಿ



ಲಿಂಗಾಯತ ಧರ್ಮ ಜಾಗೃತಿ ಸಮಾವೇಶದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಡಿ.28– ವಚನ ಸಾಹಿತ್ಯವೆಂಬ ಜೇನ ಹನಿಯನ್ನು ಭಕ್ತರು ಸವಿದಾಗ ಮಾತ್ರ ಜಾಗೃತಿ ಸಾಧ್ಯ ಎಂದು ಮದ್ದಾರಲಿಂಗಯ್ಯನಹುಂಡಿ ಶೂನ್ಯ ಪೀಠದ ಅಧ್ಯಕ್ಷರೂ ಆದ ಜಾಗತಿಕ ಲಿಂಗಾಯತ ಮಹಾಸಭಾ ಗೌರವಾಧ್ಯಕ್ಷ ಗೌರಿ ಶಂಕರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಭಾನುವಾರ ಜಾಗತಿಕ ಲಿಂಗಾಯತ ಮಹಾಸಭಾದಿಂದ ಆಯೋಜಿಸಿದ್ದ ಲಿಂಗಾಯತ ಧರ್ಮ ಜಾಗೃತಿ ಸಮಾವೇಶ ಹಾಗೂ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಸುಮಾರು 900 ವರ್ಷಗಳ ಹಿಂದೆಯೇ ಬಸವಣ್ಣನವರು ಅನುಭವ ಮಂಟಪ ರಚಿಸಿ, ಕಾಯಕ ವರ್ಗಗಳನ್ನು ಸೇರಿಸಿ ಶಿವ ಪಂಚಾಯತವನ್ನು ಕರುಣಿಸಿದ್ದರು. ಅನುಭವ ಮಂಟಪವೆಂಬ ಜೇನುಗೂಡಿಗೆ ಬಸವಣ್ಣನವರು ರಾಣಿ ಜೇನಾಗಿದ್ದು, ಬಸವಾದಿ ಪ್ರಮತರು ವಚನ ಸಾಹಿತ್ಯವೆಂಬ ಜೇನ ಹನಿ ನೀಡಿದ್ದಾರೆ. ಜೇನಿನಂತಿರುವ ವಚನ ಸಾಹಿತ್ಯವನ್ನು ಭಕ್ತರು ಸವಿದಾಗ ಮಾತ್ರ ಜಾಗೃತಿ ಮೂಡುತ್ತದೆ. ವಚನ ಸಾಹಿತ್ಯ ಅಧ್ಯಯನ ಮಾಡಿದಾಗ ಯಾವುದೇ ದುಷ್ಟ ಶಕ್ತಿ ಬಾಧಿಸದು. ಹೀಗಾಗಿ ಪ್ರತಿಯೊಬ್ಬರೂ ಬಸವಾದಿ ಪ್ರಮತರನ್ನು ನೆನೆದು ಆಚಾರ–ವಿಚಾರಗಳನ್ನು ತಿಳಿಯುವ ಮೂಲಕ ಕ್ರಿಯಾಶೀಲರಾಗಬೇಕು. ಶರಣರನ್ನು ನೆನೆಯದಿದ್ದರೆ ಜೀವನ ಪಾವನವಾಗದೇ ನಾಶದತ್ತ ತಿರುಗಲಿದೆ ಎಂದರು.

ಮನುಷ್ಯನಲ್ಲಿ ತುಲಾತ್ಮಕ ಶಕ್ತಿ ಇದ್ದಾಗ ಮಾತ್ರ ದುಷ್ಟ ಶಕ್ತಿಯಿಂದ ರಕ್ಷಣೆ ಪಡೆಯ ಬಹುದಾಗಿದೆ. ಶಕ್ತಿ ಎಂದರೆ ಅದು ತೋಳ್ಬಲವಲ್ಲ, ಹಣವಲ್ಲ, ವಜ್ರ ವೈಢೂರ್ಯವಲ್ಲ. ಅದು ಭೌತಿಕವಾದ ಶಕ್ತಿಯಾಗಿದೆ. ಶರಣರು ಗುರುಗಳು ದಾರ್ಶನಿಕರನ್ನು ನೆನೆಯುವುದೇ ಭಕ್ತಿ. ಆ ಭಕ್ತಿಯೇ ಶಕ್ತಿಯಾಗಿದ್ದು, ಲೌಖಿಕ ಸಮಸ್ಯೆಗಳಿಂದ ಹೊರಬಂದು ಪಾರಮಾರ್ಥಿಕವಾಗಿ ನಿಶ್ಚಿಂತೆಯಿಂದ ಇರುವುದೇ ಒಂದು ಶಕ್ತಿಯಾಗಿದೆ ಎಂದರು.

ಲಿಂಗಾಯತರನ್ನು ಒಡೆದು ಆಳಲಾಗುತ್ತಿದೆ: ಪ್ರಸ್ತುತ ಲಿಂಗಾಯತರನ್ನು ಒಡೆದಾಳುವ ನೀತಿ ಚಾಲ್ತಿಯಲ್ಲಿದೆ. ಶೇ.20ರಷ್ಟು ಮಂದಿ ಶೇ.80ರಷ್ಟು ಜನರನ್ನು ಛಿದ್ರಗೊಳಿಸಲು ಹುನ್ನಾರ ನಡೆಸುತ್ತಿದ್ದಾರೆ. ಆದರೆ ಶೇ.80ರಷ್ಟು ಬಸವ ಅಭಿಮಾನಿಗಳೇ ಇದ್ದಾರೆ. ಬಸವ ತತ್ವ ಪರಂಪರೆ ಒಪ್ಪಿಕೊಂಡಿದ್ದಾರೆ. ಶೇ.20ರಷ್ಟು ಮಂದಿ ಬಸವ ತತ್ವ, ಪರಂಪರೆ ಒಪ್ಪದಿರುವವರು ಜಾಣತನದಿಂದ ಶೇ.80ರಷ್ಟು ಸಮಾಜ ಒಡೆಯಲು ಮುಂದಾಗಿದ್ದು, ಈಗ ಎಲ್ಲರೂ ಐಕ್ಯಮತವಾಗಬೇಕಿದೆ, ಬುದ್ಧಿವಂತರಾಗಬೇಕಿದೆ. ಒಡೆದು ಆಳುವ ನೀತಿ ಯಾರು ಮಾಡುತ್ತಿದ್ದಾರೆ ಎಂಬುದನ್ನು ತಿಳಿದು ಮುಂದಿನ ಹೆಜ್ಜೆ ಇಡುವಂತೆ ಎಚ್ಚರಿಸಿದರು.

ವೀರಶೈವ ಎಂಬುದು ಶೂದ್ರ ಪಂಥ: ಇತ್ತೀಚಿಗೆ ನಡೆದ ಜಾತಿಗಣತಿಯಲ್ಲಿ ಬಹಳಷ್ಟು ಮಂದಿ ಜಾತಿ ಕಾಲಂನಲ್ಲಿ ತಮ್ಮ ಜಾತಿಯನ್ನು ವೀರಶೈವ ಲಿಂಗಾಯತ ಎಂದು ಬರೆಸಿದ್ದಾರೆ ಯಾಕಾಗಿ ಬರೆಸಿದ್ದಾರೆ ಎಂಬುದು ಅರ್ಥವಾಗಿಲ್ಲ. ವೀರಶೈವ ಎಂಬುದು ಶೂದ್ರ ಪಂಥಕ್ಕೆ ಸೇರಿದ್ದು, ಅದು ನಮಗೆ ಬೇಕಿಲ್ಲ. ಮುಂದಿನ ವರ್ಷ ಕೇಂದ್ರ ಸರ್ಕಾರ ಜಾತಿ ಗಣತಿ ಮಾಡಲಿದ್ದು, ಆ ವೇಳೆ ಎಲ್ಲರೂ ಕಡ್ಡಾಯವಾಗಿ ಲಿಂಗಾಯತ ಎಂದಷ್ಟೇ ಬರೆಸಿ ಎಂದರು.

ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ, ತಾಲೂಕು ಅಧ್ಯಕ್ಷ ಎಂ.ರವಿ ತೊಟ್ಟವಾಡಿ, ಬಸವತತ್ವ ಪ್ರಚಾರಕ ಶರಣ ಲಿಂಗರಾಜಪ್ಪ ಚೌಹಳ್ಳಿ ಮಾತನಾಡಿದರು. ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಸಿದ್ದಬಸವ ಸ್ವಾಮೀಜಿ, ಮೈಸೂರು ಜಿಲ್ಲಾ ನಿರ್ದೇಶಕ ದೊಡ್ಡನಹುಂಡಿ ನಂಜುಂಡಸ್ವಾಮಿ, ಗೌರವ ಸಂಚಾಲಕ ಡಿ.ಎಲ್.ಮಹದೇವಪ್ಪ, ಪುರಸಭಾ ಸದಸ್ಯೆ ರೂಪ ಪರಮೇಶ್, ಬಜ್ಜಿ ಲಿಂಗಪ್ಪ, ಕಬ್ಬೇಹುಂಡಿ ಸೋಮಶೇಖರಪ್ಪ, ಪಿಎಸಿಎಸ್ ಅಧ್ಯಕ್ಷ ಹೆಳವರಹುಂಡಿ ನಟರಾಜು, ಹಿರಿಯೂರು ನವೀನ್, ಕು.ಶಿ.ಬ್ಯಂಗೇಶ್, ಸೀಹಳ್ಳಿ ಗುರುಮೂರ್ತಿ, ಶಿವಪ್ರಸಾದ್, ಧರ್ಮಯ್ಯನಹುಂಡಿ ಕುಮಾರ್, ಕರೋಹಟ್ಟಿ ರಾಜಶೇಖರ್, ಜೆಎಸ್‌ಎಸ್ ನಟರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್ ಶಿವಮೂರ್ತಿ, ಕಾಮಗೆರೆ ಬಸವರಾಜಪ್ಪ ಸೇರಿದಂತೆ ಅಕ್ಕಮಹಾದೇವಿ ಅಭಿವೃದ್ಧಿ ಸಹಕಾರ ಸಂಘ, ಶರಣ ಸಾಹಿತ್ಯ ಪರಿಷತ್, ಶ್ರೀ ಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷರು ಪದಾಧಿಕಾರಿಗಳು ಸದಸ್ಯರು ಹಾಜರಿದ್ದರು.

ಧರ್ಮದ ಆಚರಣೆಯಿಂದ ಶಾಂತಿ, ನೆಮ್ಮದಿ: ಶಿವಬಸವ ಸ್ವಾಮೀಜಿ

ತಿ.ನರಸೀಪುರ, ಡಿ.28– ಆಧುನಿಕ ಕಾಲದಲ್ಲಿ ಒತ್ತಡದ ಜೀವನದಿಂದ ಮನುಷ್ಯ ಬಳಲುತ್ತಿದ್ದಾನೆ. ಧರ್ಮದ ಆಚರಣೆಯಿಂದ ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ ದೊರೆಯುತ್ತದೆ. ಪ್ರತಿದಿನ ಇಷ್ಟಲಿಂಗ ಪೂಜೆ ಮಾಡುವುದರಿಂದ ಮುಂಬರುವ ವಿಪತ್ತುಗಳು ದೂರವಾಗುತ್ತವೆ. ಪೂಜೆಯಿಂದ ಏಕಾಗ್ರತೆ, ನೈತಿಕತೆ, ಆರೋಗ್ಯ ಹಾಗೂ ಆತ್ಮವಿಶ್ವಾಸ ವೃದ್ಧಿಸುತ್ತದೆ. ಮಾನಸಿಕ ನೆಮ್ಮದಿ ದೊರಕುತ್ತದೆ ಎಂದು ಚಿನಕುರುಳಿ ಬೇಬಿ ಬೆಟ್ಟದ ರಾಮಯೋಗೀಶ್ವರ ಮಠದ ಶಿವಬಸವ ಸ್ವಾಮೀಜಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಷ್ಟಲಿಂಗ 12ನೇ ಶತಮಾನದಲ್ಲಿ ಬಸವಣ್ಣ ನೀಡಿದ ವಿಶಿಷ್ಟ ಕೊಡುಗೆ. ಪರಮಾತ್ಮನನ್ನು ಕಾಣಬೇಕಾದರೆ ಜಾತಿ, ಕುಲ, ಲಿಂಗ ಭೇದವಿಲ್ಲದೆ, ಇಷ್ಟಲಿಂಗ ಧರಿಸಬಹುದು. ಮಕ್ಕಳು ಪ್ರತಿದಿನ ಇಷ್ಟಲಿಂಗ ಪೂಜೆ ಮಾಡುವುದರಿಂದ ಜ್ಞಾಪಕ ಶಕ್ತಿ ಹೆಚ್ಚುತ್ತದೆ ಎಂದ ಅವರು ಬಹುತೇಕ ವೀರಶೈವರು ಹೆಸರಿಗೆ ಮಾತ್ರ ವೀರಶೈವರಾಗಿ ಉಳಿದಿದ್ದು, ಅನೇಕರು ಇಷ್ಟಲಿಂಗ ಪೂಜೆ ಮಾಡುತ್ತಿಲ್ಲ. ಎಷ್ಟೋ ಜನ ದೇವರ ಮನೆ ಜಗಲಿ ಮೇಲೆ ಇಷ್ಟಲಿಂಗ ನೇತು ಹಾಕಿದ್ದಾರೆ. ನಾವು ಎಲ್ಲೆಲ್ಲೋ ಹೋಗುತ್ತೇವೆ. ಆ ವೇಳೆ ಶಿವಲಿಂಗ ಮುಟ್ಟುವುದರಿಂದ ಲಿಂಗಕ್ಕೆ ಅಪವಿತ್ರವಾಗುತ್ತದೆ ಎಂದು ಲಿಂಗವನ್ನು ದೇವರ ಮನೆಯಲ್ಲಿ ಇಟ್ಟಿದ್ದೇವೆ ಎನ್ನುತ್ತಾರೆ. ಲಿಂಗ ಯಾವತ್ತೂ ಅಪವಿತ್ರ ಆಗುವುದಿಲ್ಲ. ಬದಲಾಗಿ ಲಿಂಗ ಮುಟ್ಟಿದ ವ್ಯಕ್ತಿ ಪವಿತ್ರ ಆಗುತ್ತಾನೆ ಎಂದರು.

ಪಿ.ಪಟ್ಟಣದಲ್ಲಿ ವಿಜೃಂಭಣೆಯ ಹನುಮ ಜಯಂತಿ



ಪಿರಿಯಾಪಟ್ಟಣದಲ್ಲಿ ಹನುಮ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಪಿರಿಯಾಪಟ್ಟಣ: ಪಟ್ಟಣದಲ್ಲಿ ಸಾವಿರಾರು ಹನುಮ ಭಕ್ತರ ಸಮ್ಮುಖದಲ್ಲಿ 8ನೇ ವರ್ಷದ ಹನುಮ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಹನುಮ ಜಯಂತಿ ಅಂಗವಾಗಿ ಪಟ್ಟಣದ ಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಿದವು. ಅಲ್ಲದೇ ಗಣಪತಿ ಹೋಮ ನೆರವೇರಿಸಲಾಯಿತು. ಬಳಿಕ ಹನುಮ ಜಯಂತಿ ಆಚರಣೆ ಸಮಿತಿ ಸದಸ್ಯರ ಸಮ್ಮುಖದಲ್ಲಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ಬಳಿಕ ಅಲಂಕೃತ ವಿಶೇಷ ವಾಹನದಲ್ಲಿ ಹನುಮ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.

ಜಾನಪದ ಕಲಾ ತಂಡ ಒಳಗೊಂಡ ಮೆರವಣಿಗೆಗೆ ರಾವಂದೂರು ಮುರುಗ ಮಠದ ಮೋಕ್ಷಪತಿ ಸ್ವಾಮೀಜಿ, ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್, ಮಾಜಿ ಶಾಸಕ ಕೆ.ಮಹದೇವ್, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್, ನಗರ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ ಸೇರಿದಂತೆ ಬಿಜೆಪಿ ಮುಖಂಡರು, ಹಿಂದೂ ಜಾಗರಣಾ ವೇದಿಕೆ ಮುಖಂಡರು ಹಾಗೂ ಅನೇಕ ಧಾರ್ಮಿಕ ಸಂಘಟನೆಗಳ ಪ್ರಮುಖರು ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ, ಭಕ್ತರಿಗೆ ಹನುಮ ಜಯಂತಿ ಶುಭಾಶಯ ಕೋರಿ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಪಟ್ಟಣದ ಒಳಕೋಟೆ, ವೈದ್ಯೇಶ್ವರ ಬಡಾವಣೆ, ಉಪ್ಪಾರಗೇರಿ ಮೂಲಕ ಎಪಿಎಂಸಿ ಬಳಿ ಬಿ.ಎಂ.ರಸ್ತೆ ಪ್ರವೇಶಿಸಿ ಸಂತೆಪೇಟೆ, ಬಸವೇಶ್ವರ ವೃತ್ತ, ಬಸ್ ನಿಲ್ದಾಣದವರೆಗೆ ಸಾಗಿ ಬಳಿಕ ನೆಹರು ರಸ್ತೆ, ದೊಡ್ಡ ಬೀದಿ, ನುಗ್ಗೇಹಳ್ಳಿ ಬೀದಿ, ಕಾನ್ವೆಂಟ್ ರಸ್ತೆ ಮೂಲಕ ಗೋಣಿಕೊಪ್ಪ ರಸ್ತೆಯಲ್ಲಿರುವ ಜೂನಿಯರ್ ಕಾಲೇಜು ಮೈದಾನ ತಲುಪಿ ಅಂತ್ಯಗೊಂಡಿತು.

ಮೆರವಣಿಗೆಯುದ್ದಕ್ಕೂ ಡಿಜೆ ಸದ್ದಿಗೆ ಹೆಜ್ಜೆ ಹಾಕಿದ ಯುವಕ–ಯುವತಿಯರ ನೃತ್ಯ ಗಮನ ಸೆಳೆಯಿತು. ದಾರಿಯುದ್ದಕ್ಕೂ ಆಂಜನೇಯಸ್ವಾಮಿಗೆ ಭಕ್ತರು ಪೂಜೆ ಸಲ್ಲಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಯುವಕರಿಗೆ ಧಾರ್ಮಿಕ, ನೈತಿಕ ಶಿಕ್ಷಣ ಅವಶ್ಯಕ



ಧಾರ್ಮಿಕ ಸಭೆಯನ್ನು ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್ ಉದ್ಘಾಟಿಸಿದರು.

ನಂಜನಗೂಡು, ಡಿ.28– ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಧಾರ್ಮಿಕ ಶ್ರದ್ಧೆ ಕಡಿಮೆಯಾಗುತ್ತಿದ್ದು, ಯುವ ಜನರಿಗೆ ನಮ್ಮ ದೇಶದ ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ತಿಳಿಸುವ ನಿಟ್ಟಿನಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆ ಬಿಲ್ವಾರ್ಚನೆ, ಧಾರ್ಮಿಕ ಸಭೆ ಏರ್ಪಡಿಸಿರುವುದು ಶ್ಲಾಘನೀಯ ಎಂದು ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್ ತಿಳಿಸಿದರು.

ನಗರದ ವಾಲ್ಮೀಕಿ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಆಯೋಜಿಸಿದ್ದ ಲಕ್ಷ ಬಿಲ್ವಾರ್ಚನೆ ಪೂಜೆ ಮತ್ತು ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಸಂಸ್ಕೃತಿ, ಧಾರ್ಮಿಕತೆ ತಿಳಿಯದ ಯುವ ಸಮೂಹ ಅನ್ಯ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಹೀಗಾಗಿ ಯುವಕರಿಗೆ ಧಾರ್ಮಿಕ, ನೈತಿಕ ಶಿಕ್ಷಣ ನೀಡುವುದು ಅವಶ್ಯಕ. ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಚಿಕ್ಕಂದಿನಿಂದಲೇ ಧಾರ್ಮಿಕ ಶ್ರದ್ಧೆ ಬೆಳೆಸುವ ಮೂಲಕ ಅವರಿಗೆ ನಮ್ಮ ಸಂಸ್ಕೃತಿ ಸಂಸ್ಕಾರದ ಮಹತ್ವವನ್ನು ತಿಳಿಸಬೇಕು ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜಿಲ್ಲಾ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ ಮಾತನಾಡಿ, ಇತ್ತೀಚೆಗೆ ಜಾಗತಿಕ ಫ್ಯಾಷನ್‌ಗೆ ಒಗ್ಗಿಕೊಳ್ಳುತ್ತಿರುವ ಯುವ ಜನರು ನಮ್ಮ ಸಂಸ್ಕೃತಿ ಹಾಗೂ ಸಂಸ್ಕಾರಗಳಿಂದ ದೂರಾಗುತ್ತಿದ್ದು, ವಿದೇಶಿ ಸಂಸ್ಕೃತಿ ನಮ್ಮ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯುವ ಜನರೇ ಭವಿಷ್ಯದ ಆಸ್ತಿ. ಹೀಗಾಗಿ ಆಧುನಿಕ ಜೀವನ ಶೈಲಿಯಿಂದಾಗುತ್ತಿರುವ ಅನಾಹುತಗಳ ಬಗ್ಗೆ ಎಚ್ಚರಿಕೆ ಅವಶ್ಯಕ. ಪ್ರತಿಯೊಬ್ಬರೂ ಸಂಪತ್ತಿನ ಗಳಿಕೆ ಆಸೆಯಲ್ಲಿ ಮುಗಿಬಿದ್ದು ಧಾವಂತದ ಬದುಕಿನಲ್ಲಿ ತಮ್ಮ ಆರೋಗ್ಯ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಒತ್ತಡದ ಬದುಕಿನಲ್ಲಿ ಬಳಲುತ್ತಿರುವ ಜನರು ತಮ್ಮ ಜೀವನ ಶೈಲಿ ಬದಲಿಸಿಕೊಂಡು ಧ್ಯಾನ, ಆಧ್ಯಾತ್ಮದೊಂದಿಗೆ ಒತ್ತಡ ರಹಿತ ಬದುಕನ್ನು ರೂಢಿಸಿಕೊಂಡು ಉತ್ತಮ ಬದುಕ ಕಟ್ಟಿಕೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಹಲವು ಸಮಾಜಮುಖಿ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ತಾಲೂಕು ಯೋಜನಾಧಿಕಾರಿ ಧರ್ಮರಾಜ್ ಮಾತನಾಡಿದರು. ದೇವೀರಮ್ಮನಹಳ್ಳಿ ಶರಣ ಸಂಗಮ ಮಠಾಧ್ಯಕ್ಷ ನಾಗರಾಜೇಂದ್ರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಶಶಿಕಲಾ ಮಾತನಾಡಿದರು. ಸಮಾರಂಭದಲ್ಲಿ ಲಕ್ಷ ಬಿಲ್ವಾರ್ಚನೆ ಪೂಜಾ ಸಮಿತಿ ಅಧ್ಯಕ್ಷೆ ಲತಾ, ಉಪಾಧ್ಯಕ್ಷೆ ಗೀತಾ, ಕಾರ್ಯದರ್ಶಿ ಪ್ರತಿಮಾ, ಎಂ.ಎಸ್. ಶ್ಯಾಮಲ, ಶಿಸೀಲಿಯಾ, ಜ್ಞಾನ ವಿಕಾಸ ಯೋಜನೆ ಸಮನ್ವಯಾಧಿಕಾರಿ ಶಮಾ ಮತ್ತಿತರರಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಹುಣಸೂರು: ನಗರದ ಪ್ರತಿಷ್ಠಿತ ಹೆಚ್‌ಪಿಬಿಎಸ್ ಸರ್ಕಾರಿ ಶಾಲೆ ಎಸ್‌ಡಿಎಂಸಿ ಅಧ್ಯಕ್ಷೆಯಾಗಿ ಶೋಭಾ, ಉಪಾಧ್ಯಕ್ಷರಾಗಿ ಮಹಮ್ಮದ್ ರಫೀಕ್ ಆಯ್ಕೆಯಾಗಿದ್ದಾರೆ.

ಶಾಲಾವರಣದಲ್ಲಿ ನಡೆದ ಚುನಾವಣೆಯಲ್ಲಿ ಸದಸ್ಯರಾಗಿ ವೆಂಕಟೇಶ್, ಚಲುವರಾಜ್, ಚಂದನ, ಪಲ್ಲವಿ, ಲಕ್ಷ್ಮಿ, ಸಂತೋಷ್, ನರ್ಮದಾ, ಮಂಜುಳಾ, ನಿರ್ಮಲಾ, ಜುಬೇರ್, ಅಹಮದ್, ಪ್ರತಾಪ್, ರಾಜೇಗೌಡ, ಆನಂದ್, ವೆಂಕಟೇಶ್, ನೂರ್ ಸಭಾ, ಆಯಿಷಾ ಬಾನು ಆಯ್ಕೆಯಾಗಿದ್ದಾರೆ.

ಶಾಲೆ ಮುಖ್ಯ ಶಿಕ್ಷಕ ಡಾ.ಮಾಧು ಪ್ರಸಾದ್, ಹಿರಿಯ ಶಿಕ್ಷಕ ನರಸಿಂಹ ಚುನಾವಣೆ ನಡೆಸಿಕೊಟ್ಟರು. ಕರವೇ ಅಧ್ಯಕ್ಷ ಪುರುಷೋತ್ತಮ್ ಹಾಗೂ ಪೋಷಕರು ಉಪಸ್ಥಿತರಿದ್ದರು.

ಕ್ರಿಸ್‌ಮಸ್ ಹಬ್ಬದ ಶುಭಾಶಯ



ಹೆಚ್.ಡಿ.ಕೋಟೆ ಸಿಎಸ್‌ಐ ಯೈಬಿಎಂ ಚರ್ಚ್‌ಗೆ ಶಾಸಕ ಅನಿಲ್ ಭೇಟಿ ನೀಡಿ ಕ್ರಿಸ್‌ಮಸ್ ಹಬ್ಬದ ಶುಭಾಶಯ ಕೋರಿದರು. ಈ ವೇಳೆ ಪುರಸಭಾ ಮಾಜಿ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮುಖಂಡ ಪ್ರದೀಪ್, ಶಿವಮಲ್ಲಪ್ಪ, ಹೇಮಂತ್ ಸೇರಿದಂತೆ ಕ್ರೈಸ್ತ ಬಾಂಧವರಿದ್ದರು.

ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಧರ್ಮಸ್ಥಳ ಸಂಸ್ಥೆ ಸಹಕಾರಿ

ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ



ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಡಿ.28– ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜ್ಞಾನ ವಿಕಾಸ ಕಾರ್ಯಕ್ರಮದಡಿ ಮಹಿಳೆಯರಿಗೆ ಹಲವು ವಿಷಯಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಅರಿವು ಮೂಡಿಸುತ್ತಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ ತಿಳಿಸಿದರು.

ತಾಲೂಕಿನ ಎನ್.ಬೆಳತ್ತೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜ್ಞಾನ ವಿಕಾಸ ಕೇಂದ್ರದಲ್ಲಿ ಆಯೋಜಿಸಿದ್ದ ಅಕ್ಕ ಮಹಾದೇವಿ ಸಂಘದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಧರ್ಮಸ್ಥಳ ಸಂಸ್ಥೆ ಸಹಕಾರಿಯಾಗಿದೆ ಎಂದರು.

ಧರ್ಮಸ್ಥಳ ಸಂಸ್ಥೆ ಮಹಿಳೆಯರಿಗೆ ಬ್ಯಾಂಕ್ ಚಟುವಟಿಕೆ, ಸ್ವಚ್ಛತೆ, ಪೌಷ್ಠಿಕ ಆಹಾರ ಸೇವನೆ, ಕುಡಿಯುವ ನೀರು, ಕಾನೂನು ಅರಿವು, ರೈತರಿಗೆ ಆಧುನಿಕ ಬೇಸಾಯ, ಮಹಿಳೆಯರಿಗೆ ಹೊಲಿಗೆ ತರಬೇತಿ ಸೇರಿದಂತೆ ಹಲವು ಕಾರ್ಯಕ್ರಮ ಕೈಗೊಂಡು ಯಶಸ್ಸು ಕಂಡಿದೆ ಎಂದರು.

ಮಹಿಳೆಯರ ಮೇಲಿನ ದೌರ್ಜನ್ಯ ದಿನದಿಂದ ದಿನಕ್ಕೆ ಕಡಿಮೆಯಾಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಾ ಸಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಾಲೂಕು ಯೋಜನಾಧಿಕಾರಿ ಭಾಸ್ಕರ್ ಮಾತನಾಡಿ, ಸಂಸ್ಥೆಯಿಂದ ಹಲವು ಸಮಾಜ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಶಾಲೆಗಳು, ಅಂಗನವಾಡಿ ಕೇಂದ್ರಗಳು, ದೇವಸ್ಥಾನ, ಚರ್ಚ್, ಮಸೀದಿಗಳಲ್ಲಿ ಸ್ವಚ್ಛತಾ ಕಾರ್ಯ, ಪರಿಸರ ದಿನಾಚರಣೆಯಲ್ಲಿ ಗಿಡ ನೆಡುವುದು, ಶಾಲಾ ಕಾಲೇಜುಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವುದು ಸೇರಿದಂತೆ ಅನೇಕ ಕಾರ್ಯಕ್ರಮ ಕೈಗೊಳ್ಳಲಾಗಿದೆ ಎಂದರು.

ಈ ವೇಳೆ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಿ ಬಹುಮಾನ ವಿತರಿಸಲಾಯಿತು. ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆ ಅಂತರಸಂತೆ ಮೇಲ್ವಿಚಾರಕಿ ಶಾಂತ, ಒಕ್ಕೂಟದ ಅಧ್ಯಕ್ಷ ಮರಿಲಿಂಗಯ್ಯ, ಮುಖಂಡರಾದ ಸೋಮಣ್ಣ, ವೆಂಕಟೇಶ್, ಸೇವಾ ಪ್ರತಿನಿಧಿಗಳು ಮತ್ತು ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಇದ್ದರು.

ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ : ಡಾ.ರಾಜೀವ್



ಬನ್ನೂರಿನಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರೇರಣೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.


ಬನ್ನೂರು, ಡಿ.28– ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಆಯೋಜಿಸುವ ಕಾರ್ಯಾಗಾರಗಳು ಪ್ರತಿ ವಿದ್ಯಾರ್ಥಿಗಳಿಗೂ ಸ್ಫೂರ್ತಿದಾಯಕ ಎಂದು ರೋಟರಿ ಅಧ್ಯಕ್ಷ ಡಾ.ರಾಜೀವ್ ತಿಳಿಸಿದರು.

ಪಟ್ಟಣದ ಖಾಸಗಿ ಸಮುದಾಯ ಭವನದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಭಾನುವಾರ ಆಯೋಜಿಸಿದ್ದ 'ಪ್ರೇರಣೆ' ಸ್ಫೂರ್ತಿದಾಯಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೋಟರಿ ಸಂಸ್ಥೆ ಹಲವು ಸಮಾಜಮುಖಿ ಕೆಲಸ ಮಾಡುತ್ತಾ ಬಂದಿದೆ. ನಮ್ಮ ಹೋಬಳಿಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಈ ಕಾರ್ಯಾಗಾರವನ್ನು ನುರಿತ ಶಿಕ್ಷಣ ತಜ್ಞರಿಂದ ಆಯೋಜಿಸಲಾಗಿದೆ ಎಂದರು.

ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಯಿಂದ ಪ್ರಾರಂಭವಾಗಿ ಉತ್ತರ ಹೇಗೆ ಬರೆಯಬೇಕು ಎನ್ನುವ ಮಾಹಿತಿ ನೀಡಲಾಗುತ್ತದೆ. ಕಾರ್ಯಾಗಾರಕ್ಕೆ 24 ವಿವಿಧ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಆಗಮಿಸಿದ್ದು, ಗಣಿತ, ವಿಜ್ಞಾನ, ಆಂಗ್ಲ ಮಾಧ್ಯಮಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗುತ್ತದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಂಡು ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಬೇಕು ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ಮಾತನಾಡಿ, ರೋಟರಿ ಸಂಸ್ಥೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕೆಲಸ ಕೈಗೊಂಡಿದ್ದು, ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಾರ್ಯಾಗಾರದಲ್ಲಿ 441 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ನಿರ್ದೇಶಕ ಸಿ.ಆರ್.ನಾಗರಾಜಯ್ಯ, ಉಪ ಯೋಜನಾ ಸಮನ್ವಯಾಧಿಕಾರಿ ಶೋಭ, ವಲಯ ಪ್ರತಿನಿಧಿ ಅತ್ತಹಳ್ಳಿ ಕೆಂಪೇಗೌಡ ಸೇರಿದಂತೆ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಸಿದ್ದರಾಜು ನಿಧನ



ಹುಣಸೂರು, ಡಿ.28– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿ ಹಿಂಭಾಗವಿರುವ ಚಾಮುಂಡೇಶ್ವರಿ ದೇವಸ್ಥಾನದ ಪಕ್ಕದಲ್ಲಿ ವಾಸವಿರುವ ಲೇ.ದೇವನಾಯ್ಕ ಅವರ ಪುತ್ರ ಸಿದ್ದರಾಜು(64) ಭಾನುವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಕಲ್ಕುಣಿಕೆ ಲಕ್ಷ್ಮಣತೀರ್ಥ ನದಿ ದಂಡೆಯಲ್ಲಿರುವ ನಾಯಕರ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜನಗೂಡು ನಾಗರಿಕರ ವೇದಿಕೆಯಿಂದ ಪದಾಧಿಕಾರಿಗಳಿಗೆ ಅಭಿನಂದನೆ

2028ಕ್ಕೆ ವಿಜಯೇಂದ್ರ ಸಿಎಂ ಆಗುವ ನಿಟ್ಟಿನಲ್ಲಿ ಪಕ್ಷ ಸಂಘಟಿಸೋಣ

ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ



ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಬ್ಬಣ್ಣ ಸೇರಿದಂತೆ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ನಂಜನಗೂಡು, ಡಿ.28– ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜ್ಯದ ಮುಖ್ಯಮಂತ್ರಿಯಾಗುವ ನಿಟ್ಟಿನಲ್ಲಿ ತಳಮಟ್ಟದಿಂದ ಪಕ್ಷ ಸಂಘಟಿಸೋಣ ಎಂದು ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಕರೆ ನೀಡಿದರು.

ನಗರದ ಮಂಗಳ ಮಂಟಪದಲ್ಲಿ ನಂಜನಗೂಡು ನಾಗರಿಕ ವೇದಿಕೆಯಿಂದ ನಡೆದ ನಂಜನಗೂಡು ತಾಲೂಕಿನಿಂದ ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲೆಗೆ ನೂತನವಾಗಿ ನೇಮಕಗೊಂಡಿರುವ ಜಿಲ್ಲಾ ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮೈಸೂರು ಗ್ರಾಮಾಂತರ ಜಿಲ್ಲೆಗೆ ನೂತನವಾಗಿ ನೇಮಕಗೊಂಡ ಬಿಜೆಪಿ ಪದಾಧಿಕಾರಿಗಳನ್ನು ಪಕ್ಷದಿಂದ ಸನ್ಮಾನಿಸಬೇಕಾಗಿತ್ತು. ಆದರೆ ನಂಜನಗೂಡು ನಾಗರಿಕರ ವೇದಿಕೆಯಿಂದ ಸನ್ಮಾನಿಸುವ ಕಾರ್ಯಕ್ರಮದಲ್ಲೂ ಮಾಜಿ ಶಾಸಕ ಬಿ.ಹರ್ಷವರ್ಧನ್ ಭಾಗಿಯಾಗದಿರುವುದು ಅವರಿಗೆ ಶೋಭೆ ತರುವುದಿಲ್ಲ ಎಂದ ಅವರು, ಬಿಜೆಪಿ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು 6 ತಿಂಗಳಾದರೂ ಪಕ್ಷದಿಂದ ಸನ್ಮಾನಿಸದಿರುವುದು ಪಕ್ಷದ ನೇತೃತ್ವ ವಹಿಸಿರುವವರ ನಿರ್ಲಕ್ಷ್ಯ ತೋರಿಸುತ್ತದೆ. ಮೈಸೂರು ಜಿಲ್ಲೆಗೆ 6 ಮಂದಿ ಪದಾಧಿಕಾರಿಗಳು ಆಯ್ಕೆಯಾಗಿರುವುದು ನಂಜನಗೂಡಿನ ಹೆಮ್ಮೆ. ಅವರನ್ನು ಪಕ್ಷದಿಂದ ಸನ್ಮಾನಿಸುವುದು ಪಕ್ಷ ಸಂಘಟನೆಗೆ ಉಪಯೋಗವಾಗಲಿದೆ. ಆದ್ದರಿಂದ ಪದಾಧಿಕಾರಿಗಳ ಸನ್ಮಾನ ಕಾರ್ಯಕ್ರಮ ಏರ್ಪಡಿಸಿ ಎಂದು ಪಕ್ಷದ ನೇತೃತ್ವ ವಹಿಸಿರುವವರಿಗೆ ಸ್ಪಷ್ಟ ನಿರ್ದೇಶನ ನೀಡಿದ್ದರೂ ಕಾರ್ಯಕ್ರಮ ಏರ್ಪಡಿಸದಿರುವುದರಿಂದ ನಂಜನಗೂಡು ನಾಗರಿಕರ ವೇದಿಕೆಯಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ನಾನು ಕ್ಷೇತ್ರದಲ್ಲಿ 2004ರಿಂದಲೂ ಸಹ ಸಂಘಟನೆಗೆ ಒತ್ತು ನೀಡಿ ಕ್ಷೇತ್ರದ ಜನರ ಸಂಪರ್ಕದಲ್ಲಿದ್ದೇನೆ ಎಂದ ಅವರು ಅಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ 450 ಮತಗಳಿಂದ ಪರಾಜಿತಗೊಂಡಿದ್ದೇನೆ. 2018ರಲ್ಲಿ ಶ್ರೀನಿವಾಸ ಪ್ರಸಾದ್ ಅವರು ಪಕ್ಷಕ್ಕೆ ಬಂದ ಮೇಲೆ ಅವರಿಗೆ ಬೆಂಬಲ ನೀಡಿ ಅವರ ಗೆಲುವಿಗೂ ಶ್ರಮಿಸಿದ್ದೇನೆ. ಆದರೂ ನನಗೆ ಟಿಕೆಟ್ ದೊರಕಲಿಲ್ಲ. ನನಗೆ ಅನ್ಯಾಯವಾದರೂ ಸಹ ಪಕ್ಷ ಬಿಡದೆ ಪಕ್ಷದ ಪರ ಕೆಲಸ ಮಾಡುತ್ತಾ ಬಂದಿದ್ದೇನೆ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಕ್ಷೇತ್ರದಿಂದ ಟಿಕೆಟ್ ಬಯಸಿದ್ದೇನೆ. ಟಿಕೆಟ್ ದೊರಕದಿದ್ದರೂ ನಾನು ಬೇಸರ ಮಾಡಿಕೊಳ್ಳದೆ ಪಕ್ಷ ಸಂಘಟನೆಗೆ ದುಡಿಯುತ್ತೇನೆ. ಮತದಾರರ ಮುಂದೆ ಯಾರು ಹೆಚ್ಚಿಲ್ಲ ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗೆ ಪ್ರತಿಯೊಬ್ಬರೂ ಶ್ರಮಿಸೋಣ. 2028ಕ್ಕೆ ಬಿ.ವೈ.ವಿಜಯೇಂದ್ರ ಅವರು ಮುಖ್ಯಮಂತ್ರಿಯಾಗುವ ನಿಟ್ಟಿನಲ್ಲಿ ನಾವೆಲ್ಲರೂ ತಳಮಟ್ಟದಿಂದ ಪಕ್ಷ ಸಂಘಟಿಸೋಣ ಎಂದರು.

> ನಾನು ಬಿಜೆಪಿ ಜಿಲ್ಲಾಧ್ಯಕ್ಷನಾಗಿ ಆಯ್ಕೆಯಾಗಲು ಸಹಕರಿಸಿದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮೈಸೂರು ಜಿಲ್ಲೆ 7 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ನಿಟ್ಟಿನಲ್ಲಿ ಪಕ್ಷ ಸಂಘಟನೆಗೊಳಿಸುವ ಮಹತ್ತರ ಜವಾಬ್ದಾರಿ ನನ್ನ ಮೇಲಿದೆ. ಆದ್ದರಿಂದ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಎಲ್ಲಾ ಜಾತಿ ಜನಾಂಗದವರನ್ನು ಒಟ್ಟಾಗಿ ಕರೆದುಕೊಂಡು ಪಕ್ಷವನ್ನು ತಳಮಟ್ಟದಿಂದ ಸದೃಢಗೊಳಿಸಲು ಶ್ರಮಿಸುತ್ತೇನೆ. ಅಭ್ಯರ್ಥಿಗಳು ಯಾರು ಎಂಬುದನ್ನು ಬಿಜೆಪಿ ಜಿಲ್ಲಾ ಮತ್ತು ರಾಜ್ಯ ಕೋರ್ ಕಮಿಟಿ ವರಿಷ್ಠರು ತೀರ್ಮಾನಿಸಲಿದ್ದು, ನಂಜನಗೂಡಲ್ಲಿ ಯಾರಿಗೆ ಟಿಕೆಟ್ ದೊರಕಿದರೂ ಅವರ ಗೆಲುವಿಗಾಗಿ ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಬೇಕು.
>
> – ಕುಂಬ್ರಹಳ್ಳಿ ಸುಬ್ಬಣ್ಣ, ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ.

ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ನಂಜನಗೂಡು ತಾಲೂಕಿನಿಂದ ಮೈಸೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ನೇಮಕಗೊಂಡ ಕುಂಬ್ರಳ್ಳಿ ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್, ಜಿಲ್ಲಾ ಕಾರ್ಯದರ್ಶಿಗಳಾಗಿ ನೇಮಕಗೊಂಡ ಸಿ.ಎಂ.ಮಹದೇವಯ್ಯ, ಕೆ.ಎಸ್.ಚಂದ್ರುರನ್ನು ಸನ್ಮಾನಿಸಲಾಯಿತು.

ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಜೆಡಿಎಸ್ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಡಾ.ಶಿವರಾಮು, ಮಂಗಳಾ ಸೋಮಶೇಖರ್, ಬಿಜೆಪಿ ಜಿಲ್ಲಾ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಸಿ.ಎಂ.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಬಿಜೆಪಿ ವರುಣ ಮಂಡಲ ಅಧ್ಯಕ್ಷ ಮಹದೇವಸ್ವಾಮಿ, ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಾಲ ಚಂದ್ರು, ನಗರಸಭಾ ಮಾಜಿ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಮುಖಂಡರಾದ ಅಶೋಕ್, ಎನ್.ಸಿ.ಬಸವಣ್ಣ ಎನ್.ಮಹೇಶ್, ಶ್ರೀನಿವಾಸ ರೆಡ್ಡಿ, ನಾಗೇಂದ್ರ, ಶ್ಯಾಮ್ ಪಟೇಲ್, ನಂಜುಂಡಸ್ವಾಮಿ ಬೊಮ್ಮಾಯಿ, ಮಹೇಶ್, ರಾಜಶೇಖರಪ್ಪ, ಮಧುರಾಜ್, ಉಮೇಶ್ ಮೋದಿ, ಮೂರ್ತಿ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ತಾಪಂ ಮಾಜಿ ಸದಸ್ಯರಾದ ಮಹದೇವನಾಯಕ, ರವೀಂದ್ರ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ
ಸೋಮವಾರ 29 ಡಿಸೆಂಬರ್ 2025

ಮನ್ ಕಿ ಬಾತ್‌ನಲ್ಲಿ 2025ರಲ್ಲಿ ಭಾರತದ ಸಾಧನೆಗಳನ್ನು ಮೆಲಕು ಹಾಕಿದ ಪ್ರಧಾನಿ ಮೋದಿ



ದುಬೈನಲ್ಲಿ ಕನ್ನಡ ಪಾಠಶಾಲೆಗೆ ಶ್ಲಾಘನೆ

ನವದೆಹಲಿ, ಡಿ.28– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್'ನ 129 ನೇ ಸಂಚಿಕೆಯಲ್ಲಿ 2025 ರ ಸಾಲಿನಲ್ಲಿ ಭಾರತ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಐತಿಹಾಸಿಕ ಮೈಲಿಗಲ್ಲುಗಳನ್ನು ಶ್ಲಾಘಿಸಿದರು. 2025 ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುವಂತಹ ಅನೇಕ ಕ್ಷಣಗಳನ್ನು ನಮಗೆ ನೀಡಿದೆ ಎಂದು ಅವರು ಬಣ್ಣಿಸಿದರು.

ರಾಷ್ಟ್ರೀಯ ಭದ್ರತೆ ಮತ್ತು ಹೆಮ್ಮೆಯ ಕ್ಷಣಗಳು: ಈ ವರ್ಷ ನಡೆದ 'ಆಪರೇಷನ್ ಸಿಂದೂರ್' ಪ್ರತಿ ಭಾರತೀಯನ ಹೆಮ್ಮೆಯ ಸಂಕೇತವಾಗಿದೆ. ಇಂದಿನ ಭಾರತವು ತನ್ನ ಭದ್ರತೆಯ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಜಗತ್ತು ಕಂಡಿದೆ. 'ವಂದೇ ಮಾತರಂ' ಗೀತೆಗೆ 150 ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ ದೇಶಾದ್ಯಂತ ಕಂಡುಬಂದ ದೇಶಭಕ್ತಿಯ ಉತ್ಸಾಹವನ್ನು ಮೋದಿ ಸ್ಮರಿಸಿದರು.

ಕ್ರೀಡಾ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆ: 2025ರ ಸಾಲಿನಲ್ಲಿ ಭಾರತದ ಕ್ರೀಡಾ ಲೋಕವು ಅದ್ಭುತ ಸಾಧನೆಗಳಿಗೆ ಸಾಕ್ಷಿಯಾಯಿತು. ಈ ವರ್ಷ ಭಾರತೀಯ ಪುರುಷರ ಕ್ರಿಕೆಟ್ ತಂಡವು ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಂಡರೆ, ಮಹಿಳಾ ಕ್ರಿಕೆಟ್ ತಂಡವು ಮೊದಲ ಬಾರಿಗೆ ವಿಶ್ವಕಪ್ ಗೆಲ್ಲುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿತು. ಇದೇ ವೇಳೆ ಭಾರತದ ಪುತ್ರಿಯರು ದೃಷ್ಟಿಹೀನ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿ ಹೊಸ ದಾಖಲೆ ಬರೆದರು. ಇದರೊಂದಿಗೆ ವಿವಿಧ ವಿಶ್ವ ಚಾಂಪಿಯನ್‌ಶಿಪ್‌ಗಳಲ್ಲಿ ಭಾರತದ ಪ್ಯಾರಾ–ಅಥ್ಲೀಟ್‌ಗಳು ಹಲವಾರು ಪದಕಗಳನ್ನು ಗೆಲ್ಲುವ ಮೂಲಕ, ದೃಢ ಸಂಕಲ್ಪವಿದ್ದರೆ ಯಾವುದೇ ಅಡೆತಡೆಗಳು ಸಾಧನೆಗೆ ಅಡ್ಡಿಯಾಗಲಾರವು ಎಂಬುದನ್ನು ಜಗತ್ತಿಗೆ ಸಾಬೀತುಪಡಿಸಿದರು ಎಂದು ಮೋದಿ ಶ್ಲಾಘಿಸಿದರು.

ಶುಭಾಂಶು ಶುಕ್ಲಾ ಸಾಧನೆಗೆ ಮೆಚ್ಚುಗೆ: ಶುಭಾಂಶು ಶುಕ್ಲಾ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪರಿಸರ ಸಂರಕ್ಷಣೆಯ ಭಾಗವಾಗಿ ಭಾರತದಲ್ಲಿ ಚಿರತೆಗಳ ಸಂಖ್ಯೆ ಈಗ 30ರ ಗಡಿ ದಾಟಿದೆ ಎಂದು ಹೇಳಿದರು.

ಐತಿಹಾಸಿಕ ಧ್ವಜಾರೋಹಣಕ್ಕೆ ರಾಮ ಮಂದಿರ ಸಾಕ್ಷಿ: ಸಾಂಸ್ಕೃತಿಕ ಮತ್ತು ಆರ್ಥಿಕ ರಂಗದಲ್ಲಿ 2025 ಭಾರತಕ್ಕೆ ಅತ್ಯಂತ ಮಹತ್ವದ ವರ್ಷವಾಗಿತ್ತು. ವರ್ಷದ ಆರಂಭದಲ್ಲಿ ಪ್ರಯಾಗ್‌ರಾಜ್‌ನಲ್ಲಿ ನಡೆದ ಭವ್ಯ ಮಹಾಕುಂಭ ಮೇಳವು ತನ್ನ ಆಧ್ಯಾತ್ಮಿಕ ವೈಭವದಿಂದ ಇಡೀ ಜಗತ್ತನ್ನೇ ಬೆರಗುಗೊಳಿಸಿದರೆ, ವರ್ಷಾಂತ್ಯದಲ್ಲಿ ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ಐತಿಹಾಸಿಕ ಧ್ವಜಾರೋಹಣ ಸಮಾರಂಭವು ಪ್ರತಿಯೊಬ್ಬ ಭಾರತೀಯನಲ್ಲೂ ಭಕ್ತಿ ಮತ್ತು ಸಾಂಸ್ಕೃತಿಕ ಹೆಮ್ಮೆಯ ಪರಾಕಾಷ್ಠೆಯನ್ನು ಮೂಡಿಸಿತು. ಇದರ ಜೊತೆಗೆ, 'ಮೇಕ್ ಇನ್ ಇಂಡಿಯಾ' ಅಭಿಯಾನದ ಅಡಿಯಲ್ಲಿ ಸ್ವದೇಶಿ ಉತ್ಪನ್ನಗಳ ಬಗ್ಗೆ ಜನರು ತೋರಿದ ಅಭೂತಪೂರ್ವ ಉತ್ಸಾಹವು ದೇಶದ ಆರ್ಥಿಕತೆಯನ್ನು ಬಲಪಡಿಸುವುದಲ್ಲದೆ, ಭಾರತದ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಜಗತ್ತಿನ ವೇದಿಕೆಯಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ದಿದೆ ಎಂದು ಪ್ರಧಾನಿ ಮೋದಿ ಶ್ಲಾಘಿಸಿದರು.

ದುಬೈನಲ್ಲಿ 'ಕನ್ನಡ ಪಾಠಶಾಲೆ'ಗೆ ಪ್ರಧಾನಿ ಶ್ಲಾಘನೆ: ತಮ್ಮ ಭಾಷಣದಲ್ಲಿ ಪ್ರಧಾನಿಯವರು ದುಬೈನಲ್ಲಿ ನೆಲೆಸಿರುವ ಕನ್ನಡಿಗರ ಮಾತೃಭಾಷಾ ಪ್ರೇಮವನ್ನು ವಿಶೇಷವಾಗಿ ಉಲ್ಲೇಖಿಸಿದರು. ದುಬೈನಲ್ಲಿ ವಾಸಿಸುವ ಕನ್ನಡ ಕುಟುಂಬಗಳು ತಮ್ಮ ಮಕ್ಕಳು ತಂತ್ರಜ್ಞಾನದ ಜಗತ್ತಿನಲ್ಲಿ ಬೆಳೆಯುತ್ತಿದ್ದರೂ, ತಮ್ಮ ಭಾಷೆಯಿಂದ ದೂರವಾಗುತ್ತಿದ್ದಾರೆಯೇ? ಎಂದು ಯೋಚಿಸಿದರು. ಈ ಆಲೋಚನೆಯಿಂದ ಹುಟ್ಟಿದ್ದೇ 'ಕನ್ನಡ ಪಾಠಶಾಲೆ'. ಇಲ್ಲಿ ಮಕ್ಕಳಿಗೆ ಕನ್ನಡ ಓದಲು, ಬರೆಯಲು ಮತ್ತು ಮಾತನಾಡಲು ಕಲಿಸಲಾಗುತ್ತಿದೆ. ಇಂದು ಸಾವಿರಕ್ಕೂ ಹೆಚ್ಚು ಮಕ್ಕಳು ಇದರೊಂದಿಗೆ ತೊಡಗಿಕೊಂಡಿದ್ದಾರೆ ಎಂದು ಹೇಳಿದರು.

ವಿಕಸಿತ ಭಾರತ ಯುವ ಮುಖಂಡರ ಸಂವಾದ: ಯುವಶಕ್ತಿ ಮತ್ತು ಸಾಮಾಜಿಕ ಜಾಗೃತಿಯ ಕುರಿತು ಮಾತನಾಡಿದ ಪ್ರಧಾನಿಯವರು, ಜನವರಿ 12 ರಂದು ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ನಡೆಯಲಿರುವ 'ವಿಕಸಿತ ಭಾರತ ಯುವ ಮುಖಂಡರ ಸಂವಾದ' ಬಗ್ಗೆ ಪ್ರಸ್ತಾಪಿಸಿ, ಯುವಜನರ ನವೀನ ಆಲೋಚನೆಗಳಿಗೆ ವೇದಿಕೆ ಕಲ್ಪಿಸುವ ಈ ಸಂವಾದದಲ್ಲಿ ತಾವು ಭಾಗವಹಿಸುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ, ಒಡಿಶಾದ 'ಮದರ್ ತೆರೇಸಾ' ಎಂದೇ ಖ್ಯಾತರಾದ ಸ್ವಾತಂತ್ರ್ಯ ಹೋರಾಟಗಾರ್ತಿ ಪಾರ್ವತಿ ಗಿರಿ ಅವರು ಬುಡಕಟ್ಟು ಜನಾಂಗದ ಕಲ್ಯಾಣಕ್ಕಾಗಿ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಅವರಿಗೆ ಗೌರವ ಸಲ್ಲಿಸಿದರು. ಅಂತಿಮವಾಗಿ ಸಾರ್ವಜನಿಕ ಆರೋಗ್ಯದ ಬಗ್ಗೆ ಕಳಕಳಿ ವ್ಯಕ್ತಪಡಿಸಿದ ಅವರು, ಯಾವುದೇ ಕಾರಣಕ್ಕೂ ವೈದ್ಯರ ಸಲಹೆಯಿಲ್ಲದೆ ಆಂಟಿಬಯೋಟಿಕ್ ಔಷಧಿಗಳನ್ನು ಸೇವಿಸಬಾರದು ಎಂದು ಜನರಲ್ಲಿ ವಿಶೇಷ ಮನವಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ವೃಷಭ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಬಿಜೆಪಿ ಶಾಸಕ ಸುರೇಶ್‌ಕುಮಾರ್ ಅವರಿಂದ 702 ಕಿ.ಮೀ. ಕನ್ಯಾಕುಮಾರಿಗೆ ಸೈಕಲ್ ಯಾತ್ರೆ



ಬೆಂಗಳೂರು, ಡಿ.28– ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಅವರು ಕನ್ಯಾಕುಮಾರಿಗೆ ಸೈಕಲ್‌ಯಾತ್ರೆ ಮಾಡಿದ್ದಾರೆ. ಬೆಂಗಳೂರಿನ ಸೈಕ್ಲಿಸ್ಟ್‌ಗಳ ಗುಂಪಿನೊಂದಿಗೆ 702 ಕಿಮೀ ದೂರದ ಕನ್ಯಾಕುಮಾರಿಗೆ ಯಶಸ್ವಿಯಾಗಿ ಸೈಕಲ್‌ನಲ್ಲಿ ಪ್ರಯಾಣ ಮಾಡಿದ್ದಾರೆ.

1974 ರಲ್ಲಿ ಮೊದಲ ಬಾರಿಗೆ ಅವರು ಮೊದಲ ಬಾರಿಗೆ ಸೈಕಲ್ ಯಾತ್ರೆ ನಡೆಸಿದ್ದರು. ಇದಾದ ಐವತ್ತು ವರ್ಷಗಳ ಬಳಿಕ ಇದೀಗ ಮತ್ತೆ ಯಶಸ್ವಿಯಾಗಿ ಸೈಕಲ್ ಯಾತ್ರೆ ಮುಗಿಸಿದ್ದಾರೆ. ಕನ್ಯಾಕುಮಾರಿ ತಲುಪಿದ ನಂತರ ಮಾತನಾಡಿದ ಸುರೇಶ್ ಕುಮಾರ್, ಮಂಗಳವಾರ 51 ವರ್ಷಗಳ ಹಿಂದೆ ವೆಂಕಟೇಶ್ ಮತ್ತು ಸೋಮನಾಥ್ ಎಂಬ ಇಬ್ಬರು ಗೆಳೆಯರೊಂದಿಗೆ ಸೈಕಲ್ ಯಾತ್ರೆ ಮಾಡಿದ್ದೆ. ಅದರ 50ನೇ ವರ್ಷಾಚರಣೆಯ ನೆನಪಿಗಾಗಿ ಮತ್ತೆ ಸ್ನೇಹಿತರೊಂದಿಗೆ ಕನ್ಯಾಕುಮಾರಿಗೆ ಸೈಕಲ್‌ನಲ್ಲಿಯೇ ಪ್ರಯಾಣ ಮಾಡಲು ಯೋಜಿಸಿದ್ದೆವು. ಆದರೆ ಅನಾರೋಗ್ಯದ ಹಿನ್ನೆಲೆಯಲ್ಲಿ ಅದು ಸಾಧ್ಯವಾಗಿರಲಿಲ್ಲ. ಅದು ಈಗ ಸಾಧ್ಯವಾಗಿದ್ದು, ನನ್ನ ಜೀವನದಲ್ಲಿ ಇದೊಂದು ಮಹತ್ವದ ಮೈಲಿಗಲ್ಲು ಆಗಿದ್ದು, ಟೀಮ್ ವರ್ಕ್‌ಗೆ ಸಾಕ್ಷಿ ಎಂದು ಬಣ್ಣಿಸಿದ್ದಾರೆ.

ಕಾರವಾರದಲ್ಲಿ ರಾಷ್ಟ್ರಪತಿ ಮುರ್ಮು ಸಬ್‌ಮೆರಿನ್ ಯಾನ





ಕಾರವಾರ, ಡಿ.28– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ಮೊದಲಬಾರಿ ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕದಂಬ ನೌಕಾನೆಲೆಗೆ ಆಗಮಿಸಿ ಅರಬ್ಬಿ ಸಮುದ್ರದಲ್ಲಿ ಐಎನ್‌ಎಸ್ ವಾಗ್ಶೀರ್ ಸಬ್‌ಮೆರಿನ್‌ನಲ್ಲಿ ಪ್ರಯಾಣಿಸಿದರು. ದ್ರೌಪದಿ ಮುರ್ಮು ಅವರು ಜಲಾಂತರ್ಗಾಮಿಯಲ್ಲಿ ಪ್ರಯಾಣಿಸಿದ ಭಾರತದ ಎರಡನೇ ರಾಷ್ಟ್ರಪತಿಯಾಗಿದ್ದಾರೆ. ಈ ಹಿಂದೆ ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರು ಸಬ್‌ಮೆರಿನ್‌ನಲ್ಲಿ ಸಂಚರಿಸಿದ್ದರು.

ಐಎನ್‌ಎಸ್ ವಾಗ್ಶೀರ್, ಕಲ್ವರಿ ಶ್ರೇಣಿಯ ಡೀಸೆಲ್–ಎಲೆಕ್ಟ್ರಿಕ್ ಜಲಾಂತರ್ಗಾಮಿ ನೌಕೆಯಾಗಿದೆ. ಇದು ಫ್ರೆಂಚ್ ಸ್ಕಾರ್ಪಿನ್ ವಿನ್ಯಾಸದಲ್ಲಿ ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್‌ನಲ್ಲಿ ಸಂಪೂರ್ಣವಾಗಿ ಸ್ವದೇಶಿಯಾಗಿ ನಿರ್ಮಾಣಗೊಂಡ ಅತ್ಯಾಧುನಿಕ ಸಬ್ ಮೆರಿನ್ ಆಗಿದೆ.

ಈ ಸಬ್ ಮೆರಿನ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು 2025ರ ಜನವರಿ 15ರಂದು ಲೋಕಾರ್ಪಣೆ ಮಾಡಿದ್ದರು. ಸಮುದ್ರದ ಆಳದಲ್ಲಿ ಗಂಟೆಗೆ ಗರಿಷ್ಠ 37 ಕಿ.ಮೀ (20 ನಾಟ್ಸ್) ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದ್ದು, ಸುಮಾರು 350 ಮೀಟರ್ ಆಳದಲಿ ಸಂಚರಿಸಬಲ್ಲದು.

ಏಷ್ಯದ ಅತಿದೊಡ್ಡ ನೌಕಾನೆಲೆ ಆಗಿರುವ ಕಾರವಾರದ ಕದಂಬ ನೌಕಾನೆಲೆ ಫೇಸ್–2 ಕಾಮಗಾರಿ ಸಹ ಮುಕ್ತಾಯವಾಗಿದ್ದು ಯುದ್ಧ ಹಡಗುಗಳು, ಸಬ್‌ಮೆರಿನ್‌ಗಳ ನಿಲ್ದಾಣ ತಾಣವಾಗಿದೆ. ರಿಪೇರಿ ಯಾರ್ಡ್ ಸಹ ಇದೇ ಭಾಗದಲ್ಲಿ ನಿರ್ಮಾಣವಾಗುತ್ತಿದೆ. ಇದೀಗ ರಾಷ್ಟ್ರಪತಿ ಮುರ್ಮು ಭೇಟಿ ನೀಡಿ ಸಬ್‌ಮೆರಿನ್‌ನಲ್ಲಿ ಒಂದು ತಾಸುಗಳ ಐತಿಹಾಸಿಕ ಪ್ರಯಾಣ ನಡೆಸಿದರು.

ಇದಕ್ಕೂ ಮುನ್ನ ಕಾರವಾರದ ಕದಂಬ ನೌಕಾನೆಲೆಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಅವರು ಬರಮಾಡಿಕೊಂಡರು.

ಈ ವೇಳೆ ಪ್ರಾದೇಶಿಕ ಆಯುಕ್ತೆ ಜಯಂತಿ, ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ. ಎಡಿಜಿಪಿ ಹಿತೇಂದ್ರ, ಐಜಿಪಿ ಅಮಿತ್ ಸಿಂಗ್, ಎಸ್ಪಿ ದೀಪನ್ ಎಂ. ಎನ್. ಹಾಗೂ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ, ಕಾರವಾರ ನೇವಲ್ ಬೇಸ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್ ರಿಯರ್ ಅಡ್ಮಿರಲ್ ವಿಕ್ರಂ ಮೆನನ್ ಹಾಗೂ ನೌಕಾಪಡೆಯ ಹಿರಿಯ ಅಧಿಕಾರಿಗಳು ಇದ್ದರು.

ಕರ್ನಾಟಕ ಏಕೀಕರಣಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಎಂದಿಗೂ ಮರೆಯಬಾರದು

ಇತಿಹಾಸ ವಿಶ್ಲೇಷಕ ಧರ್ಮೇಂದ್ರ ಕುಮಾರ್



39ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಇತಿಹಾಸ ವಿಶ್ಲೇಷಕ ಧರ್ಮೇಂದ್ರ ಕುಮಾರ್ ಸೇರಿದಂತೆ ಅರಸು ಯುವ ವೇದಿಕೆ ಪದಾಧಿಕಾರಿಗಳನ್ನು ಕಾಣಬಹುದು.

ಮೈಸೂರು, ಡಿ.28(ಎಸ್‌ಪಿಎನ್)– ಕರ್ನಾಟಕ ಏಕೀಕರಣಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಎಂದಿಗೂ ನಾವು ಮರೆಯಬಾರದು ಎಂದು ಇತಿಹಾಸ ವಿಶ್ಲೇಷಕ ಧರ್ಮೇಂದ್ರ ಕುಮಾರ್ ಹೇಳಿದರು.

ಮೈಸೂರು ಜಗನ್ಮೋಹನಾ ಅರಮನೆಯಲ್ಲಿ ಅರಸು ಯುವಜನ ವೇದಿಕೆ ವತಿಯಿಂದ ಏರ್ಪಡಿಸಿದ್ದ 39ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಐತಿಹಾಸಿಕ ಬೆಂಗಳೂರನ್ನು ನಾಡಪ್ರಭು ಕೆಂಪೇಗೌಡ ಕಟ್ಟಿದರು. ಇಂದು ಬೃಹತಾಕಾರವಾಗಿ ಬೆಳೆದಿದೆ. ಹಳೆ ಮೈಸೂರು ಭಾಗದಲ್ಲಿ ಸುಲಭ ಆಡಳಿತಕ್ಕಾಗಿ ಬ್ರಿಟಿಷರು ಬೆಂಗಳೂರಿನ ಕಂಟ್ರೋಲ್ಮೆಂಟ್ ಕಟ್ಟಿದರು. ಈ ಜಾಗದಲ್ಲಿ ಅನೇಕ ಕನ್ನಡ ಪರ ಹೋರಾಟಗಳು ಅಂದಿನ ಕಾಲಕ್ಕೆ ನಡೆದಿವೆ ಎಂದರು.

ಇಂದಿನ ಯುವ ಪೀಳಿಗೆ ನವಂಬರ್ 1ರ ಮಹತ್ವ ತಿಳಿದುಕೊಂಡಿಲ್ಲ. ಕನ್ನಡಿಗರು ಏಕೀಕರಣಗೊಂಡು 1956ರಲ್ಲಿ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಈ ಮೊದಲು ಕನ್ನಡ ಮಾತನಾಡುವವರ ಸುಮಾರು ಇಪ್ಪತ್ತು ಪ್ರತ್ಯೇಕ ಆಡಳಿತ ಭಾಗಗಳಲ್ಲಿ ಹಂಚಿಹೋಗಿದ್ದರು. ಇವರನ್ನೆಲ್ಲಾ ಒಗ್ಗೂಡಿಸಿ, ಮೈಸೂರು ರಾಜ್ಯ ಸ್ಥಾಪಿಸಿದ ಕೀರ್ತಿ ಕನ್ನಡ ಪರ ಹೋರಾಟಗಾರರಿಗೆ ಸಲ್ಲಬೇಕು ಎಂದು ಹಲವು ಮಹಾನೀಯರ ಹೆಸರುಗಳನ್ನು ಉಲ್ಲೇಖಿಸಿದರು.


ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಕನ್ನಡ ಏಕೀಕರಣಕ್ಕಾಗಿ ದುಡಿದ ಗಣ್ಯರಲ್ಲಿ ಪ್ರಮುಖರು. ಅಂದು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಅನೇಕ ನಾಯಕರಿಗೆ ಕರ್ನಾಟಕ ಏಕೀಕರಣವೂ ಮುಖ್ಯವಾಗಿತ್ತು. ಕರ್ನಾಟಕ ಏಕೀಕರಣ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಆಲೂರು ವೆಂಕಟರಾಯರು ಕರ್ನಾಟಕ ಗತವೈಭವ ಪುಸ್ತಕ ರಚಿಸಿ, ಕನ್ನಡಿಗರಲ್ಲಿ ಸ್ವಾಭಿಮಾನ ಬಿತ್ತಿದ ಪ್ರಸಂಗ ಎಂದರು.

ಮ.ರಾಮಮೂರ್ತಿ ಅವರು ಹಳದಿ ಮತ್ತು ಕೆಂಪು ಬಣ್ಣದ ಕನ್ನಡ ಬಾವುಟದ ನಿರ್ಮಾತೃ. 1965ರಲ್ಲಿ ಈ ಧ್ವಜವನ್ನು ರೂಪಿಸಲಾಯಿತು. ಅರಿಶಿನ–ಕುಂಕುಮದ ಬಣ್ಣಗಳನ್ನು ಒಳಗೊಂಡ ಈ ಧ್ವಜವು ಕನ್ನಡಿಗರ ಅಸ್ಮಿತೆ, ಸಂಸ್ಕೃತಿ ಮತ್ತು ಬದುಕಿನ ಸಂಕೇತವಾಗಿ ಗುರುತಿಸಿಕೊಂಡಿದೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ 20ಕ್ಕೂ ಹೆಚ್ಚು ಭಾಷಾವಾರು ರಾಜ್ಯಗಳು ಉದಯವಾದವು. ಅದರಲ್ಲಿ ಮೈಸೂರು ರಾಜ್ಯವೂ ಒಂದು. ಕ್ರಮೇಣ ಮೈಸೂರು ರಾಜ್ಯದ ಹೆಸರನ್ನು ಬದಲಿಸಿ, 1973ರಲ್ಲಿ ಡಿ.ದೇವರಾಜ ಅರಸು ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ಎಂದು ಮರು ನಾಮಕಾರಣ ಮಾಡಲಾಯಿತು. ಅಂದಿನಿಂದ ಮೈಸೂರು ರಾಜ್ಯದ ಹೆಸರು ಕರ್ನಾಟಕವಾಗಿ ಬದಲಾಯಿತು. ಇದರ ಹಿಂದೆ ನೂರಾರು ಚಿಂತಕರು, ಹೋರಾಟಗಾರರು ದುಡಿದಿದ್ದು, ಅವರೆಲ್ಲರ ತ್ಯಾಗ, ಬಲಿದಾನವನ್ನು ಇಂದಿನ ಪೀಳಿಗೆ ನೆನೆಯಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಹಲವು ಸಾಧಕರನ್ನು ಸನ್ಮಾನಿಸಲಾಯಿತು. ಅರಸು ಯುವವೇದಿಕೆ 2026ರ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ವೇದಿಕೆಯಲ್ಲಿ ಹಿರಿಯ ವೈದ್ಯ ಡಾ.ಪ್ರಶಾಂತ್ ಅರಸ್, ಅರಸು ಯುವಜನವೇದಿಕೆ ಅಧ್ಯಕ್ಷ ಪುನೀತ್ ರಾಜೇಅರಸ್, ಅರಸು ಮಂಡಳಿ ಸಂಘದ ಅಧ್ಯಕ್ಷ ಎಂ.ಎ.ಶ್ರೀಕಾಂತ್ ರಾಜೇ ಅರಸ್, ಅರಸು ಮಂಡಲಿ ಸಹಕಾರ ಸಂಘದ ಅಧ್ಯಕ್ಷ ಎ.ಆರ್.ಮಲ್ಲರಾಜೇಅರಸ್, ಅರಸು ಅಸೋಸಿಯೇಷನ್ ಅಧ್ಯಕ್ಷ ಎನ್.ಜಿ.ಸುಬ್ರಹ್ಮಣ್ಯ ಅರಸ್, ಬಿ.ಎಸ್.ಶ್ರೀಧರ್ ರಾಜೇಅರಸ್, ಮೋಹನ್ ರಾಜೇಅರಸ್ ಸೇರಿದಂತೆ ಇತರೆ ಮುಖಂಡರು ಹಾಜರಿದ್ದರು.


ಹುಟ್ಟುಹಬ್ಬದ ಶುಭಾಶಯ



ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರಿಗೆ ಗುರುರಾಜ್, ಶ್ರೀಧರ್, ಮಾಯಪ್ಪ, ಉದಯ್ ಕುಮಾರ್, ಸುಪ್ರಿತ್, ಕಾರ್ತಿಕ್, ಪ್ರವೀಣ್, ಮಂಜು, ರವಿ ಕುಮಾರ್ ಹಾಗೂ ಹಿನಕಲ್ ಗ್ರಾಮಸ್ಥರು ಹುಟ್ಟುಹಬ್ಬದ ಶುಭಾಶಯ ಕೋರಿದರು

ದೇಶದ ಸಂವಿಧಾನ ಉಳಿಯಲು ಕಾಂಗ್ರೆಸ್ ಗಟ್ಟಿಯಾಗಿ ನಿಲ್ಲಬೇಕು

ಮಾಜಿ ಸಚಿವ ಕಿಮ್ಮನೆ ರತ್ನಾಕರ ಕರೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ 140ನೇ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಿಸಲಾಯಿತು.

ಮೈಸೂರು, ಡಿ.28(ಎಂಕೆ)– ಕಾಂಗ್ರೆಸ್ ಪಕ್ಷದ ವಿಚಾರ ಮತ್ತು ಸಿದ್ಧಾಂತಗಳನ್ನು ಜನರಿಗೆ ತಲುಪಿಸಿದಾಗ ಮಾತ್ರವೇ ಸಂಸ್ಥಾಪನಾ ದಿನಕ್ಕೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ ಕರೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಭಾನುವಾರ ಆಯೋಜಿಸಿದ್ದ 140ನೇ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನ ಉಳಿಯಬೇಕಿದ್ದರೆ ಕಾಂಗ್ರೆಸ್ ಗಟ್ಟಿಯಾಗಿ ನಿಲ್ಲಬೇಕು. ಕಾಂಗ್ರೆಸ್ ಗಟ್ಟಿಯಾಗಿ ನಿಲ್ಲಬೇಕಾದರೆ, ಕಾಂಗ್ರೆಸ್ ಸಿದ್ಧಾಂತಗಳನ್ನು ಜನರಿಗೆ ತಿಳಿಸಬೇಕು ಎಂದರು.

1885 ರಿಂದ ಇಲ್ಲಿಯವರೆಗೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಕಾಂಗ್ರೆಸ್ ಪ್ರಬಲವಾಗಿ ವಿರೋಧಿಸುತ್ತಾ ಬಂದಿದೆ. ಕಾಂಗ್ರೆಸ್ ಒಕ್ಕೂಟದ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿದ್ದರೆ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಒಕ್ಕೂಟ ವ್ಯವಸ್ಥೆಯನ್ನು ಬುಡ ಸಮೇತ ಕಿತ್ತುಹಾಕುವ ನಿಲುವು ಹೊಂದಿವೆ. ಜಾತಿ ವಿರುದ್ಧ ಮಾತನಾಡಿದರೆ ದೇಶದ್ರೋಹವೆಂದು ಬಿಂಬಿಸುವ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡೆಯನ್ನು ಕಂಡೇ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧಧರ್ಮ ಸ್ವೀಕಾರ ಮಾಡಿದ್ದು ಎಂದು ತಿಳಿಸಿದರು.

ಮಹಾತ್ಮ ಗಾಂಧೀಜಿ ಅವರನ್ನು ಕೊಲೆ ಮಾಡಿದ ಗೋಡ್ಸೆಯನ್ನು ಹೊಗಳುವ ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಗಾಂಧಿಗಿಂತ ಅಂಬೇಡ್ಕರ್ ಅವರ ಮೇಲೆ ಹತ್ತು ಪಟ್ಟು ಸಿಟ್ಟು ಜಾಸ್ತಿಯೇ ಇದೆ. ಆದರೆ, ಅಂಬೇಡ್ಕರ್ ಅವರನ್ನು ನೇರವಾಗಿ ವಿರೋಧಿಸಿದರೆ ತಮ್ಮ ಸ್ಥಿತಿ ಏನಾಗಬಹುದು ಎಂಬ ಅರಿವಿರುವ ಕಾರಣದಿಂದಲೇ ಸೈದ್ಧಾಂತಿಕವಾಗಿ ಅಂಬೇಡ್ಕರ್ ಅವರನ್ನು ವಿರೋಧ ಮಾಡುತ್ತಿದ್ದಾರೆ. ಹಿಂದೂ ಮಹಾಸಭಾ ಮೂಲಕ ಸಾವರ್ಕರ್ ದೇಶವನ್ನು ಎರಡು ಭಾಗ ಮಾಡಲು ಹೊರಟರೆ, ಗಾಂಧೀಜಿ ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವ ಮೂಲಕ ಒಂದುಗೂಡಿಸುತ್ತಿದ್ದರು. ಆದ್ದರಿಂದ ಕಾಂಗ್ರೆಸ್ ಕಾರ್ಯಕರ್ತರು, ಮಹಾತ್ಮ ಗಾಂಧಿ ಹಾಗೂ ಡಾ.ಅಂಬೇಡ್ಕರ್ ಅವರ ಒಡನಾಡಿಗಳು ಬರೆದ ಪುಸ್ತಕಗಳನ್ನು ಓದಿ ಜನರಿಗೆ ತಿಳಿಸಿದಾಗ ಮಾತ್ರ ನಿಜವಾದ ಸತ್ಯಗಳು ಸಮಾಜಕ್ಕೆ ತಿಳಿಯುತ್ತವೆ ಎಂದು ಹೇಳಿದರು.

ಸಂಸ್ಕೃತ ಭಾಷೆಯನ್ನು ರಾಷ್ಟ್ರ ಭಾಷೆಯನ್ನಾಗಿಸಿ, ಹಿಂದಿ ಭಾಷೆಯನ್ನು ವ್ಯವಹಾರಿಕ ಭಾಷೆಯಾಗಿ ಬಳಸಬೇಕು ಎಂಬುದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಲ್ಲಿದೆ. ಮೀಸಲಾತಿ ವಿರೋಧಿ ಬಿಜೆಪಿ ಅಧಿಕಾರದಲ್ಲಿದ್ದರೂ ದಲಿತರ ಕೇರಿಗಳು ಕಡಿಮೆಯಾಗಿಲ್ಲ. ಆದರೆ, ಪ್ರತೀ ತಾಲೂಕಿನಲ್ಲೂ ಬಿಜೆಪಿಗೆ 200 ಕೋಟಿ ರೂ. ಆಸ್ತಿ ಇದೆ. ಕಳೆದ 12 ವರ್ಷಗಳಲ್ಲಿ 10 ಸಾವಿರ ಕೋಟಿ ರೂ.ಗಳಿಗೂ ಅಧಿಕ ಸಂಪಾದನೆ ಮಾಡಿದ್ದಾರೆ. ಇದೆಲ್ಲಾ ಹೇಗೆ ಸಾಧ್ಯವಾಯಿತು ಎಂದು ಪಶ್ನಿಸಿದರು.

ಇದೇ ವೇಳೆ ಹಿರಿಯ ಐವರು ಮಂದಿ ಕಾಂಗ್ರೆಸಿಗರನ್ನು ಸನ್ಮಾನಿಸಲಾಯಿತು. ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಶಾಸಕರಾದ ಕೆ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಎಡತಲೇ ಮಂಜುನಾಥ್, ಶ್ರೀಮತಿ ಲತಾ, ಈಶ್ವರ್ ಚಕ್ಕಡಿ, ಶಿವಪ್ರಸಾದ್, ತಲಕಾಡು ಮಂಜುನಾಥ್, ಸೇವಾದಳದ ಅಧ್ಯಕ್ಷ ಶಾಮ ಯೋಗೀಶ್, ಎಂ.ಕೆ ಅಶೋಕ್, ರವಿ ಮಂಚೇಗೌಡನಕೊಪ್ಪಲು, ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚಂದನ್ ಕುಮಾರ್, ಮೋಹನ್, ರಮೇಶ್, ಸೋಮಶೇಖರ್ ಮತ್ತಿತರರಿದ್ದರು.

ರಾಜ್ಯ ಲೋಕಾಯುಕ್ತ ಇತಿಹಾಸದಲ್ಲಿ ಇದೇ ಮೊದಲು

ಭ್ರಷ್ಟಾಚಾರ ಆರೋಪ, ಒಂದೇ ತಾಲೂಕಿನ ಎಲ್ಲಾ 25 ಗ್ರಾಪಂಗಳ ವಿರುದ್ಧ ದೂರು ದಾಖಲು

ಬೆಂಗಳೂರು, ಡಿ.28– ದುರಾಡಳಿತ ಮತ್ತು ವ್ಯಾಪಕ ಭ್ರಷ್ಟಾಚಾರ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಎಲ್ಲಾ 25 ಗ್ರಾಮ ಪಂಚಾಯಿತಿಗಳ ವಿರುದ್ಧ ಇದೇ ಮೊದಲ ಬಾರಿಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ ವೀರಪ್ಪ ಅವರು ಸ್ವಯಂ ಪ್ರೇರಿತ ದೂರು ದಾಖಲಿಸಿದ್ದಾರೆ. ಕರ್ನಾಟಕ ಲೋಕಾಯುಕ್ತ ಇತಿಹಾಸದಲ್ಲಿ ಇಂತಹ ಕ್ರಮ ಕೈಗೊಂಡಿರುವುದು ಇದೇ ಮೊದಲು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್‌ಗಳು, ಡೇಟಾ ಎಂಟ್ರಿ ಆಪರೇಟರ್‌ಗಳು, ತಾಂತ್ರಿಕ ಸಹಾಯಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಿರಿಯ ಎಂಜಿನಿಯರ್‌ಗಳ ವಿರುದ್ಧ ದೂರು ದಾಖಲಿಸಲಾಗಿದೆ.

ಇಬ್ಬರು ಪಿಡಿಒ ಅಮಾನತು: ಶ್ರೀನಿವಾಸಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸರ್ವೇಶ್ ಕೆ ವಿರುದ್ಧವೂ ದೂರು ದಾಖಲಾಗಿದೆ. ಇಬ್ಬರು ಪಿಡಿಒಗಳನ್ನು ಅಮಾನತುಗೊಳಿಸಲಾಗಿದೆ. ಬೋರ್‌ವೆಲ್ ದುರಸ್ತಿಗಾಗಿ ಗುತ್ತಿಗೆದಾರರಿಗೆ 68 ಲಕ್ಷ ರೂ. ದುರ್ಬಳಕೆ ಮತ್ತು 6.69 ಲಕ್ಷ ರೂ. ಬಿಡುಗಡೆ ಮಾಡದ ಅರಿಕುಂಟೆ ಪಿಡಿಒ ಎ.ಎನ್.ಶಂಕರಪ್ಪ ಮತ್ತು ಕರ್ತವ್ಯ ಲೋಪಕ್ಕಾಗಿ ನಂಬಿಹಳ್ಳಿ ಪಿಡಿಒ ಮಂಜುನಾಥ್ ಎನ್.ಕೆ ಅವರನ್ನು ಅಮಾನತುಗೊಳಿಸಲಾಗಿದೆ.

ಸರ್ವೇಶ್ ಅವರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರ ಸೆಕ್ಷನ್ 232 (ಎ) ಅನ್ನು ಉಲ್ಲಂಘಿಸಿದ್ದಾರೆ ಎಂದು ಉಪ ಲೋಕಾಯುಕ್ತರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ

ಮಾಡದ ಕಾಮಗಾರಿಗಳಿಗೆ ಹಣ ಬಿಡುಗಡೆ: ದಳಸನೂರು ಗ್ರಾ.ಪಂ.ನಲ್ಲಿ 2019–2020ರಲ್ಲಿ ರಸ್ತೆ ನಿರ್ಮಾಣಕ್ಕೆ 3 ಲಕ್ಷ ರೂ. ವೆಚ್ಚ ಮಾಡಲಾಗಿತ್ತು. ಆದರೆ ಅದು ಅಸ್ತಿತ್ವದಲ್ಲಿಲ್ಲ. ಚರಂಡಿಗಳ ಹೂಳು ತೆಗೆಯಲು ಹಣ ಪಾವತಿಸಲಾಗಿದೆ ಆದರೆ ಯಾವುದೇ ಕೆಲಸ ಮಾಡಿಲ್ಲ ಎಂದು ದೂರುದಾರರೊಬ್ಬರು ಉಲ್ಲೇಖಿಸಿದ್ದಾರೆ. ಅಲ್ಲದೇ ಮನ್ರೇಗಾ ಅಡಿಯಲ್ಲಿ ಮಾಡದ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. 15ನೇ ಹಣಕಾಸು ಕಾರ್ಯಕ್ರಮದಡಿ ಚರಂಡಿಗಳ ಸ್ವಚ್ಛತೆ ಮತ್ತು ನೈರ್ಮಲ್ಯ ನಿರ್ವಹಣೆಗೆ ಯಾವುದೇ ಲೆಕ್ಕಪತ್ರಗಳನ್ನು ನಿರ್ವಹಿಸಿಲ್ಲ. ಆರರಲ್ಲಿ ಮೂರು ಕೆರೆಗಳು ಒತ್ತುವರಿಯಾಗಿದ್ದು, ಕಾಮಗಾರಿ ಅನುಷ್ಠಾನಕ್ಕೆ ಕೊಟೇಶನ್ ಇಲ್ಲದೇ ಬಿಲ್ ಕ್ಲಿಯರ್ ಮಾಡಲಾಗಿದೆ.

10,000 ರೂ.ಗಿಂತ ಹೆಚ್ಚಿನ ವೆಚ್ಚಕ್ಕೆ ಟೆಂಡರ್ ಆಹ್ವಾನಿಸಬೇಕು ಎಂಬ ಆದೇಶ ಇದ್ದರೂ ಪ್ರತಿ ತಿಂಗಳು ಆ ಹಣಕ್ಕೆ ಎರಡರಿಂದ ನಾಲ್ಕು ಬಿಲ್‌ಗಳನ್ನು ಮಾಡಲಾಗಿದೆ ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಬಿಡುಗಡೆಯಾದ ಅನುದಾನ, ವಿಕಲಚೇತನರು ಮತ್ತು ಮೇಕೆ ಮತ್ತು ಗೋಶಾಲೆಗಳ ನಿರ್ಮಾಣದ ಬಗ್ಗೆ ಯಾವುದೇ ವಿವರಗಳನ್ನು ಒದಗಿಸಲಾಗಿಲ್ಲ.

ಉದ್ಯೋಗಿಗಳ ಸಂಬಳಕ್ಕಿಂತ ಹೆಚ್ಚಿನ ವಹಿವಾಟು: ಉದ್ಯೋಗಿಗಳ ಫೋನ್‌ನಲ್ಲಿರುವ ಡಿಜಿಟಲ್ ಪೇಮೆಂಟ್ ಆಪ್‌ಗಳನ್ನು ಪರಿಶೀಲಿಸಿದಾಗ ನಿಜವಾದ ಸಂಬಳಕ್ಕಿಂತ ಹೆಚ್ಚಿನ ವಹಿವಾಟು ನಡೆದಿರುವುದು ಕಂಡುಬಂದಿದೆ. ಜಲ ಜೀವನ್ ಮಿಷನ್ ಅಡಿಯಲ್ಲಿ ನಡೆದಿರುವ ಕಾಮಗಾರಿಯಲ್ಲಿಯೂ ಭ್ರಷ್ಟಾಚಾರ ನಡೆದಿದೆ. ರಸ್ತೆಗಳು ಮತ್ತು ಕಸ ಸಂಗ್ರಹಿಸುವ ವಾಹನಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಬೋರ್‌ವೆಲ್‌ಗಳ ನಿರ್ವಹಣೆ ಕುರಿತು ಯಾವುದೇ ಮಾಹಿತಿ ನೀಡಿಲ್ಲ.

ಸೆ.30 ಮತ್ತು ಡಿ.2 ರಂದು ಗ್ರಾಮ ಪಂಚಾಯಿತಿಗಳಿಗೆ ದಿಢೀರ್ ಭೇಟಿ ನಂತರ ಉಪ ಲೋಕಾಯುಕ್ತರು ಈ ಕ್ರಮ ಕೈಗೊಂಡಿದ್ದಾರೆ. ಈಗ ಅವರು ಜಿಲ್ಲಾಡಳಿತ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸೇರಿದಂತೆ ಇಡೀ ವ್ಯವಸ್ಥೆಯನ್ನು ಪರಿಶೀಲಿಸುತ್ತಿದ್ದಾರೆ.

ಇದು ಕೇವಲ ಆರಂಭವಾಗಿದ್ದು, ಅಗತ್ಯವಿರುವವರಿಗೆ ಸಹಾಯ ಮಾಡಲು ಜಿಲ್ಲಾ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಸುಧಾರಣೆಗಳನ್ನು ತರಲು, ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಸರಿಪಡಿಸಲು ತುಮಕೂರು ಮತ್ತು ಮಂಡ್ಯದಂತಹ ಜಿಲ್ಲೆಗಳಲ್ಲಿ ಮುಂದಿನ ಕ್ರಮ ಆರಂಭಿಸಲು ಯೋಜಿಸಿದ್ದಾರೆ.

ಚರಂಡಿಗಳ ನಿರ್ವಹಣೆ, ಕುಡಿಯುವ ನೀರು ಸರಬರಾಜು, ಬೀದಿ ದೀಪಗಳು, ಘನ ತ್ಯಾಜ್ಯ ನಿರ್ವಹಣೆ, ಮಾಲಿನ್ಯ ಮತ್ತು ಅತಿಕ್ರಮಣದಿಂದ ಜಲಮೂಲಗಳ ಸಂರಕ್ಷಣೆ ಮತ್ತು ಅಕ್ರಮ ಗಣಿಗಾರಿಕೆ ಮತ್ತಿತರ ವಿಷಯಗಳ ಕುರಿತು ನ್ಯಾಯಮೂರ್ತಿ ವೀರಪ್ಪ ಅವರು ಪರಿಶೀಲಿಸುತ್ತಿದ್ದಾರೆ.

ರಸ್ತೆ ಸುರಕ್ಷತೆ, ತುರ್ತು ಪರಿಸ್ಥಿತಿ ಕುರಿತು ನಾಗರಿಕರಿಗೆ ಜಾಗೃತಿ



ಮೈಸೂರಿನ ಮಣಿಪಾಲ್ ಆಸ್ಪತ್ರೆ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಡಿ.28– ಮೈಸೂರಿನ ಮಣಿಪಾಲ್ ಆಸ್ಪತ್ರೆ, ನಗರ ಸಂಚಾರ ಪೊಲೀಸ್, ದೆಹಲಿ ಪಬ್ಲಿಕ್ ಶಾಲೆ ಸಹಯೋಗದೊಂದಿಗೆ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ರಸ್ತೆ ಸುರಕ್ಷತೆ ಮತ್ತು ತುರ್ತು ಪರಿಸ್ಥಿತಿ ಕುರಿತ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಸ್ತೆ ಅಪಘಾತವಾದಾಗ(RTA) ಗಾಯಗೊಂಡವರ ಜೀವ ಉಳಿಸುವ ಹೋರಾಟವು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆ ತರುವುದಕ್ಕಿಂತ ಮೊದಲೇ ಶುರುವಾಗುತ್ತದೆ. ಘಟನೆ ಸಂಭವಿಸಿದ ಕೂಡಲೇ ಗಾಯಾಳುಗಳ ರಕ್ಷಣೆಗೆ ಆದ್ಯತೆ ನೀಡಿ, ಆಂಬುಲೆನ್ಸ್ ಹಾಗೂ ಪೊಲೀಸ್‌ಗೆ ಮಾಹಿತಿ ನೀಡಬೇಕು. ಟ್ರಾಫಿಕ್ ಜಾಮ್‌ನಲ್ಲಿ ಆಂಬುಲೆನ್ಸ್ ಸಿಲುಕಿಕೊಂಡು ಗಾಯಾಳುಗಳು ಸಾವನ್ನಪ್ಪಿರುವ ಉದಾಹರಣೆಗಳಿವೆ. ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ಪ್ರತಿಯೊಬ್ಬರೂ ಸಹಕರಿಸಬೇಕು. ಮುಖ್ಯವಾಗಿ ಮದ್ಯಪಾನ ಮಾಡಿ ಅಥವಾ ಅಜಾಗರೂಕತೆಯಿಂದ ವೇಗವಾಗಿ ಚಾಲನೆ ಮಾಡುವುದೇ ಅಪಘಾತಕ್ಕೆ ಕಾರಣ ಎಂಬ ಅರಿವು ಪ್ರತಿಯೊಬ್ಬರಿಗೂ ಇರಬೇಕೆಂದು ಜಾಗೃತಿ ಕಾರ್ಯಕ್ರಮದಲ್ಲಿ ಮನದಟ್ಟು ಮಾಡಿಕೊಡಲಾಯಿತು.

ಆಸ್ಪತ್ರೆಯ ತುರ್ತು ವೈದ್ಯಕೀಯ ವಿಭಾಗದ ಡಾ.ಅಮೀನಾ ಹುಸ್ನಾ ಅವರು, ದಿನದ 24 ಗಂಟೆ ಸೇವೆ ನೀಡುವ ತುರ್ತು ವಿಭಾಗದಲ್ಲಿ ಸಾಕಷ್ಟು ಗಂಭೀರ ಪ್ರಕರಣಗಳನ್ನು ವೈದ್ಯರು ನೋಡುತ್ತಿರುತ್ತಾರೆ. ಅತೀ ವೇಗ, ಡ್ರಂಕ್ ಅಂಡ್ ಡ್ರೈವ್, ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತವಾಗಿ ಸಾವು–ನೋವು ಸಂಭವಿಸುತ್ತಿವೆ. ಮತ್ತೊಂದೆಡೆ ರೋಗಿಗಳನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸುವ ಆಂಬುಲೆನ್ಸ್‌ಗೆ ದಾರಿ ಸಿಗದ ಕಾರಣದಿಂದಲೂ ಅದೆಷ್ಟೋ ರೋಗಿಗಳ ಸ್ಥಿತಿ ಗಂಭೀರವಾಗಿರುತ್ತದೆ ಎಂದು ತಿಳಿಸಿ, ಅಪಘಾತ ಸಂಭವಿಸಿದ ಕೂಡಲೇ ಗಾಯಾಳುಗಳ ಜೀವ ಉಳಿಸಲು ಸಾರ್ವಜನಿಕರು ಅನುಸರಿಸಬಹುದಾದ ಪ್ರಾಥಮಿಕ ಕ್ರಮಗಳ ಬಗ್ಗೆ ವಿವರಿಸಿದರು.

ಜಾಗ್ರತೆ ಮತ್ತು ಸಂಚಾರ ನಿಯಮ ಪಾಲನೆಯಿಂದ ಅಪಘಾತಗಳನ್ನು ತಡೆಯಬಹುದು. ಅಪಘಾತ ಸಂಭವಿಸಿದಾಗ ಗೋಲ್ಡನ್ ಅವರ್‌ನಲ್ಲಿ ತುರ್ತು ಚಿಕಿತ್ಸೆ ದೊರೆತರೆ ಜೀವ ಉಳಿಸಬಹುದು. ರಸ್ತೆಂಯಲ್ಲಿ ಕಳೆಯುವ ಪ್ರತಿ ಕ್ಷಣವೂ ಗಾಯಾಳುಗಳ ಸ್ಥಿತಿಯನ್ನು ಗಂಭೀರಗೊಳಿಸುತ್ತವೆ. ಆದ್ದರಿಂದ ತುರ್ತು ಚಿಕಿತ್ಸೆ ಲಭ್ಯವಾಗುವಲ್ಲಿ ಸಾರ್ವಜನಿಕರ ಸಹಕಾರ ಬಹಳ ಮುಖ್ಯವಾಗಿರುತ್ತದೆ. ಜಾಗರೂಕ ಚಾಲನೆಯಿಂದ ಅಪಘಾತ ತಪ್ಪಿಸುವ ಪ್ರಯತ್ನದ ಜೊತೆಗೆ ಇತರೆ ಕಾರಣದಿಂದ ಅಪಘಾತ ಸಂಭವಿಸಿದಾಗ ತಕ್ಷಣ ಸೂಕ್ತ ರೀತಿಯಲ್ಲಿ ಸಹಕರಿಸುವ ಬಗ್ಗೆ ತಿಳುವಳಿಕೆ ಹೊಂದಿರಬೇಕು ಎಂದರು.

ವಿಶೇಷ ತಂಡ: ಆಸ್ಪತ್ರೆ ನಿರ್ದೇಶಕ ಪ್ರಮೋದ್ ಕುಂದರ್ ಮಾತನಾಡಿ, ಮೈಸೂರಿನ ಮಣಿಪಾಲ್ ಆಸ್ಪತ್ರೆಯು ತುರ್ತು ಸನ್ನದ್ಧತೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಜೀವ ರಕ್ಷಣೆಗೆ ಬದ್ಧವಾಗಿದೆ. ಆಸ್ಪತ್ರೆಯ ಹೊರಗೂ ತುರ್ತು ಸೇವೆ ಕಲ್ಪಿಸುವ ಉದ್ದೇಶದಿಂದ ವಿಶೇಷ ತರಬೇತಿ ಪಡೆದ ಸಿಬ್ಬಂದಿ ತಂಡಗಳು ಸುಸಜ್ಜಿತ ಆಂಬುಲೆನ್ಸ್‌ಗಳೊಂದಿಗೆ ಸಜ್ಜಾಗಿರುತ್ತವೆ. ಪ್ರತಿ ನಿಮಿಷವೂ ಅಮೂಲ್ಯವಾಗಿರುವುದರಿಂದ ವೇಗವಾಗಿ ಸೇವೆ ನೀಡಲಾಗುತ್ತಿದೆ. ಜೀವ ಉಳಿಸುವ ನಿಟ್ಟಿನಲ್ಲಿ ಚಿಕಿತ್ಸೆ ಜೊತೆಗೆ ಜನರಿಗೆ ತಿಳುವಳಿಕೆ ನೀಡುವುದೂ ಬಹಳ ಮುಖ್ಯವೆಂದು ಈ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಎಲ್ಲರ ಜವಾಬ್ದಾರಿ: ಎನ್‌ಆರ್ ಸಂಚಾರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸಿದ್ಧೇಶ್ ಮಾತನಾಡಿ, ರಸ್ತೆ ಸುರಕ್ಷತೆ ಕೇವಲ ನಿಯಮಗಳಿಂದ ಸಾಧ್ಯವಾಗುವುದಿಲ್ಲ. ಅದು ರಸ್ತೆಗಿಳಿಯುವ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ ನಡವಳಿಕೆಯಿಂದ ಮಾತ್ರ ಸಾಧ್ಯ. ಸಂಚಾರ ನಿಯಮ ಪಾಲಿಸುವುದು, ಜಾಗರೂಕತೆಯಿಂದ ಚಾಲನೆ ಮಾಡುವುದು, ಆಂಬುಲೆನ್ಸ್ ಸಂಚಾರಕ್ಕೆ ದಾರಿ ನೀಡುವುದು, ಇಂತಹ ಪರಿಪಾಲನೆಯಿಂದ ಜೀವ ಉಳಿಸಬಹುದು. ಈ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿರುವುದು ಅಭಿನಂದನಾರ್ಹ ಎಂದರು.

ನೆಕ್ಸಸ್ ಮಾಲ್ ನಿರ್ದೇಶಕ ಶ್ರೀಕುಮಾರ್ ಮೋಹನ್, ನಾವು ಆರೋಗ್ಯ ಸಂಸ್ಥೆಗಳೊಂದಿಗೆ ಸೇರಿ ಜೀವ ಉಳಿಸುವ ಜಾಗೃತಿಗೆ ಸಹಾಯ ಮಾಡುತ್ತಿದ್ದೇವೆ ಎಂದರು. ದೆಹಲಿ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲೆ ಶ್ರೀಮತಿ ಮಂಜು ಶರ್ಮಾ, ಚಿಕ್ಕ ವಯಸ್ಸಿನಲ್ಲೇ ರಸ್ತೆ ಸುರಕ್ಷತೆ ಹಾಗೂ ಮಾನವೀಯ ಮೌಲ್ಯಗಳನ್ನು ಕಲಿಸುವ ಮೂಲಕ ಜವಾಬ್ದಾರಿಯುತ ಮತ್ತು ಅನುಕಂಪದ ಸಮಾಜ ನಿರ್ಮಿಸಬೇಕಿದೆ ಎಂದರು.

ಇದೇ ವೇಳೆ ಶಾಲಾ ಮಕ್ಕಳು ಕಿರುನಾಟಕದ ಮೂಲಕ ಜವಾಬ್ದಾರಿಯುತ ವಾಹನ ಚಾಲನೆ, ನಿಯಮ ಪಾಲನೆ, ತುರ್ತು ಸಮಯದಲ್ಲಿ ಅನುಸರಿಸಬೇಕಾದ ಕ್ರಮ ಹಾಗೂ ಆಂಬುಲೆನ್ಸ್‌ಗೆ ದಾರಿ ನೀಡುವುದರ ಮಹತ್ವವನ್ನು ಮನದಟ್ಟು ಮಾಡಿದರು.

ಕನಕದಾಸ ಹಿತರಕ್ಷಣಾ ಸಮಿತಿಯಿಂದ ಪ್ರತಿಭಾ ಪುರಸ್ಕಾರ



ಮೈಸೂರಿನ ಲೋಕನಾಯಕನಗರದಲ್ಲಿ ನಡೆದ ಶ್ರೀ ಕನಕದಾಸ ಜಯಂತ್ಯೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಮೈಸೂರು, ಡಿ.28– ನಗರದ ಹೆಬ್ಬಾಳ್ ಲೋಕನಾಯಕನಗರದಲ್ಲಿ ಶ್ರೀ ಕನಕದಾಸ ಹಿತರಕ್ಷಣಾ ಸಮಿತಿಯಿಂದ 538ನೇ ಶ್ರೀ ಭಕ್ತ ಕನಕದಾಸರ ಜಯಂತ್ಯೋತ್ಸವ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಪುರಸ್ಕರಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿಭಾ ಪುರಸ್ಕಾರಕ್ಕೆ ಭಾಜನರಾದ ವಿದ್ಯಾರ್ಥಿಗಳು ಮುಂದಿನ ಶಿಕ್ಷಣದಲ್ಲೂ ಅತ್ಯುತ್ತಮ ಸಾಧನೆ ಮಾಡಬೇಕು. ಸಾಧನೆ ಜೊತೆಗೆ ಕುಟುಂಬಕ್ಕೆ ಹೆಗಲಾಗುವುದರ ಜೊತೆಗೆ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕನಕದಾಸ ಹಿತರಕ್ಷಣಾ ಸಮಿತಿ ಅಧ್ಯಕ್ಷ ಬಿ.ಎಸ್. ರಾಜೇಗೌಡ, ನಗರಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮೀ ಶಿವಣ್ಣ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹೇಮಾಶೇಖರ್, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಕರ್ನಾಟಕ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ, ಪುಟ್ಟಬಸವೇಗೌಡ, ಮಂಜೇಗೌಡ, ಕುಮಾರ್ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಮಾದಕ ವಸ್ತುಗಳ ದುಷ್ಪರಿಣಾಮಗಳ ಜಾಗೃತಿ ಓಟ



ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಆಯೋಜಿಸಿದ್ದ ಜಾಗೃತಿ ಓಟದಲ್ಲಿ ಪಾಲ್ಗೊಂಡಿರುವ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು.

ಮೈಸೂರು,ಡಿ.28(ಎಂಟಿವೈ)– ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಿದ್ದ ಜಾಗೃತಿ ಓಟದಲ್ಲಿ ಮೈಸೂರಿನ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದ ಆವರಣದಲ್ಲಿ ಮೈಸೂರು ಅಥ್ಲೆಟಿಕ್ಸ್ ಅಸೋಸಿಯೇಷನ್ ಆಯೋಜಿಸಿದ್ದ ಮಾದಕ ವಸ್ತು ಸೇವನೆ ಜಾಗೃತಿ ಮೂಡಿಸುವ 4 ಕಿ.ಮಿ ಜಾಗೃತಿ ಓಟದಲ್ಲಿ ವಿವಿಧ ಶಾಲಾ–ಕಾಲೇಜುಗಳ 500ಕ್ಕೂ ವಿದ್ಯಾರ್ಥಿಗಳು ಪಾಲ್ಗೊಂಡು ಮಾದಕ ವಸ್ತುಗಳ ವ್ಯಸನಿಗಳಾಗದಂತೆ ಜಾಗೃತಿ ಮೂಡಿಸಿದರು.

ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿ ಭಾನುವಾರ ಬೆಳಗ್ಗೆ ನಡೆದ ಜಾಗೃತಿ ಓಟಕ್ಕೆ ಕೆಪಿಸಿಸಿ ಸದಸ್ಯ ಶ್ರೀನಾಥ್ ಬಾಬು ಚಾಲನೆ ನೀಡಿದರು. ಬಳಿಕ ಆರಂಭವಾದ ಜಾಗೃತಿ ಓಟ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಮುಂಭಾಗದಿಂದ ಬನ್ನೂರು ರಸ್ತೆ, ಸಿಪಿಡಬ್ಲ್ಯುಡಿ ಅತಿಥಿ ಗೃಹದ ಮುಂಭಾಗದಿಂದ ಜ್ಯೋತಿನಗರದ ಪೊಲೀಸ್ ಕ್ವಾರ್ಟರ್ಸ್ ಮೂಲಕ ಸಾಗಿ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣ ತಲುಪಿ ಸಮಾಪ್ತಿಗೊಂಡಿತು. ಜಾಗೃತಿ ಓಟದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ಟಿ–ಶರ್ಟ್ ವಿತರಿಸಲಾಗಿತ್ತು. ಜಾಗೃತಿ ಓಟಕ್ಕೂ ಮುನ್ನ ವಾರ್ಮ್ ಅಪ್ ಮಾಡಿಸಲಾಯಿತು.

ಜ.4ರಂದು ಚಾಮುಂಡಿಬೆಟ್ಟದ ಪರಿಸರ ಸಂರಕ್ಷಣೆಗೆ ಪಾದಯಾತ್ರೆ

ಮೈಸೂರು,ಡಿ.28(ಪಿಎಂ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುವ ಚಟುವಟಿಕೆಗಳು ವ್ಯಾಪಕವಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿರುವ ನಾಗರಿಕರ ಮತ್ತು ಪರಿಸರವಾದಿಗಳ ತಂಡ, ಬೆಟ್ಟದಲ್ಲಿ ವ್ಯಾಪಕವಾಗುತ್ತಿರುವ ನಿರ್ಮಾಣಗಳು, ಸಂಚಾರ ದಟ್ಟಣೆ ಮತ್ತು ವಾಣಿಜ್ಯ ಚಟುವಟಿಕೆಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು 2026ರ ಜ.4ರಂದು ನಾಗರಿಕರ ಪಾದಯಾತ್ರೆ (ಸಿಟಿಜನ್ಸ್ ವಾಕ್) ಹಮ್ಮಿಕೊಂಡಿರುವುದಾಗಿ ತಿಳಿಸಿವೆ.

ಪಾದಯಾತ್ರೆಯು ಅಂದು ಬೆಳಿಗ್ಗೆ 7.30ಕ್ಕೆ ಚಾಮುಂಡಿಬೆಟ್ಟದ ಮೆಟ್ಟಿಲುಗಳ (ಸುತ್ತೂರು ಮಠದ ಸಮೀಪ) ಬಳಿಯಿಂದ ಆರಂಭವಾಗಲಿದೆ. ಪರಿಸರ ಹೋರಾಟಗಾರರು, ಹಿರಿಯ ನಾಗರಿಕರು, ಪರಿಸರ ತಜ್ಞರು, ಶಿಕ್ಷಣ ಸಂಸ್ಥೆಗಳು, ಕಲಾವಿದರು ಹಾಗೂ ಧಾರ್ಮಿಕ ಮುಖಂಡರು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡು ಬೆಟ್ಟದ ಪರಿಸರ ಸಮತೋಲನ ಮತ್ತು ಅದರ ಆಧ್ಯಾತ್ಮಿಕ ಪಾವಿತ್ರ್ಯವನ್ನು ಕಾಪಾಡುವ ಹೋರಾಟಕ್ಕೆ ಬೆಂಬಲ ನೀಡುವಂತೆ ಆಯೋಜಕರು ಮನವಿ ಮಾಡಿದ್ದಾರೆ.

ಆಯೋಜಕರ ಪ್ರಕಾರ ಧಾರ್ಮಿಕ, ಪರಿಸರ ಮತ್ತು ಭೌಗೋಳಿಕ ಮಹತ್ವ ಹೊಂದಿರುವ ಚಾಮುಂಡಿಬೆಟ್ಟವು ನಿಯಂತ್ರಣವಿಲ್ಲದ ಕಟ್ಟಡ ನಿರ್ಮಾಣಗಳು, ವಾಹನ ದಟ್ಟಣೆ ಮತ್ತು ವಾಣಿಜ್ಯ ಚಟುವಟಿಕೆಗಳಿಂದಾಗಿ ಭಾರೀ ಒತ್ತಡಕ್ಕೆ ಒಳಗಾಗಿದೆ. ಪ್ರಸಾದ್ ಯೋಜನೆಯಡಿಯ ಉದ್ದೇಶಿತ ಅಭಿವೃದ್ಧಿ ಕಾಮಗಾರಿಗಳಿಂದ ಉಂಟಾಗುವ ಹಾನಿ ಬಗ್ಗೆಯೂ ಚಿಂತನೆ ಅಗತ್ಯವಾಗಿದೆ.

ಬೆಟ್ಟದ ಯಾವುದೇ ಅಭಿವೃದ್ಧಿ ಕಾರ್ಯಗಳು ವೈಜ್ಞಾನಿಕ ಅಧ್ಯಯನಗಳ ಆಧಾರದಲ್ಲಿ ಹಾಗೂ ಸಂರಕ್ಷಣೆಗೆ ಮೊದಲ ಆದ್ಯತೆ ನೀಡುವ ದೃಷ್ಟಿಕೋನದೊಂದಿಗೆ ನಡೆಯಬೇಕೆಂದು ಅವರು ಒತ್ತಾಯಿಸಿದ್ದಾರೆ. ರಸ್ತೆ ಅಗಲೀಕರಣ, ಒಳಚರಂಡಿ ವ್ಯವಸ್ಥೆಯ ಬದಲಾವಣೆಗಳು ಹಾಗೂ ನಿಯಂತ್ರಣವಿಲ್ಲದ ಕಟ್ಟಡ ನಿರ್ಮಾಣದಿಂದ ಇತ್ತೀಚಿನ ವರ್ಷಗಳಲ್ಲಿ ಬೆಟ್ಟದ ಕೆಲವು ಭಾಗಗಳಲ್ಲಿ ಭೂಕುಸಿತಗಳು ಸಂಭವಿಸಿರುವುದಾಗಿ ಪರಿಸರ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಪ್ಲಾಸ್ಟಿಕ್ ಮಾಲಿನ್ಯವೂ ಮತ್ತೊಂದು ದೊಡ್ಡ ಸಮಸ್ಯೆಯಾಗಿ ಉಳಿದಿದ್ದು, ಬಾಟಲಿ, ಚೀಲಗಳು ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಬೆಟ್ಟದಲ್ಲಿ ಸಂಗ್ರಹವಾಗುತ್ತಿದೆ ಇಂತಹ ತ್ಯಾಜ್ಯಗಳು ನೀರಿನ ಹರಿವಿನ ಕಾಲುವೆಗಳನ್ನು ತಡೆದು, ಮಣ್ಣಿನ ನೀರು ಹೀರಿಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತಿದ್ದು, ಮಣ್ಣು ಕುಸಿತಕ್ಕೆ ಕಾರಣವಾಗುತ್ತಿದೆ ಎಂದು ಪರಿಸರ ಕಾರ್ಯಕರ್ತರು ತಿಳಿಸಿದ್ದಾರೆ.

ಆಗಾಗ್ಗೆ ಸ್ವಚ್ಛತಾ ಕಾರ್ಯಾಚರಣೆ ನಡೆಸಿಯೂ ಸಮಸ್ಯೆ ತೀವ್ರವಾಗಿಯೇ ಮುಂದುವರಿದಿದೆ. ಅಕ್ರಮ ಕಟ್ಟಡಗಳು ಮತ್ತು ಒತ್ತುವರಿಗಳು ಬೆಟ್ಟದ ಪರಿಸರಕ್ಕೆ ಮಾರಕವಾಗುತ್ತಿದ್ದು, ಇದು ವನ್ಯಜೀವಿಗಳ ಸಂಚಾರಕ್ಕೂ ಅಡಚಣೆ ಉಂಟು ಮಾಡಿದೆ. ಜೊತೆಗೆ ಒಳಚರಂಡಿ ನೀರು ನೈಸರ್ಗಿಕ ಚರಂಡಿಗಳಲ್ಲಿ ಸೇರಿ ಮಣ್ಣು ಮತ್ತು ಜಲಮೂಲಗಳನ್ನು ಕಲುಷಿತಗೊಳಿಸುವಂತಹ ಸನ್ನಿವೇಶ ನಿರ್ಮಾಣವಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಅರ್ಚಕರು, ಆಗಮಿಕರು, ಜ್ಯೋತಿಷಿಗಳ ಕ್ರಿಕೆಟ್ ಪಂದ್ಯಾವಳಿ: ಮೈಸೂರಿನ ನವಗ್ರಹ ತಂಡಕ್ಕೆ ಟ್ರೋಫಿ



ಮೈಸೂರಿನ ನವಗ್ರಹ ತಂಡವು ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು.

ಮೈಸೂರು, ಡಿ.28(ಎಸ್‌ಪಿಎನ್)– ಮೈಸೂರು ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಅರ್ಚಕರು, ಆಗಮಿಕರು ಹಾಗೂ ಜ್ಯೋತಿಷಿ ಅವರನ್ನೊಳಗೊಂಡ ಕ್ರಿಕೆಟ್ ಪಂದ್ಯಾವಳಿ ಮತ್ತು ಮನರಂಜನೆ ಕಾರ್ಯಕ್ರಮವನ್ನು ಭಾನುವಾರ ಏರ್ಪಡಿಸಲಾಗಿತ್ತು.

ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ರಾಜ್ಯದ ವಿವಿಧೆಡೆಯಿಂದ ಒಟ್ಟು 10 ತಂಡಗಳು ಆಗಮಿಸಿದ್ದವು. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ತಂಡವು ಅಂತಿಮವಾಗಿ ಸೆಣಸಾಡಿ ಮೈಸೂರಿನ ನವಗ್ರಹ ತಂಡವು ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು. ಮೈಸೂರಿನ ನವಗ್ರಹ ಕ್ರಿಕೆಟ್ ತಂಡಕ್ಕೆ 20 ಸಾವಿರ ರೂ. ನಗದು ಬಹುಮಾನ ಹಾಗೂ ಟ್ರೋಫಿಯನ್ನು ತಮ್ಮದಾಗಿಸಿಕೊಂಡರೆ, ಮಂಡ್ಯ ಬಾಯ್ಸ್ ತಂಡವು 10 ಸಾವಿರ ನಗದು ಬಹುಮಾನ ಪಡೆದು ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟಿಕೊಂಡಿತು. ಸರಣಿ ಶ್ರೇಷ್ಠ ಬಹುಮಾನವನ್ನು ನವಗ್ರಹ ತಂಡದ ಡಾಲಿ(ದೇವು) ಪಡೆದುಕೊಂಡರು. ಈ ಟ್ರೋಫಿಯನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಿತರಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದ ಎಂ.ಎಸ್ ಮಹದೇವಸ್ವಾಮಿ, ಮಂಜುನಾಥ ಟ್ರೇಡರ್ಸ್ ಮಾಲೀಕ ಓಂ ಪ್ರಕಾಶ್, ದಂತ ವೈದ್ಯ ಮಹದೇವಸ್ವಾಮಿ, ಹೈಕೋರ್ಟ್ ವಕೀಲ ಎಚ್.ಆರ್. ನಾರಾಯಣ್, ಪೋಷಕ ನಟ ಶಿವಾಜಿ ರಾವ್ ಜಾದವ್, ಶಿವರಾಜೇಗೌಡ, ಎಂ.ಜಿ.ಆರ್.ಅರಸ್, ಭಜರಂಗಿ ಉಮೇಶ್, ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ತಿಲಕ್ ಗುರುಪಾಲ, ಕಿರಾಳು ಮಹೇಶ್, ಸೋಮಶೇಖರ್ ಪೂಜಾರ್, ಚಂದ್ರಶೇಖರ್, ಗಿರೀಶ್ (ಆಪಲ್), ಹರವೆ ಸಿದ್ದು, ರಜತ್, ದೇವಿಕಾ ಶಿವಣ್ಣ ಮತ್ತಿತರು ಉಪಸ್ಥಿತರಿದ್ದರು.



